ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com


ಸಂಪುಟ 7 ಸಂಚಿಕೆ 06

ಫೆಬ್ರವರಿ 10, 2013

ಪುಟ 16 ರೂ. 10/-



ಉತ್ಸಾಹಭರಿತ ಸಿಐಟಿಯು 12ನೇ ಯಶಸ್ವಿ ರಾಜ್ಯ ಸಮ್ಮೇಳನ



"ಬೆಲೆ ಏರಿಕೆ, ಖಾಸಗೀಕರಣ, ಗುತ್ತಿಗೀಕರಣ ನೀತಿಗಳ ವಿರುದ್ಧ ಆಳುವವರಿಗೆ ಕಾರ್ಮಿಕ ವರ್ಗವೇ ಸವಾಲೆಸೆಯುವ ಶಕ್ತಿ" - ತಪನ್‌ಸೆನ್

ಬಿಜೆಪಿ ಸರ್ಕಾರ ರಾಜಿನಾಮೆ ನೀಡಲಿ



ಮಹಾತ್ಮ ಗಾಂಧಿ ಮತ್ತು ಅಮಾಯಕರ ಆಹುತಿ ಪಡೆದ ಭಯೋತ್ಪಾದನೆಯ ಈ ಪಿಡುಗು



7ನೇ ಗೆಲುವಿನತ್ತ ತ್ರಿಪುರ ಎಡರಂಗದ ದಾಪುಗಾಲು

ಮಾಲಿಯಲ್ಲಿ ಫ್ರೆಂಚ್ ಮಿಲಿಟರಿ ಅತಿಕ್ರಮಣ ಇನ್ನೊಂದು ಲಿಬ್ಯಾ ?



'ವಿಶ್ವರೂಪಂ' ವಿರುದ್ಧ ವೃಥಾ ಅಸಹನೆ

7ನೇ ಗೆಲುವಿನತ್ತ ತ್ರಿಪುರ ಎಡರಂಗದ ದಾಪುಗಾಲು

ಫೆಬ್ರವರಿ 14, 2013 ರಂದು ತ್ರಿಪುರಾದ 9ನೇ ವಿಧಾನಸಭಾ ಚುನಾವಣೆ ನಡೆಯಲಿದೆ. ಬುಡಕಟ್ಟು ಜನರು ಗಣನೀಯ ಸಂಖ್ಯೆಯಲ್ಲಿರುವ ತ್ರಿಪುರಾದಲ್ಲಿ ಸತತವಾಗಿ 4 ನೇ ಬಾರಿಗೆ ಒಟ್ಟಾರೆ 7 ನೇ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಗೆಲುವು ಸಾಧಿಸುವುದು ಬಹುತೇಕ ಖಚಿತವಾದಂತಿದೆ.

ತ್ರಿಪುರ ಈಶಾನ್ಯ ಭಾರತದ ಪುಟ್ಟ ರಾಜ್ಯ. ಇದರ ಸುತ್ತ ಬಹುಭಾಗ ಬಾಂಗ್ಲಾದೇಶ ಆವರಿಸಿಕೊಂಡಿದೆ. ಸ್ವಾತಂತ್ರ್ಯ ಪೂರ್ವಕಾಲದಲ್ಲೇ ನೃಪೇನ್ ಚಕ್ರವರ್ತಿ, ದಶರಥದೇಬ್ ಮತ್ತು ಬಿರೇನ್ ದತ್ತ ಮುಂತಾದವರ ನೇತೃತ್ವದಲ್ಲಿ ತ್ರಿಪುರಾದ ಬುಡಕಟ್ಟು ಜನರನ್ನು ಸಂಘಟಿಸಲು, ಮತ್ತು ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ನಡುವೆ ಐಕ್ಯತೆ ಬೆಸೆಯುವ ನಿಟ್ಟಿನಲ್ಲಿ ಕಮ್ಯೂನಿಸ್ಟ್ ಚಳುವಳಿ ನಿರಂತರ ಶ್ರಮಿಸಿದೆ.

1978 ರಿಂದ ತ್ರಿಪುರಾದಲ್ಲಿ ಎಡರಂಗ ಸರ್ಕಾರ ಅಧಿಕಾರ ನಡೆಸುತ್ತಿದ್ದು ಮೊದಲ ಎರಡು ಭಾರಿಗೆ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರ ತ್ರಿಪುರಾದಲ್ಲಿ ಭೂಹೀನರಿಗೆ ಭೂಮಿ ವಿತರಿಸುವ ಸಮಗ್ರ ಭೂಸುಧಾರಣೆಯನ್ನು ಜಾರಿಗೆ ತಂದಿತು. ಮತ್ತು ಸಂವಿಧಾನದ 6ನೇ ಪಟ್ಟಿಯನ್ವಯ ಅತಿಹೆಚ್ಚು ಬುಡಕಟ್ಟು ಜನರಿರುವ ಪ್ರದೇಶಗಳನ್ನು ಸ್ವಾಯತ್ತತಾ ಜಿಲ್ಲೆಗಳನ್ನಾಗಿ ಮಾಡಿತು. 1988 ರ ಚುನಾವಣೆಯಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ರಾಜೀವ್ ಗಾಂಧಿ ನೇತೃತ್ವದ ಸರ್ಕಾರದಿಂದ ಸಹಾಯ ಪಡೆದ ಕಾಂಗ್ರೆಸ್ ಪತ್ಯೇಕತಾವಾದಿ ಛಿದ್ರಕಾರಿ ಶಕ್ತಿಗಳೊಂದಿಗೆ ಶಾಮೀಲಾಗಿ ಹಿಂಸಾ ವಿಧಾನದಿಂದ ಅಧಿಕಾರದ ಚುಕ್ಕಾಣಿ ಹಿಡಿಯಿತು. ಅಲ್ಲಿಂದ 1993 ರವರೆಗೆ ಕಾಂಗ್ರೆಸ್‌ನ ಆಡಳಿತದಲ್ಲಿ ತ್ರಿಪುರಾದ ಜನತೆ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಎದುರಿಸಬೇಕಾಗಿ ಬಂತು. ಈ ಸಂದರ್ಭದಲ್ಲಿ ತ್ರಿಪುರಾದಲ್ಲಿ ನೂರಾರು ಜನ ಸಿಪಿಐ(ಎಂ)ನ ಕಾರ್ಯಕರ್ತರು ಮತ್ತು ಹಿತೈಶಿಗಳನ್ನು ಕೊಲ್ಲಲಾಯಿತು. ಇದನ್ನೆಲ್ಲ ಎದುರಿಸಿ ಕಾಂಗ್ರೆಸ್ ಅನ್ನು ಸೋಲಿಸುವ ಮೂಲಕ 1993 ಮಾರ್ಚ್‌ನಲ್ಲಿ ಎಡರಂಗವನ್ನು ಜನತೆ ಮತ್ತೆ ಜನತೆ ಅಧಿಕಾರಕ್ಕೆ ತಂದರು. ಅಲ್ಲಿಂದ ಇಲ್ಲಿಯವರೆಗೆ ನಡೆದ 1998, 2003, 2008ರ ಚುನಾವಣೆಗಳಲ್ಲಿ ಎಡರಂಗ ನಿರಂತರವಾಗಿ ಗೆಲುವನ್ನು ಸಾಧಿಸಿದೆ.

ತ್ರಿಪುರ ನಿರಂತರಾಗಿ ತೀವ್ರಗಾಮಿ ಬಂಡುಕೋರರ ದಾಳಿಗಳನ್ನು ಎದುರಿಸುತ್ತ ಬಂದ ರಾಜ್ಯವಾಗಿದೆ. ಜೊತೆಗೆ ಸಾಮ್ರಾಜ್ಯಶಾಹಿ ಶಕ್ತಿಗಳ ಕುಮ್ಮಕ್ಕಿನಿಂದ ಮತ್ತು ಯಥೇಚ್ಛವಾಗಿ ಹರಿದುಬರುತ್ತಿರುವ ವಿದೇಶಿ ಹಣಕಾಸಿನ ನೆರವು ಜೊತೆಗೆ ಪಾಕಿಸ್ತಾನದ ಐಎಸ್‌ಐನ ಕುತಂತ್ರದಿಂದ ತ್ರಿಪುರಾದ ಕೆಲವು ಬುಡಕಟ್ಟು ಗುಂಪುಗಳು ಪ್ರತ್ಯೇಕತೆಗೆ ಆಗ್ರಹಿಸುತ್ತಿವೆ. ಇದರ ವಿರುದ್ಧ ತ್ರಿಪುರಾ ಮತ್ತು ದೇಶದ ಐಕ್ಯತೆಗಾಗಿ ಪಣತೊಟ್ಟು ನಿಂತಿರುವ ಸಿಪಿಐ(ಎಂ) ಕಳೆದ 3 ದಶಕಗಳಲ್ಲಿ ತನ್ನ ನೂರಾರು ಬುಡಕಟ್ಟು ಕಾರ್ಯಕರ್ತರನ್ನು ಮತ್ತು ಹಿತೈಶಿಗಳನ್ನು ಕಳೆದುಕೊಂಡಿದೆ.

ತ್ರಿಪುರದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರತ್ಯೇಕತಾವಾದವನ್ನು ಎದುರಿಸುವ ನಿಟ್ಟಿನಲ್ಲಿ ಎಡರಂಗ ಸರ್ಕಾರ ಕೆಲವು ಪ್ರಮುಖ ಕ್ರಮಗಳನ್ನು ಕೈಗೊಂಡಿದೆ. ಅದರಲ್ಲಿ ಮೊದಲನೆಯದು ತ್ರಿಪುರಾದಲ್ಲಿ ಹಂಚಿಹೋಗಿದ್ದ ಬುಡಕಟ್ಟು ಗುಂಪುಗಳನ್ನು ಒಂದು ಮಾಡುವ ಕೆಲಸ. ಎರಡನೆಯದು ರಾಜ್ಯದ ಪೋಲೀಸ್ ವ್ಯವಸ್ಥೆಯನ್ನು ಬಲಗೊಳಿಸಿ ಬಂಡುಕೋರರನ್ನು ನಿಯಂತ್ರಿಸುತ್ತಿರುವುದು. ಮೂರನೆಯದಾಗಿ ರಾಜ್ಯಾದ್ಯಂತ ಅಭಿವೃದ್ಧಿ ಮತ್ತು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಬುಡಕಟ್ಟು ಜನರ ನಡುವೆ ಇದ್ದ ಗಲಭೆಗಳನ್ನು ನಿಯಂತ್ರಿಸಿರುವುದು. ಈಗ ತ್ರಿಪುರ ಅತ್ಯಂತ ಶಾಂತಿ ಮತ್ತು ಸೌಹಾರ್ದತೆಯ ರಾಜ್ಯವಾಗಿ ಮಾರ್ಪಟ್ಟಿದೆ. ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮಣಿಪುರ, ಮೇಘಾಲಯ, ನಾಗಾಲ್ಯಾಂಡ್‌ಗಳಿಗೆ ಹೋಲಿಸಿದರೆ ಎಲ್ಲ ಕ್ಷೇತ್ರಗಳಲ್ಲೂ ತ್ರಿಪುರ ಪ್ರಗತಿಯನ್ನು ಸಾಧಿಸಿದ್ದು ಇದಕ್ಕೆ ಆಡಳಿತರೂಢ ಎಡರಂಗ ಸರ್ಕಾರದ ಕೊಡುಗೆ ಅಪಾರವಾಗಿದೆ.

ಮುಖ್ಯಮಂತ್ರಿ ಮಾಣಿಕ್ ಸರ್ಕಾರವರ ನಾಯಕತ್ವದಲ್ಲಿ ಅಧಿಕಾರ ನಡೆಸುತ್ತಿರುವ ಎಡರಂಗ ಸರ್ಕಾರ ದಕ್ಷ ಆಡಳಿತ ಮತ್ತು ಅಭಿವೃದ್ಧಿ ಮತ್ತು ಜನಪರ ಕಾರ್ಯಕ್ರಮಗಳಲ್ಲಿ ಅಪಾರ ಸಾಧನೆಗಳನ್ನು ಮಾಡಿದೆ. 2001ರ ಜನಗಣತಿಯ ಪ್ರಕಾರ ಸಾಕ್ಷರತೆಯಲ್ಲಿ 11 ನೇ ಸ್ಥಾನದಲ್ಲಿದ್ದ ತ್ರಿಪುರ 2011 ರ ಜನಗಣತಿ ಪ್ರಕಾರ ಶೇಕಡ 88 ರಷ್ಟು ಸಾಕ್ಷರತೆಯನ್ನು ಸಾಧಿಸಿ ದೇಶದಲ್ಲಿ 4 ನೇ ಸ್ಥಾನದಲ್ಲಿದೆ. ಇಲ್ಲಿ ಕಳೆದ 10 ವರ್ಷದಲ್ಲಿ ರೈತರ ಆತ್ಮಹತ್ಯೆಗಳು ನಡೆದೇ ಇಲ್ಲ.

ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು 2011 ರಲ್ಲಿ ಸಮರ್ಥವಾಗಿ ಜಾರಿಗೊಳಿಸಿದ ದೇಶದ ಮೊದಲ ಸ್ಥಾನದಲ್ಲಿ ತ್ರಿಪುರ ನಿಂತಿದ್ದು ವಾರ್ಷಿಕ ಸರಾಸರಿ 86 ದಿನಗಳ ಕೆಲಸಗಳನ್ನು ನೀಡಿದೆ. ಅರಣ್ಯ ಹಕ್ಕು ಕಾಯ್ದೆ 2012 ರ ಅನ್ವಯ ರಾಜ್ಯದಲ್ಲಿ 1,19,342 ಬುಡಕಟ್ಟು ಜನರಿಗೆ ಭೂಮಿಯ ಪಟ್ಟಾಗಳನ್ನು ನೀಡಲಾಗಿದೆ. ಮತ್ತು ರಾಜ್ಯದ ಬಿಪಿಎಲ್ ವ್ಯಾಪ್ತಿಗೆ ಬರುವವರೆಲ್ಲರಿಗೂ ಅನುಕೂಲವಾಗುವಂತೆ 16 ನಿವೃತ್ತಿ ವೇತನದ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಶೇಕಡ 90 ರಷ್ಟು ಕುಟುಂಬಗಳಿಗೆ ವಿದ್ಯುತ್ ಒದಗಿಸಲಾಗಿದೆ. ಶೇಕಡ 90 ರಷ್ಟು ಕೃಷಿ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗಿದೆ.



ರಾಜ್ಯದ ಎಲ್ಲ ಬಿಪಿಎಲ್ ಕುಟುಂಬಗಳಿಗೂ 2 ರೂ ದರದಲ್ಲಿ 35 ಕೆ.ಜಿ ಅಕ್ಕಿಯನ್ನು ನೀಡುವಂತಹ ಮಹತ್ತರವಾದ ಯೋಜನೆಯನ್ನು ಪ್ರಸ್ತುತ ಎಡರಂಗ ಸರ್ಕಾರ ಜಾರಿಗೆ ತಂದಿದೆ. ರಾಜ್ಯದ 2 ಲಕ್ಷ ಬಡಕುಟುಂಬಗಳು ಇದರ ಲಾಭವನ್ನು ಪಡೆಯುತ್ತಿವೆ. ಉಳಿದ ಈಶಾನ್ಯ ರಾಜ್ಯಗಳಲ್ಲಿ ಅಕ್ಕಿಯನ್ನು ಕಿ.ಲೋ.ಗೆ 5–6 ರೂಗೆ ಮಾರಾಟ ಮಾಡುತ್ತಿದ್ದರೂ ಇದರ ದುಬಾರಿ ಸಾರಿಗೆ ವೆಚ್ಚವನ್ನು ಸಂಪೂರ್ಣವಾಗಿ ತ್ರಿಪುರ ರಾಜ್ಯ ಸರ್ಕಾರವೇ ಭರಿಸಿ 2 ರೂ.ಗೆ ಅಕ್ಕಿಯನ್ನು ವಿತರಿಸುತ್ತಿದೆ. ಎಡರಂಗ ಸರ್ಕಾರದ ಈ ನಿರ್ಧಾರವನ್ನು ರಾಜ್ಯದ ಎಲ್ಲ ವಿಭಾಗದ ಜನರೂ ಸ್ವಾಗತಿಸಿದ್ದಾರೆ.

ರಾಜ್ಯದ 60 ವಿಧಾನ ಸಭಾ ಕ್ಷೇತ್ರಗಳಿಗೂ (20 ಕ್ಷೇತ್ರಗಳು ಪರಿಶಿಷ್ಟ ಪಂಗಡಕ್ಕೆ ಮೀಸಲು) ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಎಡರಂಗವು ಘೋಷಣೆಮಾಡಿದ್ದು ಅವರಲ್ಲಿ ಸಿಪಿಐ(ಎಂ)–55, ಸಿಪಿಐ–2, ಆರ್‌ಎಸ್‌ಪಿ–2 ಮತ್ತು ಫಾರ್ವರ್ಡ್ ಬ್ಲಾಕ್–1 ಸ್ಥಾನಗಳಿಗೆ ಸ್ಪರ್ಧಿಸಲಿವೆ.

ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದು ರಾಜ್ಯದ ಬಂಡುಕೋರ ಐಎನ್‌ಪಿಟಿ ಮತ್ತು ಟಿಯುಜೆಎಸ್‌ನೊಂದಿಗೆ ಸಂಬಂಧವಿರುವ ವಿವಿಧ ಬುಡಕಟ್ಟು ಸಂಘಟನೆಗಳೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ನಡೆದ ಕಚ್ಚಾಟಗಳು ಬಯಲಾಗಿವೆ. ಈ ಹೊಂದಾಣಿಕೆಯ ಮೂಲಕ ರಾಜ್ಯದಲ್ಲಿ ಮತ್ತೊಮ್ಮೆ ಬುಡಕಟ್ಟು ಜನರ ನಡುವೆ ಒಡಕನ್ನು ತರುವ ಮತ್ತು ಛಿದ್ರಕಾರಿ ಶಕ್ತಿಗಳ ಬೆಳವಣಿಗೆಗೆ ಕಾಂಗ್ರೆಸ್ ಅವಕಾಶ ಕಲ್ಪಿಸಿದಂತಾಗಿದೆ.

ರಾಜ್ಯದ ಐಕ್ಯತೆ, ಶಾಂತಿ, ಪ್ರಗತಿ ಮತ್ತು ಅಭಿವೃದ್ಧಿಗಾಗಿ ನಿರಂತರ ಶ್ರಮಿಸುತ್ತಿರುವ ಎಡರಂಗವನ್ನು ಮತ್ತೆ ಅಧಿಕಾರಕ್ಕೆ ತರಲು ತ್ರಿಪುರಾದ ಜನತೆ ಒಕ್ಕೊರಲಿನಿಂದ ಅಣಿಯಾಗುತ್ತಿದ್ದು ಅದರಲ್ಲೂ ಯುವಜನತೆಯ ಉತ್ಸಾಹ ಮುಗಿಲು ಮುಟ್ಟುತ್ತಿದೆ.

ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುವ ಯಾವುದೇ ರೀತಿಯ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ತಕ್ಷಣ ಪೋಲೀಸರು ಮಧ್ಯಪ್ರವೇಶಿಸಿ ಮಹಿಳೆಯರಿಗೆ ನ್ಯಾಯ ಒದಗಿಸಿಕೊಡುವಂತೆ ಕಠಿಣ ಆದೇಶ ನೀಡಲಾಗಿದೆ. ಅದಕ್ಕಾಗಿಯೇ ವಿಶೇಷ ಮಹಿಳಾ ಪೋಲೀಸ್ ಠಾಣೆಗಳನ್ನು ತೆರೆಯಲಾಗಿದ್ದು ರಾಜ್ಯದ ಎಲ್ಲ ಕುಟುಂಬ ನ್ಯಾಯಾಲಯಗಳಲ್ಲೂ ಪ್ರತ್ಯೇಕ ಮಹಿಳಾ ಪೀಠಗಳನ್ನು ಪ್ರಾರಂಭಿಸಲಾಗಿದ್ದು ಕೇಸುಗಳನ್ನು ತ್ವರಿತ ವಿಲೇವಾರಿ ಮಾಡುವಂತೆ ಆದೇಶಿಸಲಾಗಿದೆ. ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಮದುವೆಯಾಗದೆ 45 ವರ್ಷವಾಗಿರುವ ಮಹಿಳೆಯರಿಗೆ ಮತ್ತು ಕುಟುಂಬದಲ್ಲಿರುವ ಎರಡು ಹೆಣ್ಣು ಮಕ್ಕಳಿಗೆ ಸಾಮಾಜಿಕ ಭದ್ರತೆಯ ಜಾಲವೊಂದನ್ನು ನಿರ್ಮಿಸಲಾಗಿದೆ. ಜೊತೆಗೆ ಮಹಿಳೆಯರು ಸ್ಥಾಪಿಸಿಕೊಂಡಿರುವ ಸ್ವಸಹಾಯ ಗುಂಪುಗಳಿಗೆ ತಲಾ 50,000 ರೂ ಪ್ರೋತ್ಸಾಹ ಧನವನ್ನು ಕೊಡಲಾಗುತ್ತಿದ್ದು ಈ ರೀತಿಯ ವ್ಯವಸ್ಥೆಯನ್ನು ದೇಶದ ಉಳಿದ ಯಾವುದೇ ರಾಜ್ಯಗಳಲ್ಲೂ ಕಾಣಲು ಸಾಧ್ಯವಿಲ್ಲ ಎಂದರು.

ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಮತ್ತು ಗುಜರಾತ್‌ನಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಟಿಂಬರ್ ಮಾಫಿಯಾಗೆ ಮಣಿದು ಅಲ್ಲಿರುವ ಆದಿವಾಸಿಗಳನ್ನು ಕಾಡುಗಳಿಂದ ಒಕ್ಕಲೆಬ್ಬಿಸುವ ಮತ್ತು ಅದರ ವಿರುದ್ಧ ಧನಿ ಎತ್ತಿದವರನ್ನು ಜೀವಂತ

ಪುಟ 4ಕ್ಕೆ

ಸಂಪಾದಕೀಯ

ಅನ್ನ ಚಿನ್ನವಾದರೆ ತಿನ್ನುವುದು ಏನನ್ನ?

ಬಡವರ ಅನ್ನ ಚಿನ್ನವಾಗಿದೆ ! ಬಡವರ ಅನ್ನಕ್ಕೆ ವರ್ತಕರು ಕನ್ನ ಹಾಕುತ್ತಿದ್ದಾರೆ!! ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಅಕ್ಕಿ ಧಾರಣೆ ಇಷ್ಟೊಂದು ಪ್ರಮಾಣದಲ್ಲಿ ಏರಿಕೆ ಕಂಡಿರಲಿಲ್ಲ. ಧಾರಣೆಯಲ್ಲಿ ಏರಿಕೆಯಾಗುತ್ತಾ ಬಂದಿದ್ದರೂ ಈ ಪ್ರಮಾಣದ ಏರಿಕೆ ಈ ಹಿಂದೆ ಆಗಿರಲಿಲ್ಲ. ಭತ್ತದ ಕಣಜ ಎಂದೇ ಪರಿಗಣಿಸಲ್ಪಡುವ ಗಂಗಾವತಿಯ ಉತ್ಕೃಷ್ಟ ಭತ್ತದ ತಳಿ ಸೋನಾ ಮಸೂರಿ ಅಕ್ಕಿ ಸ್ಥಳೀಯ ಮಾರುಕಟ್ಟೆಯಲ್ಲಿಯೇ ಕೆ.ಜಿ.ಗೆ 50 ರೂ. ನಂತೆ ಮಾರಾಟವಾಗುತ್ತಿದೆ. ಬೆಂಗಳೂರಿನ ಸಗಟು ಮಾರುಕಟ್ಟೆಯಲ್ಲಿ ಅದೇ ಸೋನಾ ಮಸೂರಿ ಕೆ.ಜಿ.ಗೆ 50ರೂ. ನಿಂದ 52 ರೂ. ಆಗಿದೆ. ಚಿಲ್ಲರೆ ವ್ಯಾಪಾರದಲ್ಲಿ ಇದರ ಬೆಲೆ ಕೆ.ಜಿ.ಗೆ 54ರೂ. ನಿಂದ 56ರೂ.ವರೆಗೆ ಇದೆ. ಅಗತ್ಯ ವಸ್ತುಗಳ ತೀವ್ರ ಏರಿಕೆಯ ನಡುವೆ ಇದುವರೆಗೆ ಸಾಧಾರಣವಾಗಿ ಕೈಗೆಟುಕುವ ದರದಲ್ಲಿ ದೊರೆಯುತ್ತಿದ್ದ ಅಕ್ಕಿಯ ಬೆಲೆ ಒಮ್ಮೆಲೆ ಇಷ್ಟೊಂದು ಏರಿಕೆಯಾಗಿದ್ದು ಜನಸಾಮಾನ್ಯರನ್ನು ಬೆಚ್ಚಿಬೀಳಿಸಿದೆ. ದಿನಕ್ಕೆ 100-150ರೂ. ಸಂಪಾದನೆ ಮಾಡುವ ಕೂಲಿಕಾರರು ದುಡಿಮೆಯ ಅರ್ಧದಷ್ಟು ಹಣ ಅಕ್ಕಿಗೆ ಖರ್ಚಾದರೆ ಇನ್ನುಳಿದ ದಿನನಿತ್ಯದ ಆವಶ್ಯಕತೆಗಳಿಗೆ ಏನು ಮಾಡುವುದು ಎಂದು ಆತಂಕಕ್ಕೆ ಒಳಗಾಗಿದ್ದಾರೆ.

ಈ ಪರಿಸ್ಥಿತಿ ದಿಡೀರನೆ ಉದ್ಭವಿಸಿಲ್ಲ. ರಾಜ್ಯದಲ್ಲಿ ಈ ಸಲ ಮುಂಗಾರು ಕೈಕೊಟ್ಟಾಗಲೇ ಇದರ ಮುನ್ಸೂಚನೆ ಸಿಕ್ಕಿತ್ತು. ಜಲಾಶಯಗಳು ತುಂಬಲಿಲ್ಲ. ಕಾಲುವೆಗಳಲ್ಲಿ ಸಕಾಲದಲ್ಲಿ ನೀರು ಹರಿಯಲಿಲ್ಲ, ನಾಟಿ ತಡವಾಯಿತು. ಇದರಿಂದಾಗಿ ಫಸಲು ಕಡಿಮೆಯಾಯಿತು. ಮಳೆಯ ನೀರನ್ನೇ ಅವಲಂಬಿಸಿ ಭತ್ತ ಬೆಳೆಯುತ್ತಿದ್ದ ಕರಾವಳಿ ಜಿಲ್ಲೆಗಳಲ್ಲಿಯೂ ಭತ್ತದ ಇಳುವರಿ ಗಣನೀಯವಾಗಿ ಇಳಿಮುಖವಾಗಿದೆ. ಇಷ್ಟು ಮಾತ್ರವಲ್ಲ. ಇತ್ತೀಚಿನ ವರ್ಷಗಳಲ್ಲಿ ಭತ್ತದ ಕೃಷಿಯಲ್ಲಿ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂಬ ಅನುಭವಕ್ಕೆ ಬಂದಿರುವ ಭತ್ತ ಬೆಳೆಗಾರರು, ಭತ್ತದ ಕೃಷಿಯಿಂದ ಹೆಚ್ಚೆಚ್ಚು ವಿಮುಖರಾಗುತ್ತಿದ್ದಾರೆ. ಇದೂ ಸಹ ಭತ್ತದ ಫಸಲು ಕುಸಿತ ಕಾಣಲು ಮತ್ತೊಂದು ಪ್ರಮುಖ ಕಾರಣವಾಗಿದೆ.

ಪ್ರಸಕ್ತ ಸಾಲಿನಲ್ಲಿ ಭತ್ತ ಇಳುವರಿಯಲ್ಲಿ ಕುಸಿತ ಆಗಲಿದೆ ಎಂಬುದನ್ನು ರಾಜ್ಯ ಸರ್ಕಾರ ಗ್ರಹಿಸಲಿಲ್ಲ. ಮುಂದಾಲೋಚನೆ ಮಾಡಲಿಲ್ಲ. ಆದರೆ ವರ್ತಕರು ಪರಿಸ್ಥಿತಿಯನ್ನು ಮೊದಲೇ ಗ್ರಹಿಸಿದರು. ಫಸಲು ಬಂದ ತಕ್ಷಣ ರೈತರ ಮೇಲೆ ಮುಗಿಬಿದ್ದು ಭತ್ತವನ್ನು ಖರೀದಿ ಮಾಡಿದರು. ಆಂಧ್ರಪ್ರದೇಶ ಮತ್ತು ತಮಿಳುನಾಡಿನ ವ್ಯಾಪಾರಸ್ಥರು ಸಹ ನುಗ್ಗಿದರು. ರೈತರ ಅಸಹಾಯಕತೆಯ ಲಾಭ ಪಡೆದು ರೈತರಿಗೆ ತೀರಾ ಕಡಿಮೆ ಬೆಲೆ ಕೊಟ್ಟು ಖರೀದಿ ಮಾಡಿ ಭತ್ತವನ್ನೆಲ್ಲಾ ಕೊಂಡೊಯ್ದರು. ಆರ್ಥಿಕ ಅಡಚಣೆಗಳಲ್ಲಿ ಸಿಕ್ಕಿಹಾಕಿಕೊಂಡಿರುವ ರೈತರು ಮುಂದೆ ಹೆಚ್ಚಿನ ಬೆಲೆ ಬರಬಹುದು ಎಂಬ ನಿರೀಕ್ಷೆ ಇಟ್ಟುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಕೇವಲ ಶ್ರೀಮಂತ ರೈತರು ಭತ್ತವನ್ನು ಮಾರಾಟ ಮಾಡದೆ ಇಟ್ಟುಕೊಂಡರು.

ಅಕ್ಕಿಯ ಬೆಲೆ ಇಂದು ಸಿಕ್ಕಾಪಟ್ಟೆ ಹೆಚ್ಚಾಗಿದ್ದರೂ ಭತ್ತದ ಬೆಲೆ ಹೆಚ್ಚಾಗಲಿಲ್ಲ. ಬದಲಾಗಿ ಭತ್ತದ ಬೆಲೆ ರೂ. 200ರಷ್ಟು ಇಳಿಕೆಯಾಗಿದೆ. ಆಗ 75 ಕೆ.ಜಿ.ಗೆ 1800 ರೂ. ಆಗಿತ್ತು, ಈಗ 1500 ರೂ ಸಹ ಸಿಗುತ್ತಿಲ್ಲ. ಅಕ್ಕಿ ಗಿರಣಿ ಮಾಲೀಕರು ಮತ್ತು ಮಧ್ಯವರ್ತಿಗಳು ತಮಗೆ ಬೇಕಾಗುವಷ್ಟು ಭತ್ತವನ್ನು ಖರೀದಿಸಿ ಈಗ ಖರೀದಿ ಮಾಡುವುದನ್ನು ನಿಲ್ಲಿಸಿದ್ದಾರೆ. ಹೀಗಾಗಿ ಭತ್ತದ ಬೆಲೆ ಇಳಿಕೆಯಾಗಿದೆ. ಅಕ್ಕಿಯನ್ನು ಅಕ್ರಮ ದಾಸ್ತಾನು ಮಾಡಿಟ್ಟುಕೊಂಡಿರುವುದರಿಂದ ಅಕ್ಕಿಯ ಬೆಲೆ ಮಾತ್ರ ಏರುತ್ತಿದೆ. ವರ್ತಕರು ಲಾಭ ಮಾಡಿಕೊಳ್ಳುತ್ತಿದ್ದಾರೆ.


ಅಧಿಕಾರದ ಕಿತ್ತಾಟದಲ್ಲಿ ಮುಳುಗಿರುವ ರಾಜ್ಯ ಸರ್ಕಾರಕ್ಕೆ ಇದ್ಯಾವುದು ಕಾಣಲೇ ಇಲ್ಲ. ಅದರ ಆಸಕ್ತಿಯೂ ಅದಕ್ಕಿಲ್ಲ. ಜನರ ಬವಣೆ ಅದಕ್ಕೆ ಮುಖ್ಯವಲ್ಲ. ಪರಿಸ್ಥಿತಿಯ ದುರುಪಯೋಗ ಪಡೆಯುತ್ತಿರುವ ಮಧ್ಯವರ್ತಿಗಳನ್ನು, ಅಕ್ರಮ ದಾಸ್ತಾನುದಾರರನ್ನು, ಕಾಳ ಸಂತೆಕೋರರನ್ನು ನಿಯಂತ್ರಿಸುವ ಶಕ್ತಿ ಈ ಸರ್ಕಾರಕ್ಕೆ ಇಲ್ಲ. ಸರ್ಕಾರ ಎಂಬ ವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿದೆ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನ ಸಾಮಾನ್ಯರ ಬಗ್ಗೆ ಈ ಸರ್ಕಾರಕ್ಕೆ ಕಿಂಚಿತ್ತೂ ಕಾಳಜಿ ಇಲ್ಲ.

ಪೋಲೀಸರನ್ನು ಮನುಷ್ಯರೆಂದು ಒಪ್ಪಿಕೊಳ್ಳದ ಸರಕಾರವಿರುವಾಗ.....

'ಪೋಲೀಸರೇ ಮನುಷ್ಯರಾಗಿ' ಎಂಬ ಸಾರ್ವಜನಿಕ ಅಗ್ರಹ ಹೊಸದೇನಲ್ಲ. ಆದರೆ ಅಲ್ಲಿ ಕೆಲಸ ಮಾಡುವ ಪೋಲೀಸರು ಮನುಷ್ಯರು ಎಂಬ ಸರಳ ಸತ್ಯವನ್ನು ಅಲ್ಲಿನ ಅಧಿಕಾರಿಗಳು ಇನ್ನೂ ಅರಿತಿಲ್ಲ. ಅವರೂ ಮನುಷ್ಯರೆಂದು ಅಧಿಕಾರಿಗಳು, ಈ ಸರಕಾರ ಭಾವಿಸಿ ಮನುಷ್ಯರಂತೆ ನಡೆದುಕೊಂಡಿದ್ದರೆ ಪೇದೆಯೊಬ್ಬ ಸಬ್‌ಇನ್ಸ್‌ಪೆಕ್ಟರ್‌ನ ಎದೆಗೆ ಗುಂಡು ಹಾರಿಸಿ ಕೊಂದ ಧಾರುಣ ಘಟನೆ ರಾಜ್ಯದ ರಾಜಧಾನಿಯಲ್ಲಿ ಜರುಗುತ್ತಿರಲಿಲ್ಲ!

ಆಕ್ರೋಶ, ಅಮಾನವೀಯತೆಗಳ ಸಾಲು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಜಾನುಕುಂಟೆ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೇದೆ ಆನಂದಕುಮಾರ್ ರಜೆ ನೀಡಲಿಲ್ಲವೆಂದು ಸಬ್‌ಇನ್ಸ್‌ಪೆಕ್ಟರ್‌ನನ್ನು ಕೊಂದೇ ಬಿಟ್ಟಿದ್ದಕ್ಕೆ ಕಾರಣವೆಂಬುದು ಒಂದು ಸರಳ ತಿಳುವಳಿಕೆಯಾಗುತ್ತದೆ. ನಿಜ, ಆತ ಈ ಹಿಂದಿನಂತೆಯೇ ಕಳೆದ ಮೂರು ದಿನಗಳಿಂದ ಸತತ ಡ್ಯೂಟಿ ಮಾಡಿ ದಣಿದಿದ್ದ, ಹಿಂದೊಮ್ಮೆ ವಾಲಿಬಾಲ್ ಆಟದಲ್ಲಿ ಆತನ ಒಂದು ಕೈ ಮುರಿದಿತ್ತು, ಹಾಗಿದ್ದೂ, ಬಂಧೂಕಿನ ಭಾರ ಹೆಚ್ಚು ಹೊರಲಾಗುತ್ತಿರಲಿಲ್ಲ ಎಂಬ ಅರಿವಿದ್ದೂ ಸೆಂಟ್ರಿ ಕೆಲಸ ನಡೆಸಲು ಎಸ್.ಐ. ಸೂಚಿಸಿದ್ದ. ಜಮೀನಿನಲ್ಲಿ ಕೊರೆದ ಭಾವಿಯಲ್ಲಿ ನೀರು ಸಿಗದೇ ಆದ ಹಾನಿಯಿಂದಾಗಿ ಸಾಲ ಕೇಳಲು ಹೋಗಬೇಕಾಗಿತ್ತು. ಅದಕ್ಕೆ ಕೇಳಿದ ರಜೆ ಅರ್ಜಿ ತಿರಸ್ಕರಿಸಿದ್ದರಿಂದ ಹತಾಶನಾಗಿ ಗುಂಡು ಹಾರಿಸಿದ್ದಾನೆ. ಈ ಘಟನೆಯ ಹಿನ್ನೆಲೆಯಲ್ಲಿ ಹಲವು ಠಾಣೆಗಳಲ್ಲಿ ದುಡಿಯುತ್ತಿರುವ ಪೋಲೀಸರು, ಅವರ ಕುಟುಂಬದವರು ನೀಡಿರುವ ಹೇಳಿಕೆಗಳು ಅಲ್ಲಿ ಅವರೆಲ್ಲಾ ಅನುಭವಿಸುತ್ತಿರುವ ಹಿಂಸೆ, ದಬ್ಬಾಳಿಕೆ, ಶೋಷಣೆ, ಆಕ್ರೋಶವನ್ನು ತೆರೆದಿಡುತ್ತವೆ. ಇಡೀ ಪೋಲೀಸ್ ಇಲಾಖೆಯಲ್ಲಿ ಮಡುಗಟ್ಟಿರುವ ಕುದಿತ, ಜಿಡ್ಡುಗಟ್ಟಿರುವ ಆಡಳಿತ, ಅಮಾನವೀಯತೆಗಳು ಪೇದೆಯೊಬ್ಬನ ಕೃತ್ಯಗಳ ಹಿಂದೆ ಸಾಲಾಗಿ ನಿಲ್ಲುತ್ತವೆ. ಒಂದು ಹಂತದ ಅಧಿಕಾರಿಗಳ ಸ್ಥಿತಿಯೂ ಇದಕ್ಕಿಂತ ಬೇರೆ ಇರೋಲ್ಲ.



ಆಯೋಗಗಳ ಶಿಫಾರಸು ಕೇಳುವವರ್ಯಾರು?

ಪೋಲೀಸ್ ಇಲಾಖೆಯಲ್ಲಿ ಚಾಲ್ತಿಯಲ್ಲಿರುವುದು 'ಅಂದಕಾಲತ್ತಿಲೆ' ಬ್ರಿಟೀಶರ ಗುಲಾಮಿ ಪದ್ಧತಿ ಕಾನೂನು, ಕಟ್ಟಳೆಗಳೇ! ಕೆಟ್ಟು ಕಮಟಾಗಿರುವ ಈ ವ್ಯವಸ್ಥೆಯಲ್ಲಿ ಅಮೂಲಾಗ್ರ ಸುಧಾರಣೆಗಳಾಗಬೇಕು ಎಂಬ ಮಾತು ಹೇಳಿ-ಕೇಳಿ ಹಳಸಲಾಗಿದೆ. ಸುಧಾರಣೆಗೆಂದು 1949 ರ ನಂತರ, 1960,1966, 1971, 1998(ರೆಬೆರೋ ಆಯೋಗ), 2000(ಪದ್ಮನಾಭಯ್ಯ.)ಹೀಗೆ ಹಲವಾರು ಆಯೋಗಗಳು ರಚನೆಯಾಗಿ, ಅವು ಕೊಟ್ಟಿರುವ ವರದಿಗಳು ಗೆದ್ದಲು ಹುಳುಗಳಿಗೆ ಅನ್ನಾಹಾರವಾಯಿತೇ ವಿನಃ ಜೀವ ಪಡೆಯಲಿಲ್ಲ. ಇಲಾಖೆ ಸುಧಾರಿಸಲಿಲ್ಲ, ಇದರ ಫಲ ಜನರ ಪಾಲಿಗೋ ದೂರದ ಮಾತಾಯಿತು. ಹೋಗಲಿ ಕನಿಷ್ಠ ತನ್ನ ನೌಕರರ ಪಾಲಿಗೂ ಇಲ್ಲವಾದವು. ಅದ್ದರಿಂದ ಈಗಲೂ ಅಲ್ಲಿ ಸಮಸ್ಯೆಗಳು ನೂರಾರು.

ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅನುಭವಿಸುವ ಒತ್ತಡಗಳು ಹಲವಾರು. ಇಲಾಖೆಯಲ್ಲಿನ ಸಮಸ್ಯೆಗಳು, ವಿಶೇಷವಾಗಿ ನೌಕರರು ಅನುಭವಿಸುತ್ತಿರುವ ಸಂಕಟಗಳ ಬಗ್ಗೆ ಈಗ ನಿವೃತ್ತರಾಗಿರುವ ಪೋಲೀಸ್ ಅಧಿಕಾರಿ ಡಿ.ವಿ.ಗುರುಪ್ರಸಾದ್‌ರ ಸಮಿತಿ ಕೂಲಂಕುಶವಾಗಿ ವರದಿ ನೀಡಿದೆ.

ಸುಧಾರಣೆಗಾಗಿ ರಚಿಸಲಾದ ಹಲವು ಆಯೋಗಗಳ ಸಮೀಕ್ಷೆಯಂತೆ ಸಿಬ್ಬಂದಿಗಳ ಕೊರತೆ ಎಲ್ಲೆಡೆ ಎದ್ದು ಕಾಣುವ ಪ್ರಮುಖ ಅಂಶ. ಒಂದು ಕೋಟಿಗೆ ಮೀರಿ ಜನಸಂಖ್ಯೆಯಿರುವ ಬೆಂಗಳೂರು ಮಹಾನಗರದಲ್ಲಿ ಇರುವ ಪೋಲೀಸರ ಸಂಖ್ಯೆ ಕೇವಲ 18000. ಇಲ್ಲಿ ಇನ್ನೂ ಇಷ್ಟೇ ಸಂಖ್ಯೆಯ ಪೋಲೀಸರ ತುರ್ತು ಅಗತ್ಯವಿದೆ. ಇಂತಹ ಕನಿಷ್ಠಗಳನ್ನು ಲೆಕ್ಕ ಹಾಕಿದರೆ ರಾಜ್ಯದಲ್ಲಿ ಇನ್ನೂ 50,000 ಪೇದೆಗಳ ಹೊಸ ನೇಮಕಾತಿ ಆಗಬೇಕು. ಭಾರತೀಯ ದಂಡ ಸಂಹಿತೆಯಂತೆ ದಾಖಲಾದ ಪ್ರತಿ 100 ಪ್ರಕರಣಗಳ ತನಿಖೆಗೆ ಪೋಲೀಸರ ಸಂಖ್ಯೆ ಬೆಂಗಳೂರಿನಲ್ಲಿರುವುದು 51. ಆದರೆ ಚೆನ್ನೈನಲ್ಲಿ 373, ಮುಂಬೈನಲ್ಲಿ 170 ಇದ್ದಾರೆ. ರಾಜ್ಯದಲ್ಲಿ ನೂರು ಚದರ ಕಿ.ಮೀ.ಗೆ 35 ಪೋಲೀಸರಿದ್ದರೆ ನಗರದಲ್ಲಿ 18. ಅದೇ ಮುಂಬೈನಲ್ಲಿ 50, ಕೊಲ್ಕೊತ್ತಾ 300, ಚೆನ್ನೈ 82. ಇದನ್ನು ಪರಿಶೀಲಿಸಿದರೆ ಸಾಕಲ್ಲವೇ ಪರಿಸ್ಥಿತಿ ಎಷ್ಟು ಗಂಭೀರವಿದೆಯೆಂದು ತಿಳಿಯಬಹುದು.

ಮಿತಿಯಿಲ್ಲದ ಬೆಳವಣಿಗೆಗಳು

ಅದರಲ್ಲೂ ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಇಲ್ಲಿನ 'ಅಭಿವೃದ್ಧಿ ಮಾದರಿ'ಯು ಅಷ್ಟೇ ವೇಗದಲ್ಲಿ ಕ್ರಿಮಿನಲ್ ಕೃತ್ಯಗಳನ್ನು ಬೆಳೆಸುತ್ತಿದೆ. ಇದು ಹೆಚ್ಚಳವಾಗಲು ಸಿಬ್ಬಂದಿಯ ಕೊರತೆಯೂ ಒಂದು ಕಾರಣವೆಂಬುದನ್ನು ಸರಕಾರವೇ ಒಪ್ಪಿಕೊಂಡಿದೆ. ವಿಪರೀತ ಕೆಲಸದ ಒತ್ತಡದಿಂದಾಗಿ ಎಲ್ಲರಂತೆ ವಿರಮಿಸಲು ಆಗದೇ ಗಾಣದೆತ್ತಿನಂತೆ ಹಗಲೂ-ರಾತ್ರಿಗಳೆನ್ನದೇ ದುಡಿಯಬೇಕಾಗುತ್ತದೆ. ಹೀಗಾಗಿ ಕುಟುಂಬದೊಂದಿಗೆ ಬೆರೆಯುವ, ಕಷ್ಟ ಸುಖಗಳಿಗಾಗುವ ಸಂದರ್ಭಗಳೇ ಇಲ್ಲವಾಗುತ್ತಿವೆ. ಇದು ಒಂದೆಡೆಯಾದರೆ ಮೇಲಾಧಿಕಾರಿಗಳ ಅಧಿಕಾರಶಾಹಿ ದರ್ಪ, ಜಾತಿ ತಾರತಮ್ಯ, ಹೀಗಳೆಯುವಿಕೆ, ದಬ್ಬಾಳಿಕೆಗಳಿಗೆ ಮಿತಿಯಿಲ್ಲ. ಕೆಲವರಂತೂ ತಮ್ಮ ವೈಯುಕ್ತಿಕ ಕೆಲಸಗಳಿಗೆ

ಪುಟ 11 ಕ್ಕೆ

ಬಿಜೆಪಿ ಸರ್ಕಾರ ರಾಜೀನಾಮೆ ನೀಡಲಿ

ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ಆಗ್ರಹ

ಇಂದು 30ನೇ ಜನವರಿ 2013 ಹುತಾತ್ಮರ ದಿನ. ರಾಷ್ಟ್ರಪಿತ ಗಾಂಧೀಜಿಯವರನ್ನು ಕೊಂದ ಹಿಂದುತ್ವವಾದಿ ಶಕ್ತಿಗಳು ಕರ್ನಾಟಕದಲ್ಲಿ ಬಹಿರಂಗವಾಗಿದ್ದಾರೆ. ಯಡಿಯೂರಪ್ಪನವರ ನಾಯಕತ್ವದಲ್ಲಿ ಅತಿಹೆಚ್ಚು ಸ್ಥಾನಗಳಿಸಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಬಿ.ಜೆ.ಪಿ. ಸರ್ಕಾರ ಇವತ್ತು ಮೂರು ಭಾಗಗಳಾಗಿವೆ. ನೂತನವಾಗಿ ಮತ್ತು ಬಂಡಾಯ ನಾಯಕರಿಂದ ರಚಿತವಾಗಿರುವ ಕೆ.ಜೆ.ಪಿ. ಪಕ್ಷವು, ಬಿ.ಜೆ.ಪಿ. ಪಕ್ಷ ಮತ್ತು ಮುಖ್ಯಮಂತ್ರಿ ಜಗದೀಶ್‌ಶೆಟ್ಟರ್‌ಗೆ ಸವಾಲಾಗಿದ್ದರು, ಸದಾನಂದಗೌಡರನ್ನು ಕಿತ್ತುಹಾಕಿ, ಅವರ ಮುಖ್ಯಮಂತ್ರಿ ಸ್ಥಾನಕ್ಕೆ ಜಗದೀಶ್ ಶೆಟ್ಟರನ್ನು ನೇಮಕ ಮಾಡಿದ ಯಡಿಯೂರಪ್ಪ ಶ್ರೀ ಜಗದೀಶ್ ಶೆಟ್ಟರ್ ಸರ್ಕಾರ ಬಜೆಟ್ ಮಂಡಣೆ ಮಾಡುವುದರಲ್ಲಿ ಯಾವುದೆ ಬಾಧೆ ಇರುವುದಿಲ್ಲವೆಂದು ಮರಳಿ ಭರವಸೆ ನೀಡಿದ್ದಾರೆ. ಜಗದೀಶ್ ಶೆಟ್ಟರ್ ಸರ್ಕಾರಕ್ಕೆ ಯಡಿಯೂರಪ್ಪ ಪ್ರಾಮಾಣಿಕವಾಗಿ ಸವಾಲು ಹಾಕುತ್ತಿಲ್ಲ. ಜಗದೀಶ್ ಶೆಟ್ಟರ್ ಸರ್ಕಾರವನ್ನು ಕೆಳಗಿಳಿಸಬೇಕೆಂಬ ಇಚ್ಛೆ ಯಡಿಯೂರಪ್ಪನವರಿಗೆ ಇದ್ದಿದ್ದರೆ ತಮ್ಮ ನಿಯಂತ್ರಣದಲ್ಲಿರುವ 15 ಜನ ಶಾಸಕರಿಂದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ವಾಪಸ್ಸು ಪಡೆಯುತ್ತಿದ್ದೇವೆಂದು ರಾಜ್ಯಪಾಲರಿಗೆ ಮಾಹಿತಿ ನೀಡಿದ್ದರೆ, ಜಗದೀಶ್ ಶೆಟ್ಟರ್‌ರವರ ಸರ್ಕಾರವು ರಾಜೀನಾಮೆ ನೀಡಿ ಸದನವನ್ನು ವಿಸರ್ಜಿಸುತ್ತಿತ್ತು.

ಇದೀಗ 13 ಜನ ಯಡಿಯೂರಪ್ಪನವರ ಬೆಂಬಲಿಗರು ರಾಜೀನಾಮೆ ನೀಡಿದ್ದು ಶೆಟ್ಟರ್ ಸರ್ಕಾರ ಅಲ್ಪ ಮತಕ್ಕೆ ಕುಸಿದಿದ್ದು ತಕ್ಷಣವೇ ರಾಜೀನಾಮೆ ನೀಡಿ ಚುನಾವಣೆಗೆ ತೆರಳಲು ಸಿಪಿಐ(ಎಂ) ಒತ್ತಾಯಿಸುತ್ತದೆ. ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್ ಹಾಗೂ ಈ ಹಿಂದೆ ಕೆಲದಿನ ಮುಖ್ಯಮಂತ್ರಿಗಳಾಗಿದ್ದ ಸದಾನಂದಗೌಡ ಈ ಮೂವರು ಮಾಜಿ ಮತ್ತು ಹಾಲಿ ಮುಖ್ಯಮಂತ್ರಿಗಳು ಆರ್.ಎಸ್.ಎಸ್. ಹಿನ್ನೆಲೆಯವರು ಎಂದು ಯಾರಿಗೆ ತಾನೇ ತಿಳಿದಿಲ್ಲ ? ಈ ಮೂವರು ಆರ್.ಎಸ್.ಎಸ್.ನ್ನು ಮೆಚ್ಚಿಸಲು ಸ್ಪರ್ಧೆಗಿಳಿದಿದ್ದಾರೆ. ಇವರೆಲ್ಲರನ್ನೂ ಆರ್.ಎಸ್.ಎಸ್. ಉಳಿಸಿಕೊಂಡಿದೆ; ಒಂದಲ್ಲ ಒಂದು ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳಾಗಿದ್ದ ಈ ಮೂರು ಜನ ಆರ್.ಎಸ್.ಎಸ್. ಸಾರುವ 'ಸಿದ್ಧಾಂತ' ಮತ್ತು 'ಶಿಸ್ತು' ಗಾಳಿಗೆ ತೂರಿದ್ದಾರೆ. ಮಾತ್ರವಲ್ಲ ಅವರಿಗೆ ತಮ್ಮ ಕುಟುಂಬದ ಸ್ವಾರ್ಥ ಬಿಟ್ಟರೇ ಬೇರೆ ಯಾವುದೇ ಉದ್ದೇಶವಿಲ್ಲವೆಂದು ಸ್ಪಷ್ಟವಾಗಿ ತೋರಿದ್ದಾರೆ.

2009ರಿಂದ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪ ಬರೀ ರೆಸಾರ್ಟ್ ರಾಜಕಾರಣ ಮಾಡುತ್ತಿದ್ದರು. ಇದಕ್ಕೆ ಸರಿ-ಸಾಟಿಯಾಗಿ ಬಿಜೆಪಿ ಪಕ್ಷದ ಇತರರು ಮತ್ತು ಕಾಂಗ್ರೆಸ್ ನಾಯಕರೂ ಹಾಗೂ ಜೆಡಿ(ಎಸ್)ನ ಹೆಚ್.ಡಿ. ಕುಮಾರಸ್ವಾಮಿ ಕೂಡ ರೆಸಾರ್ಟ್ ರಾಜಕಾರಣ ಮಾಡಿದರು. ಈ ಎಲ್ಲಾ ಒಳಜಗಳಗಳ ಕಾರಣದಿಂದ ಆಡಳಿತಯಂತ್ರವು ಕುಸಿದು ಜನರು ಆಡಳಿತದಿಂದ ವಂಚಿತರಾದರು ಮತ್ತು ರಾಜ್ಯದ ಸಾಮಾನ್ಯ ಜನರು ಕಷ್ಟದಿಂದ-ತೊಂದರೆಗಳಿಂದ ನರಳುತ್ತಿದ್ದಾರೆ.

2009 ಯಡಿಯೂರಪ್ಪ ತಮ್ಮ ಶಾಸಕರನ್ನು ಸಮಾಧಾನಪಡಿಸಲು ರೆಸಾರ್ಟ್‌ಗಳಲ್ಲಿ ಉಳಿಸಿದ್ದಾಗ, ಉತ್ತರ ಕರ್ನಾಟಕದಲ್ಲಿ ಸುರಿದ ಭಾರೀ ಮಳೆಯಿಂದ ಉಂಟಾದ ಪ್ರವಾಹವು ಜನರ ಬದುಕನ್ನು ಅಸ್ತವ್ಯಸ್ತಗೊಳಿಸಿ ಬಾರೀ ತೊಂದರೆಗೀಡು ಮಾಡಿತ್ತು. ಉತ್ತರ ಕರ್ನಾಟಕದ ಜನತೆಯ ಪರಿಸ್ಥಿತಿಯು ಈಗಲೂ ಶೋಚನೀಯವಾಗಿಯೇ ಇದೆ. ಅದಲ್ಲದೆ 2009ರ ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಕನಿಷ್ಟ ಕೂಲಿಗಾಗಿ ನಡೆದ ಬೃಹತ್ ಮತ್ತು ಶಕ್ತಿಶಾಲಿ ಹೋರಾಟದ ಸಮಯದಲ್ಲಿ ಯಡಿಯೂರಪ್ಪನವರಿಗೆ ಒಂದು ಸಭೆ ಕರೆದು, ಕೂತು ಮಾತನಾಡಲು ಸಮಯವಿರಲಿಲ್ಲ. ಕೊನೆಗೆ ಯಡಿಯೂರಪ್ಪ ಸಿ.ಐ.ಟಿ.ಯು. ನಾಯಕರನ್ನು ಡಿಸೆಂಬರ್ 3, 2013ರಂದು ಬೇಟಿ ಮಾಡಿ, ಸಂಬಂಧಪಟ್ಟ ಮಂತ್ರಿ ಮತ್ತು ಅಧಿಕಾರಿಗಳನ್ನು ಕರೆದು ಬೇಡಿಕೆಗಳನ್ನು ಈಡೇರಿಸುವುದಕ್ಕೆ ಹೇಳಿದರು. ಸಿ.ಐ.ಟಿ.ಯು.ನಿಂದ ಸತತವಾಗಿ ಮತ್ತು ಬಲಿಷ್ಠವಾದ ಹೋರಾಟಗಳನ್ನು ಮಾಡಿದರೂ ಕೂಡ, ಮೂವರು ಮುಖ್ಯಮಂತ್ರಿಗಳು ಕಾರ್ಮಿಕರ ಯಾವುದೇ ಬೇಡಿಕೆಗಳನ್ನು ಈಡೇರಿಸಲಿಲ್ಲ. ಯಡಿಯೂರಪ್ಪ ಸರ್ಕಾರ ರಚನೆಮಾಡಿದ ಮೊದಲನೇ ತಿಂಗಳಿನಲ್ಲೇ ರಸಗೊಬ್ಬರಕ್ಕಾಗಿ ದಂಗೆ ಎದ್ದ ರೈತರಿಗೆ ಯಾವ ಪರಿಹಾರವೂ ಸಿಗಲಿಲ್ಲಾ, ಬದಲಾಗಿ ಹಾವೇರಿ ಜಿಲ್ಲೆಯಲ್ಲಿ ರೈತರ ಮೇಲೆ ಯಡಿಯೂರಪ್ಪನವರ ಸರ್ಕಾರದಿಂದ ಗೋಲಿಬಾರ್ ಮಾಡಲಾಯಿತು.

ಸಿ.ಪಿ.ಐ.(ಎಂ) ಪಕ್ಷವು ಕರ್ನಾಟಕದ ಜನತೆಗೆ ಜಾಗೃತವಾಗಿರಲು ಕರೆ ನೀಡುತ್ತಿದೆ. ಆರ್.ಎಸ್.ಎಸ್. ಹಿಂಬಾಲಕರಾದ ಮೂರು ಪಕ್ಷ ಬಿ.ಜೆ.ಪಿ., ಕೆ.ಜೆ.ಪಿ. ಮತ್ತು ಬಿ.ಎಸ್.ಆರ್. ಪಕ್ಷಗಳು ಜನರನ್ನು ತಮ್ಮ ಕುತಂತ್ರಗಳಿಗೆ ಬಳಸಿಕೊಳ್ಳಲು ಸಜ್ಜಾಗಿವೆ. ಈ ಮೂರು ಪಕ್ಷಗಳು ಜನರಿಗೆ ಹೊಸದಾಗಿ, ವಿಭಿನ್ನವಾಗಿ ಕೊಡಲಿಕ್ಕೆ ಏನೂ ಇಲ್ಲ.

ಅಲ್ಲದೆ ಕಾಂಗ್ರೆಸ್ ಪಕ್ಷ ಪರ್ಯಾಯವಲ್ಲ ಎಂಬುದು ಸಿ.ಪಿ.ಐ.(ಎಂ)ಗೆ ಗೊತ್ತಿದೆ. ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳು ಸದರಿ ಪಕ್ಷಗಳಿಗಿಂತ ವಿಭಿನ್ನವಾಗೇನೂ ಇಲ್ಲ. ವ್ಯತ್ಯಾಸವೇನೆಂದರೆ ಕಾಂಗ್ರೆಸ್‌ನ ಭ್ರಷ್ಟಾಚಾರ ಬಿ.ಜೆ.ಪಿ. ಮತ್ತು ಯಡಿಯೂರಪ್ಪನವರ ಭ್ರಷ್ಟಾಚಾರಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವುದು.

ಸಿ.ಪಿ.ಐ.(ಎಂ) ಪಕ್ಷ ಎಲ್ಲಾ ಎಡ-ಪಕ್ಷಗಳ ಜೊತೆ ನೇತೃತ್ವವನ್ನು ವಹಿಸಿದ್ದು, ಜನಪರ ಕಾಳಜಿಯೊಂದಿಗೆ ಬೃಹತ್ ಹೋರಾಟಗಳನ್ನು ಸಂಘಟಿಸುತ್ತಾ, ಹಲವಾರು ಯಶಸ್ವಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೆಲೆ ಏರಿಕೆ ವಿರೋಧಿಸಿ ಹಾಗೂ ರೂ. 10,000 ಸಾವಿರ ಕನಿಷ್ಠ ವೇತನ, ಗುತ್ತಿಗೆಯ ಆಧಾರದಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಕಾರ್ಮಿಕರಿಗೆ ಸುರಕ್ಷತೆ, ಇತರೆ ಹಕ್ಕೊತ್ತಾಯಗಳೊಂದಿಗೆ ಫೆಬ್ರವರಿ ತಿಂಗಳು 20 ಮತ್ತು 21ರಂದು ಎರಡು ದಿನದ ಹೋರಾಟ ಹಮ್ಮಿಕೊಂಡಿದೆ ಮತ್ತು ಯಾವುದೇ ಭೇದವಿಲ್ಲದೆ ಎಲ್ಲರಿಗೂ ಸಮಾನವಾದ ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಎಡಪಕ್ಷಗಳು ತೀವ್ರ ಹೋರಾಟ ಮಾಡಲಿವೆ.

ಎಡ ಪಕ್ಷಗಳು ಕೋಮುವಾದಿ ಶಕ್ತಿಗಳ ವಿರುದ್ಧವೂ ಹೋರಾಟವನ್ನು ಮುನ್ನಡೆಸುತ್ತವೆ; ಜಾತಿಬೇಧ ಕೊನೆಗೊಳಿಸುವುದು ಮತ್ತು ಜನರನ್ನು ತಪ್ಪುದಾರಿಗೆ ಸೆಳೆಯುವ ಹಿಂದು ಧರ್ಮದ ಕೋಮುವಾದಿ ಶಕ್ತಿಗಳಿಂದ ಜನರಿಗೆ ಯಾವ ರೀತಿಯಲ್ಲೂ ಪರಿಹಾರವನ್ನೂ ನೀಡಲು ಸಾಧ್ಯವಿಲ್ಲ ಎಂದು ಬಹಿರಂಗ ಪಡಿಸುತ್ತವೆ.

ತ್ರಿಪುರ ಎಡರಂಗದ ದಾಪುಗಾಲು...

ಪುಟ 2 ರಿಂದ

ಇಲ್ಲವಾಗಿಸುವ ಕಾರ್ಯ ಅವ್ಯಹತವಾಗಿ ನಡೆಯುತ್ತಿರುವಾಗ ತ್ರಿಪುರಾದ ಎಡರಂಗ ಸರ್ಕಾರ ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಬುಡಕಟ್ಟು ಜನರಿಗೆ ಜಂಟಿ ಪಟ್ಟವನ್ನು ವಿತರಿಸಿದೆ. ಮತ್ತು ಈ ಕಾಯ್ದೆಯನ್ನು ಜಾರಿಗೊಳಿಸಿರುವ ರಾಜ್ಯಗಳಲ್ಲಿ ತ್ರಿಪುರ ಮೊದಲ ಸ್ಥಾನದಲ್ಲಿದೆ. ಎಡರಂಗದ ಇಂತಹ ಸಾಧನೆಗಳ ಪರ್ಯಾಯವನ್ನು ದೇಶ ನಿರೀಕ್ಷಿಸುತ್ತಿದೆ.

ಎಡರಂಗ ಸರ್ಕಾರ ಕಾರ್ಮಿಕ ವರ್ಗದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವುದರ ಜೊತೆಗೆ ಅವರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸದೃಢರನ್ನಾಗಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ನಡೆಸುತ್ತಿದೆ. ಇದರ ಭಾಗವಾಗಿ ಆರ್‌ಎಸ್‌ಬಿಎಂ ಯೋಜನೆಯಡಿಯಲ್ಲಿ 4.20 ಲಕ್ಷ ಕಾರ್ಮಿಕರು ಪ್ರಯೋಜನ ಪಡೆದಿದ್ದಾರೆ. ರಾಜ್ಯದ 22 ವಿಭಾಗಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. 31,000 ಕಟ್ಟಡ ಕಾರ್ಮಿಕರು ಇಲಾಖೆಯ ಯೋಜನೆಯಡಿ ಪ್ರಯೋಜನ ಪಡೆದಿದ್ದಾರೆ. ಬೀಡಿ ಕಾರ್ಮಿಕರು, ಹ್ಯಾಂಡ್‌ಲೂಮ್ ಕಾರ್ಮಿಕರು, ಕ್ಷೌರ ಕಾರ್ಮಿಕರು, ರಿಕ್ಷಾ ಚಾಲಕರು, ಸಾರಿಗೆ ನೌಕರರು ಮುಂತಾದ ವಿಭಾಗದ ಅಸಂಘಟಿತ ಕಾರ್ಮಿಕರಿಗೆ ಅನುಕೂಲವಾಗುವಂತೆ ಹತ್ತು ಹಲವು ಯೋಜನೆಗಳನ್ನು ಎಡರಂಗ ಸರ್ಕಾರ ಜಾರಿಗೊಳಿಸಿದೆ.

2012 ರ ಅಕ್ಟೋಬರ್ 31 ರಂದು ರಾಜ್ಯ ಸಚಿವ ಸಂಪುಟ ಮಹತ್ತರ ತೀರ್ಮಾನವೊಂದನ್ನು ಕೈಗೊಂಡಿದ್ದು ಇದರಿಂದ ರಾಜ್ಯದ ಮೀನುಗಾರರು ಮತ್ತು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ಅರೆಕಾಲಿಕ ನೌಕರರು ಮತ್ತು ಕಾರ್ಮಿಕರಿಗೆ ಹಾಗೂ ಬಿಪಿಎಲ್ ಕುಟುಂಬದಲ್ಲಿರುವ ವೃದ್ಧ ಮೀನುಗಾರರಿಗೆ ಮಾಸಿಕ 400 ರೂ. ನಿವೃತ್ತಿ ವೇತನವನ್ನು ಘೋಷಿಸಿದೆ. ಇದುವರೆಗೂ ಎಡರಂಗ ಸರ್ಕಾರ ತ್ರಿಪುರದಲ್ಲಿ 21 ಬಗೆಯ ಸಾಮಾಜಿಕ ನಿವೃತ್ತಿ ಯೋಜನೆಗಳನ್ನು ಘೋಷಿಸಿದೆ. ಇದರ ಜೊತೆ ಒಎನ್‌ಜಿಸಿ ಕಂಪನಿ ರಾಜ್ಯದಲ್ಲಿ ಸ್ಥಾಪಿಸಲು ಹೊರಟಿರುವ ಔಷದ ಕಾರ್ಖಾನೆಗಳ ಶೇ. 10 ರಷ್ಟು ಶೇರುಗಳನ್ನು ರಾಜ್ಯ ಸರ್ಕಾರ ಕೊಂಡುಕೊಳ್ಳಲು ತೀರ್ಮಾನಿಸಿದ್ದು ಇದರಿಂದ ರಾಜ್ಯದ ರೈತರಿಗೆ ಹೆಚ್ಚಿನ ಲಾಭವಾಗಲಿದೆ.

ಎಚ್.ಆರ್.ನವೀನ್‌ಕುಮಾರ್

(ಆಧಾರ: ಪ್ರಕಾಶ್‌ಕಾರಟ್ ರವರ ಲೇಖನ ಮತ್ತು 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ವರದಿಗಳು.)

ಬೆಲೆ ಏರಿಕೆ ನಿಯಂತ್ರಣಕ್ಕಾಗಿ, ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದತಿಗಾಗಿ, ಕನಿಷ್ಟ ಕೂಲಿ ರೂ.10000/-ಕ್ಕಾಗಿ ಆಗ್ರಹಿಸಿ, ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಖಾಸಗೀಕರಣ ಮುಂತಾದ ಜನವಿರೋಧಿ ನೀತಿಗಳ ವಿರೋಧಿಸಿ

ದಿನಾಂಕ 20,21-ಫೆಬ್ರವರಿ-2013 ರಂದು 2 ದಿನಗಳ ದೇಶವ್ಯಾಪಿ ಕಾರ್ಮಿಕರ ಐಕ್ಯ ಮುಷ್ಕರವನ್ನು ಯಶಸ್ವಿಗೊಳಿಸಲು ಸಿಐಟಿಯು 12ನೇ ರಾಜ್ಯ ಸಮ್ಮೇಳನದ ಕರೆ

ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಈ ಕಾಲಾವಧಿಯಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದೇ ವೇದಿಕೆಗೆ ಬಂದಿರುವುದು ಅತ್ಯಂತ ವಿಶಾಲವಾದ ಕಾರ್ಮಿಕರ ಐಕ್ಯತೆಗೆ ನಾಂದಿ ಹಾಡಿದೆ. ಇಂತಹ ವಿಶಾಲ ಕಾರ್ಮಿಕ ವರ್ಗದ ಐಕ್ಯತೆಯು ಸ್ವಾಗತಾರ್ಹವಾಗಿದೆ. ವಿಭಿನ್ನವಾದ ಸೈದ್ಧಾಂತಿಕ, ರಾಜಕೀಯ ಧೋರಣೆಗಳನ್ನು ಹೊಂದಿದ್ದರೂ, ವಿಭಿನ್ನವಾದ ಬಣ್ಣಗಳ ಬಾವುಟಗಳನ್ನು ಹಿಡಿದಿದ್ದರೂ ಕಾರ್ಮಿಕರ ಹಿತ ಒಂದೇ ಎನ್ನುವ ದಿಶೆಯಲ್ಲಿ 11 ಕೇಂದ್ರ ಕಾರ್ಮಿಕ ಸಂಘಟನೆಗಳಾದ ಬಿಎಂಎಸ್, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಲ್‌ಪಿಎಫ್, ಟಿಯುಸಿಸಿ, ಎಐಸಿಸಿಟಿಯು, ಎಐಯುಟಿಯುಸಿ, ಯುಟಿಯುಸಿ ಮತ್ತು ಬ್ಯಾಂಕು, ವಿಮಾ, ಸರಕಾರಿ ನೌಕರರ ಸಂಘಟನೆಗಳು ಒಂದಾಗಿ ಐತಿಹಾಸಿಕವಾದ ಎರಡು ದಿನಗಳ ದೇಶವ್ಯಾಪಿ ಐಕ್ಯ ಕಾರ್ಮಿಕರ ಮುಷ್ಕರವನ್ನು ದಿನಾಂಕ 20,21-ಫೆಬ್ರವರಿ-2013 ರಂದು ನಡೆಸಲು ಕರೆ ನೀಡಿವೆ. ಭಾರತದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಎರಡು ದಿನಗಳ ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿರುವುದು ಇದೇ ಮೊದಲ ಬಾರಿ ಆಗಿದೆ. ಕಾರ್ಮಿಕ ವರ್ಗದ ಐತಿಹಾಸಿಕ ಐಕ್ಯತೆಯು ಈ ಮುಷ್ಕರವನ್ನು ಅತ್ಯಂತ ಯಶಸ್ವಿಗೊಳಿಸಲು, ಬೆಂಬಲಿಸಲು ಕರ್ನಾಟಕ ರಾಜ್ಯದ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಮನವಿ ಮಾಡುತ್ತದೆ.

ಕಾರ್ಮಿಕ ವರ್ಗದ ಐಕ್ಯ ಹೋರಾಟದ ಕರೆಯಲ್ಲಿ 10 ಪ್ರಮುಖ ಬೇಡಿಕೆಗಳನ್ನು ರೂಪಿಸಲಾಗಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳು ದೇಶದ ಕಾರ್ಮಿಕರ ಹಾಗೂ ಜನ ಸಾಮಾನ್ಯರ ಹಿತದೃಷ್ಟಿಯಿಂದ ದುಡಿಯುವ ಜನರ ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿವೆ. ಆದರೇ ಸರಕಾರಗಳು ಬೆಲೆ ಏರಿಕೆ ನಿಯಂತ್ರಿಸಲು ಯಾವುದೇ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಕಾಳಜಿ ವಹಿಸುತ್ತಿಲ್ಲ. ಮತ್ತೊಂದೆಡೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತಷ್ಟು ತೀವ್ರಗೊಳ್ಳುವಂತೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಏರಿಕೆ ಮಾಡಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ಬೆಲೆ ಏರಿಕೆ ನಿಯಂತ್ರಣಕ್ಕಾಗಿ ದೃಡವಾದ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಆದರೆ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಹೂಡಿಕೆ ಮಾಡಲು ಅವಕಾಶ ನೀಡುವ ಕ್ರಮಗಳನ್ನು ಸರಕಾರ ಕೈಗೊಂಡಿದೆ. ಇದರಿಂದಾಗಿ ಮತ್ತಷ್ಟು ಬೆಲೆ ಏರಿಕೆಗೆ ಕಾರಣವಾಗಲಿದೆ. ಅಲ್ಲದೇ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ 4 ಕೋಟಿಗೂ ಅಧಿಕ ಕುಟುಂಬಗಳು ಉಪಜೀವನದ ಆಧಾರವನ್ನು ಕಳೆದುಕೊಂಡು ನಿರುದ್ಯೋಗಿಗಳಾಗುವ ಪರಿಸ್ಥಿತಿ ಉಂಟಾಗಿದೆ. ಸರ್ಕಾರ ತನ್ನ ಬಜೆಟ್‌ನಲ್ಲಿ ಜನಪರ ಉದ್ಯೋಗ ಕಾರ್ಯಕ್ರಮಗಳಿಗೆ ಹಾಗೂ ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳ ಅಭಿವೃದಿಗೆ ಪೂರಕವಾಗಿರುವ ಕಲ್ಯಾಣ ಕಾರ್ಯಕ್ರಮಗಳಾದ ಓಖಇಉಂ & ಖಅಆಖ ಗಳಿಗೆ ಹಣ ಕಡಿತ ಮಾಡಿದೆ. ಲಾಭದಾಯಕವಾಗಿರುವ ಕೇಂದ್ರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಷೇರು ಬಂಡವಾಳವನ್ನು ಮಾರಾಟ ಮಾಡುವ ಮೂಲಕ ಈ ಒಂದು ವರ್ಷದಲ್ಲೇ 40000 ಕೋಟಿಗಳನ್ನು ಸಂಗ್ರಹಿಸಲು ಗುರಿ ಹೊಂದಿರುವುದು ಕಾರ್ಮಿಕರ ಹಾಗೂ ದೇಶದ ಹಿತಕ್ಕೆ ಮಾರಕವಾದ ಕ್ರಮಗಳಾಗಿವೆ. ಕಾರ್ಮಿಕ ಕಾನೂನುಗಳ ಜಾರಿಗೊಳಿಸದೇ ಸಾಮಾಜಿಕ ಭದ್ರತೆಗೆ ಧಕ್ಕೆ ಉಂಟು ಮಾಡಲಾಗಿದೆ. ವರ್ಷವಿಡೀ ನಿರಂತರವಾಗಿ ಮಾಡಬೇಕಾದ ಖಾಯಂ ಕೆಲಸಗಳನ್ನು ಗುತ್ತಿಗೆ ಪದ್ಧತಿಯಲ್ಲಿ ನಿರ್ವಹಿಸುವ ಮೂಲಕ ಕಾರ್ಮಿಕರನ್ನು ತೀವ್ರ ಶೋಷಣೆಗೆ ಗುರಿ ಮಾಡಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಅಡಿಯಲ್ಲಿ ಗುತ್ತಿಗೆ ಪದ್ಧತಿಯಲ್ಲಿ ದುಡಿಯುವ ಕಾರ್ಮಿಕರಿಗೂ ಒಳಗೊಂಡು ಸಾರ್ವಜನಿಕ ಕ್ಷೇತ್ರದ ಹಾಗೂ ಖಾಸಗಿ ರಂಗದ ಕೈಗಾರಿಕೆಗಳಲ್ಲಿಯೂ ಕನಿಷ್ಠ ವೇತನ, ಭವಿಷ್ಯನಿಧಿ, ಇಎಸ್‌ಐ, ಬೋನಸ್ ಮತ್ತು ಗ್ರಾಚ್ಯುಟಿ ಸೌಲಭ್ಯಗಳನ್ನು ಜಾರಿಗೊಳಿಸದೇ ನಿರಾಕರಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಸಲು ಬೇಕಾದ ಯೋಜನೆಗಳು ರೂಪಿಸಲಾಗುತ್ತಿಲ್ಲ. ಕೇಂದ್ರ ಸರ್ಕಾರದ ಯೋಜನೆಗಳಾದ ಖಅಆಖ, ಆಶಾ, ಬಿಸಿಯೂಟ, ಹಾಗೂ ಸರ್ವಶಿಕ್ಷಣ ಅಭಿಯಾನದಲ್ಲಿ ಲಕ್ಷಾಂತರ ಕೆಲಸಗಾರರು (ಕಾರ್ಮಿಕರು) ದುಡಿಯುತ್ತಿದ್ದರೂ ಅವರಿಗೆ ಕನಿಷ್ಠ ವೇತನ ಹಾಗೂ ಕಾರ್ಮಿಕ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಮಾಡಿದ ಕಾನೂನು ಜಾರಿಗೊಳಿಸಲು ಅಗತ್ಯ ಹಣಕಾಸು ಸಂಪನ್ಮೂಲವನ್ನು ಒದಗಿಸದೇ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕೇವಲ ಬೂಟಾಟಿಕೆಯಾಗಿದೆ. ಕಾರ್ಮಿಕರ ಸಂಘಟನಾ ಹಕ್ಕನ್ನೇ ಮೊಟಕು ಗೊಳಿಸಲು ಬಹುರಾಷ್ಟ್ರೀಯ ಕಂಪನಿಗಳು ಧಾಳಿ ನಡೆಸುತ್ತಿರುವಾಗ ಸರಕಾರಗಳು ವಿದೇಶಿ ಹಾಗೂ ದೇಶಿಯ ಬಂಡವಾಳಗಾರೊಂದಿಗೆ ಶಾಮೀಲಾಗಿ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ನಡೆಸಲಾಗುತ್ತಿದೆ. ಸಬ್ಸಿಡಿಗಳನ್ನು ಸಂಪೂರ್ಣವಾಗಿ ರದ್ದುಗೊಳಿಸುವ ಉದ್ದೇಶದಿಂದ 'ನೇರ ಹಣ ವರ್ಗಾವಣೆ' ನೀತಿಯನ್ನು ದೇಶದಾದ್ಯಂತ ಜಾರಿಗೊಳಿಸಲಾಗಿದೆ. ಹಾಗೂ ಡಿಸೆಲ್ ಬೆಲೆಯನ್ನು ಅನಿಯಂತ್ರಣ ಗೊಳಿಸಲಾಗಿದೆ. ಸಗಟು ಬಳಕೆದಾರರಿಗೆ ಡಿಸೆಲ್ ಧರವನ್ನು ಪ್ರತಿ ಲೀಟರ್‌ಗೆ ರೂ.12/- ಏರಿಕೆ ಮಾಡಿದ್ದೂ, ಇದರಿಂದಾಗಿ ಸಾರ್ವಜನಿಕ ಸಾರಿಗೆ ಮತ್ತು ರೇಲ್ವೇ ಧರಗಳು ವಿಪರೀತ ದುಬಾರಿ ಅಗುತ್ತವೆ.

ಈ ಹಿನ್ನಲೆಯಲ್ಲಿ ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ದಿನಾಂಕ ಫೆಬ್ರವರಿ 20,21 -2013ರಂದು 2 ದಿನ ಅಖಿಲ ಭಾರತ ಮುಷ್ಕರವನ್ನು ನಡೆಸಲಾಗುವುದು. ಈ ಕೆಳಗಿನ ಬೇಡಿಕೆಗಳಿಗಾಗಿ ಒತ್ತಾಯಿಸಲಾಗುವುದು. ಬೇಡಿಕೆಗಳ ಪ್ರಮುಖ್ಯತೆಯನ್ನು ವಿವರಿಸುವ ಕಿರುಪುಸ್ತಕವನ್ನು ವ್ಯಾಪಕವಾಗಿ ವಿತರಿಸಬೇಕು.

1. ಬೆಲೆ ಏರಿಕೆ ನಿಯಂತ್ರಣ
2. ಉದ್ಯೋಗ ಸೃಷ್ಟಿಸಲು ಹಾಗೂ ರಕ್ಷಿಸಲು ಪ್ಯಾಕೇಜ್
3. ಕಾರ್ಮಿಕ ಕಾನೂನುಗಳ ಕಠಿಣವಾದ ಅನುಷ್ಠಾನ
4 ಸಾರ್ವತ್ರಿಕವಾಗಿ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು.
5. ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಷೇರು ಮಾರಾಟ ಮಾಡದಿರಲು ಹಾಗು ಖಾಸಗಿಕರಣ ಮಾಡದಂತೆ ಒತ್ತಾಯಿಸಿ.
6. ಖಾಯಂ ಹಾಗೂ ನಿರಂತರ ಸ್ವರೂಪದ ಕೆಲಸಗಳನ್ನು ಗುತ್ತಿಗೆ ನೀಡದಂತೆ ಹಾಗೂ ಅಲ್ಲಿಯವರೆಗೆ ಕೈಗಾರಿಕೆ/ಸಂಸ್ಥೆಯಲ್ಲಿ ಖಾಯಂ ಕಾರ್ಮಿಕರಿಗೆ ನೀಡಲಾಗುವ ಸಮಾನ ವೇತನ/ಸೌಲಭ್ಯಗಳ ದರದಲ್ಲಿಯೇ ಗುತ್ತಿಗೆ ಕಾರ್ಮಿಕರಿಗೂ ಸಿಗುವಂತೆ ಕ್ರಮ ವಹಿಸತಕ್ಕದ್ದು.
7. ಷೆಡ್ಯೂಲ್‌ಗಳ ವ್ಯತ್ಯಾಸವಿಲ್ಲದೆ, ಸೂಚ್ಯಂಕ ಆಧಾರಿತ ತಿಂಗಳಿಗೆ 10,000 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಶಾಸನಬದ್ಧ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು ಕನಿಷ್ಟ ಕೂಲಿ ಕಾಯಿದೆಗೆ ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯನ್ನು ಸಾರ್ವತ್ರಿಕಗೊಳಿಸತಕ್ಕದ್ದು.
8. ಬೋನಸ್, ಭವಿಷ್ಯನಿಧಿ ಪಾವತಿಗೆ ಇರುವ ಎಲ್ಲಾ ಮಿತಿ ಹಾಗೂ ಅರ್ಹತೆಗಳನ್ನು ತೆಗೆದು ಹಾಕಿ ಗ್ರಾಚ್ಯುಟಿ ಮೊತ್ತವನ್ನು ಏರಿಸತಕ್ಕದ್ದು.
9. ಎಲ್ಲರಿಗೂ ನಿವೃತ್ತಿ ವೇತನ ನೀಡತಕ್ಕದ್ದು.
10. 45 ದಿನಗಳ ಒಳಗಾಗಿ ಕಾರ್ಮಿಕ ಸಂಘಟನೆಗಳ ಕಡ್ಡಾಯ ನೊಂದಣಿ ಮತ್ತು ಐಎಲ್‌ಓನ 87 ಹಾಗೂ 98ನೇ ಸಮಾವೇಶಗಳನ್ನು ಈ ಕೂಡಲೇ ದೃಢೀಕರಿಸತಕ್ಕದ್ದು.

ಎರಡು ದಿನಗಳ ಮುಷ್ಕರವನ್ನು ನಿಜವಾದ ಅರ್ಥದಲ್ಲಿ ಯಶಸ್ವಿ ಆಗಬೇಕಾದರೇ ಈ ಮುಷ್ಕರದ ಬೇಡಿಕೆಗಳ ಹಿನ್ನಲೆ, ಕಾರಣಗಳು ಮತ್ತು ಮಹತ್ವವನ್ನು ಅತ್ಯಂತ ವ್ಯಾಪಕ ಜನಸಮೂಹಗಳಿಗೆ ತಿಳಿಯುವಂತೆ ಪ್ರಚಾರ ಮಾಡಬೇಕು. ಅದಕ್ಕಾಗಿ ಮನೆ, ಮನೆ ಪ್ರಚಾರ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ ಸಿಐಟಿಯು ಸಂಘಗಳ ಎಲ್ಲಾ ಸದಸ್ಯರನ್ನು ಒಳಗೊಂಡು ಪಾದಯಾತ್ರೆ, ವಾಹನ ಜಾತಾ, ಬೀದಿಬದಿ ಸಭೆಗಳು ಮತ್ತು ಸಂಘಟಿತ ಬಹಿರಂಗ ಸಭೆಗಳನ್ನು ನಡೆಸಬೇಕು.

ಮುಷ್ಕರದ ದಿನ ಗ್ರಾಮಾಂತರ ಪ್ರದೇಶಗಳಲ್ಲಿ ಮುಖ್ಯ ರಸ್ತೆಗಳ ವಾಹನ ಸಂಚಾರ ತಡೆ ಮಾಡಲು ಕ್ರಮವಹಿಸಬೇಕು.

ನಗರ ಪಟ್ಟಣ ಪ್ರದೇಶಗಳಲ್ಲಿ ವಾರ್ಡ್‌ವಾರು ಸಿಐಟಿಯು ಸಂಘಗಳ ಸಂಗಾತಿಗಳನ್ನು ಒಳಗೊಳಿಸಿ ಪ್ರಚಾರ ಕಾರ್ಯವನ್ನು ನಡೆಸಬೇಕು.

ಎಲ್ಲಾ ಸಂಘಗಳು ಮುಷ್ಕರದ ನೋಟೀಸನ್ನು ದಿನಾಂಕ 7-2-2013 ರಂದು ಆಡಳಿತ ವರ್ಗಗಳಿಗೆ ಕೊಡಬೇಕು. ಕಾರ್ಖಾನೆಗಳ ಕಾರ್ಮಿಕರು ಮುಷ್ಕರದಲ್ಲಿ ವೇತನ ನಷ್ಟದ ಮೂಲಕ ಭಾಗವಹಿಸುವಂತೆ ಜಾಗೃತಿ ಮೂಡಿಸಬೇಕು. ಕಾಂಪನ್ಸೇಟರಿ ಆಫ್ ಪದ್ಧತಿ ಅನುಸರಿಸದಂತೆ ಕ್ರಮವಹಿಸಬೇಕು. ಕೈಗಾರಿಕಾ ಪ್ರದೇಶಗಳಲ್ಲಿ ಸಿಐಟಿಯು ಸಂಘ ಇಲ್ಲದ ಕೈಗಾರಿಕಾ ಮಾಲೀಕರಿಗೂ ಮುಷ್ಕರದ ನೋಟಿಸ್ ನೀಡಬೇಕು.

ಮುಷ್ಕರವನ್ನು ಸಾರ್ವತ್ರಿಕ ಹರತಾಳವಾಗಿ ನಡೆಸುವಂತಾಗಲು ವ್ಯಾಪಾರಸ್ತರ ಸಂಘಗಳಿಗೆ ಸಂಪರ್ಕಿಸಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳದ ಅಪಾಯಗಳನ್ನು ವಿವರಿಸಿ ಸಹಕಾರ ಪಡೆಯಬೇಕು.

ಮುಷ್ಕರದ 2-3 ದಿನಗಳ ಮುಂಚಿತವಾಗಿ ಪಂಜಿನ ಮೆರವಣಿಗೆಗಳನ್ನು ಸ್ಥಳೀಯವಾಗಿ ನಡೆಸಬೇಕು. ಹಾಗೂ ನಗರ ಪಟ್ಟಣ, ಹೋಬಳಿ ಮಟ್ಟದಲ್ಲಿ ಆಟೋ ಮೈಕ್ ಪ್ರಚಾರಗಳನ್ನು ಸಂಘಟಿಸಿ ಪ್ರಚಾರ ನಡೆಸಬೇಕು. ಎಲ್ಲಾ ಸಾರಿಗೆ ನಿಗಮಗಳ ಬಸ್ ಡಿಪೋಗಳಿಗೆ ವಿಶೇಷವಾಗಿ ಬೇಟಿ ನೀಡಿ ಪ್ರಚಾರಗಳನ್ನು ನಡೆಸಬೇಕು.

ಸಿಐಟಿಯು ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಸಿಐಟಿಯು ಸ್ವತಂತ್ರ್ಯವಾಗಿ ನಡೆಸಬೇಕು. ಇತರ ಕೇಂದ್ರ ಕಾರ್ಮಿಕ ಸಂಘಟನೆಗಳು ಸಹಕರಿಸಲು ಸಿದ್ಧರಿರುವ ಪ್ರದೇಶಗಳಲ್ಲಿ ಜಂಟಿಯಾಗಿ ನಡೆಸಲು ಪ್ರಯತ್ನಿಸಬೇಕು. ಇತರ ಸಂಘಟನೆಗಳ ಮುಖಂಡರು ಸಹಕರಿಸಲಿಲ್ಲ ಎಂಬ ಕಾರಣ ನೀಡಿ ಸಿಐಟಿಯು ಮಾಡಬೇಕಾದ ಪ್ರಚಾರ ಕಾರ್ಯಕ್ರಮಗಳನ್ನು ಕೈಬಿಡಬಾರದು.

ದೇಶದ ಇತಿಹಾಸದಲ್ಲೇ ಮೊಟ್ಟ ಮೊದಲಬಾರಿಗೆ ಎರಡು ದಿನಗಳ ಮುಷ್ಕರ ದಿನಾಂಕ 20-21 ಫೆಬ್ರವರಿ 2013 ರಂದು ನಡೆಸುವ ಮೂಲಕ ಸರಕಾರದ ಜನವಿರೋದಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾದ್ಯವಾಗಬೇಕು. ಈ ದಿಶೆಯಲ್ಲಿ ನಿಮ್ಮ ಜಿಲ್ಲೆ/ತಾಲೂಕ/ಪ್ರದೇಶ/ಸಂಘಗಳ ಮಟ್ಟದಲ್ಲಿ ಈಗಾಗಲೇ ಏನೆಲ್ಲಾ ತಯಾರಿ ನಡೆಸಿದ್ದೀರಿ ಎಂಬ ಕುರಿತು ನಿಮ್ಮ ಚರ್ಚೆಯಲ್ಲಿ ತಿಳಿಸಬೇಕು. ಹಾಗೂ ಮುಷ್ಕರವನ್ನು ಅತ್ಯಂತ ಯಶಸ್ವಿ ಮುಷ್ಕರವಾಗಿ ಮತ್ತು ಬಂದ್ ಆಗಿ ಪರಿವರ್ತಿಸಲು ಮಾಡಬೇಕಾದ ಕ್ರಮಗಳ ಕುರಿತು ನಿಮ್ಮ ಅನುಭವಗಳನ್ನು ಚರ್ಚೆಯಲ್ಲಿ ಭಾಗವಹಿಸಿ ಹಂಚಿಕೊಂಡು ಮುಷ್ಕರವು ಕರ್ನಾಟಕ ರಾಜ್ಯದಲ್ಲಿ, ಒಂದು ಮೈಲುಗಲ್ಲಾಗುವಂತೆ ಮಾಡೋಣ.

'ವಿಶ್ವರೂಪಂ' ವಿರುದ್ಧ ವೃಥಾ ಅಸಹನೆ

ಮುನೀರ್ ಕಾಟಿಪಳ್ಳ

ಅಮೇರಿಕಾ ಭಯೋತ್ಪಾದಕರನ್ನು ಮಟ್ಟ ಹಾಕುವ ನೆಪದಲ್ಲಿ ಅಫ್ಘಾನಿಗಳ ವಾಸ ಪ್ರದೇಶಗಳ ಮೇಲೆ ನಿಷ್ಕರುಣೆಯಿಂದ ನಡೆಸುವ ದಾಳಿ, ಆ ದಾಳಿಗೆ ಬಲಿಯಾಗುವ ಮಕ್ಕಳು, ಮಹಿಳೆಯರು, ನಾಗರೀಕರ ಅಸಹಾಯಕ ಪರಿಸ್ಥಿತಿಯನ್ನು ಚಿತ್ರಕಟ್ಟಿ ಕೊಡುವ ಪ್ರಯತ್ನ ಮಾಡುತ್ತದೆ..... ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಇಂತಹ ವಿವೇಚನಾರಹಿತ ನಡವಳಿಕೆಗಳನ್ನು ತೀವ್ರವಾಗಿ ವಿರೋಧಿಸಬೇಕು.

ಕಮಲ್‌ಹಾಸನ್ ಸಿನಿಮಾ 'ವಿಶ್ವರೂಪಂ' ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಅಸಹನೆಗೆ ಗುರಿಯಾಗಿದೆ. ಹಾಗೆಯೇ ಬಹುದೊಡ್ಡ ವಿವಾದ, ಚರ್ಚೆಯನ್ನು ಹುಟ್ಟು ಹಾಕಿದೆ. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬೆಳವಣಿಗೆಯಾಗುತ್ತಿರುವ ಸಾಂಸ್ಕೃತಿಕ ಭಯೋತ್ಪಾದನೆಯು ಇನ್ನಷ್ಟು ಗಟ್ಟಿಗೊಳ್ಳುತ್ತಿರುವ ಪ್ರಕ್ರಿಯೆ ಅನಾವರಣಗೊಂಡಿದೆ.

"..ಇಸ್ಲಾಂ ಧರ್ಮವನ್ನು ಭಯೋತ್ಪಾದನೆಯೊಂದಿಗೆ ಜೋಡಿಸಿದೆ... ಕುರಾನ್ ಅನ್ನು ಅವಮಾನಗೊಳಿಸಿದೆ... ಮುಸ್ಲಿಮರ ಬಗ್ಗೆ ಇತರ ಧರ್ಮಗಳ ಜನತೆ ಅನುಮಾನದಿಂದ ನೋಡುವಂತೆ ಮಾಡುವ ದೃಶ್ಯಗಳಿವೆ..." ಎಂದು ಕೆಲವು ಮುಸ್ಲಿಂ ಮತೀಯ ಸಂಘಟನೆಗಳು ಹುಯಿಲೆಬ್ಬಿಸುವಂತಹ ದೃಶ್ಯಗಳು ವಿಶ್ವರೂಪಂನಲ್ಲಿ ಏನಿದೆ ಎಂಬ ಕುತೂಹಲ, ಕಮಲ್‌ಹಾಸನ್‌ನಂತಹ ಸೂಕ್ಷ್ಮ ಮನಸ್ಸಿನ, ಸೆಕ್ಯುಲರ್ ಮನುಷ್ಯ ಒಂದು ಧರ್ಮವನ್ನು ಅವಮಾನಿಸಿ, ಹಿಂಸಾವಾದಿಗಳನ್ನಾಗಿ ಚಿತ್ರಿಸಿ ಸಿನಿಮಾ ತೆಗೆಯಲು ಸಾಧ್ಯವೇ, ಬಾಬ್ರಿ ಮಸೀದಿ ಉರುಳಿದಾಗ, ಗುಜರಾತ್ ಹೊತ್ತಿ ಉರಿದಾಗ ಮುಸ್ಲಿಮರು ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರ ಅಂಗ



ಸಂಘಟನೆಗಳ ಪ್ರೇರಿತ ದಾಳಿಗಳಿಂದ ಜರ್ಜರಿತರಾದ ಸಂದರ್ಭಗಳಲ್ಲಿ ಬಹುಸಂಖ್ಯಾತ ಕೋಮುವಾದದ ವಿರುದ್ಧ ಧ್ವನಿ ಎತ್ತಿ ಮುಸ್ಲಿಮರ ಪರನಿಂತ ಕಮಲ್‌ಹಾಸನ್ ಮುಸ್ಲಿಮರನ್ನು ಅವಮಾನಿಸಿ ಚಿತ್ರ ತೆಗೆಯುತ್ತಾರೆಯೇ...? ಇರಲಾರದು ಎಂಬ ಅನುಮಾನ, ಕುತೂಹಲದಿಂದಲೇ ಮಂಗಳೂರಿನಲ್ಲಿ ವಿಶ್ವರೂಪಂ ನೋಡಿದೆ.

ಒಟ್ಟು ಸಿನೆಮಾ ಬಗ್ಗೆ ಹೇಳುವುದಾದರೆ ಕಮಲ್ ಚಿತ್ರಕ್ಕಾಗಿ ತುಂಬಾ ಶ್ರಮಪಟ್ಟಿದ್ದಾರೆ. ಆದರೆ ಚಿತ್ರ ಮಾತ್ರ ಪ್ರೇಕ್ಷಕರನ್ನು ಹಿಡಿದು ಕೂಡಿಸುವುದರಲ್ಲಿ ಅಷ್ಟೇನು ಯಶಸ್ವಿಯಾಗಿಲ್ಲ. ಚಿತ್ರದಲ್ಲಿ ನೋಡಿಸಿಕೊಂಡು ಹೋಗುವ ಗುಣದ ಕೊರತೆ ಇದೆ. ಕಮಲ್ ಮತ್ತು ಸಹ ನಟರು ಚೆನ್ನಾಗಿ ಅಭಿನಯಿಸಿದ್ದಾರೆ. ಕಮಲ್ ಅವರ ಕಥಕ್ ನೃತ್ಯವಂತೂ ಮನಸೂರೆಗೊಳ್ಳುತ್ತದೆ. ಅಫ್ಘಾನಿಸ್ತಾನದ ಸೆಟ್‌ಗಳು, ಛಾಯಾಗ್ರಹಣ ಸಹಜತೆಯಿಂದ ಬಹಳ ಚೆನ್ನಾಗಿ ಮೂಡಿ ಬಂದಿದೆ. ಸಾಹಸ ಸನ್ನಿವೇಶಗಳು ಹಾಲಿವುಡ್ ಮಟ್ಟಕ್ಕೇರುವ ರೀತಿಯಲ್ಲಿದ್ದರೂ ಯಾಕೋ ಹಾಲಿವುಡ್ ಗುಣಮಟ್ಟ ಬಂದಿಲ್ಲ.

ಇನ್ನು ಮುಸ್ಲಿಂ ಸಾಂಸ್ಕೃತಿಕ ಪೊಲೀಸರ ಆಕ್ಷೇಪಗಳ ಬಗ್ಗೆ, ದೊಣ್ಣೆ ನಾಯಕರು ಬೊಬ್ಬೆ ಹೊಡೆಯುವಂತೆ ಧರ್ಮ ನಿಂದನೆಯ ದೃಶ್ಯಗಳು ಚಿತ್ರದಲ್ಲಿ ಕಂಡು ಬರಲಿಲ್ಲ. ಚಿತ್ರದ ಕಥೆ ಇರುವುದು ಅಲ್‌ಖೈದಾ, ತಾಲಿಬಾನ್ ಭಯೋತ್ಪಾದನೆ ಅವರನ್ನು ಮಟ್ಟ ಹಾಕುವ ನೆಪದಲ್ಲಿ ಅಮೇರಿಕಾ ಅಫ್ಘಾನಿಸ್ತಾನದಲ್ಲಿ ಹೂಡಿರುವ ಯುದ್ಧ, ಚಿತ್ರದ ನಾಯಕ, ಭಾರತದ ಗೂಢಚರ ಸಂಸ್ಥೆಯ ಅಧಿಕಾರಿ 'ಜೆಹಾದಿ' ಗುಂಪಿನೊಳಗೆ ಉಗ್ರಗಾಮಿಯ ವೇಷದಲ್ಲಿ ಸೇರಿಕೊಳ್ಳುವುದು, ಅಮೇರಿಕಾದ ಕಾರ್ಯಾಚರಣೆಗಳಿಗೆ ಪ್ರತೀಕಾರವಾಗಿ ಅಮೇರಿಕಾ ನಗರಗಳನ್ನು ಸರ್ವನಾಶ ಮಾಡಲು ಭಯೋತ್ಪಾದಕ ಗುಂಪುಗಳು ಅಮೇರಿಕಾದಲ್ಲಿ ಸಂಚು ರೂಪಿಸುವುದು, ಸಂಚನ್ನು ವಿಫಲಗೊಳಿಸಲು ನಾಯಕ ಮಾಡುವ ಪ್ರಯತ್ನ ಇಷ್ಟು ಚಿತ್ರದ ಕಥೆ. ಸಹಜವಾಗಿ ತಾಲಿಬಾನ್, ಅಲ್‌ಖೈದಾ ಉಗ್ರರ ಸನ್ನಿವೇಶಗಳು, ಅವರು ತಮ್ಮ ಶತ್ರುಗಳ ಕೊಲೆ ಮಾಡುವಾಗ, ತಮ್ಮೊಳಗಿನ ದ್ರೋಹಿಗಳನ್ನು ಹತ್ಯೆ ಮಾಡುವಾಗ, ವಿರೋಧಿಗಳ ಗುರಿಗಳಿಗೆ ದಾಳಿ ಮಾಡುವಾಗ ಇಸ್ಲಾಂ ಧರ್ಮದ ಘೋಷಣೆಗಳನ್ನು ಕೂಗುವುದು, ಅವರು ನಮಾಜ್ ಮಾಡುವ, ಕುರಾನ್ ವಾಕ್ಯಗಳನ್ನು ಪಠಿಸುವ ದೃಶ್ಯಗಳು ಚಿತ್ರದಲ್ಲಿ ಹೇರಳವಾಗಿ ಇವೆ. ಅನ್ಯಾಯ, ಅನೀತಿಗಳ ವಿರುದ್ದದ ಧರ್ಮಯುದ್ದ ಎಂಬ 'ಜಿಹಾದ್' ಪರಿಕಲ್ಪನೆಯನ್ನು ತಮ್ಮ ದುರುದ್ದೇಶಕ್ಕೆ ತಕ್ಕಂತೆ ವಿಶ್ಲೇಶಿಸಿ 'ಜಿಹಾದ್' ಹೆಸರಿನಲ್ಲಿ ಹಿಂಸಾಮಾರ್ಗವನ್ನು ಹಿಡಿದಿರುವ ತಾಲಿಬಾನ್, ಅಲ್‌ಖೈದಾಗಳಂತಹ ಸಂಘಟನೆಗಳನ್ನು ತೋರಿಸುವಾಗ ಇಂತಹ ದೃಶ್ಯಗಳು ಸಹಜ. ಅದರಲ್ಲಿ ಅತಿರೇಕ ಅನ್ನುವಂತಹದ್ದು ಏನಿದೆ ಅನ್ನುವುದು ಸಾಮಾನ್ಯ ಪ್ರೇಕ್ಷಕನ ಪ್ರಶ್ನೆ. ಕಮಲ್‌ಹಾಸನ್ ಒಟ್ಟಾರೆಯಾಗಿ ತಾಲಿಬಾನ್, ಅಲ್‌ಖೈದಾ ಸಂಘಟನೆಗಳನ್ನು ಈ ರೀತಿಯಾಗಿ ಚಿತ್ರಿಸಿದ್ದಾರೆಯೇ ಹೊರತು ಇಡೀ ಮುಸ್ಲಿಂ ಸಮುದಾಯವನ್ನೋ, ಇಸ್ಲಾಂ ಧರ್ಮವನ್ನೋ ಅಲ್ಲ. ಇಷ್ಟಕ್ಕೂ ಚಿತ್ರದ ನಾಯಕ ಕಮಲ್‌ಹಾಸನಂತೆ

ಪುಟ 15 ಕ

'ವಿಶ್ವರೂಪಂ' ಬಿಡುಗಡೆಗೆ ಒತ್ತಾಯಿಸಿ ಡಿವೈಎಫ್‌ಐ ಪ್ರತಿಭಟನೆ

ಭಾರತೀಯ ಚಿತ್ರರಂಗದಲ್ಲಿ ಸೃಜನಶೀಲ ನಟನೆಂದೇ ಹೆಸರು ಮಾಡಿರುವ ಕಮಲಹಾಸನ್ ನಿರ್ದೇಶಿಸಿ, ನಾಯಕ ನಟನಾಗಿ ನಟಿಸಿರುವ 'ವಿಶ್ವರೂಪಂ' ಸಿನಿಮಾ ಬಿಡುಗಡೆಗೆ ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಹಾಗು ಕಮಲಹಾಸನ್ ಅಭಿಮಾನಿಗಳ ಸಂಘದ ಕಾರ್ಯಕರ್ತರು ಜ. 28 ರಂದು ಬೆಂಗಳೂರಿನ ಪುರಭವನದ ಎದುರು ಪ್ರತಿಭಟನೆ ನಡೆಸಿದರು.

ಭಯೋತ್ಪಾದನೆಯನ್ನು ವಸ್ತುವಾಗಿಟ್ಟುಕೊಂಡು ತಯಾರಾದ 100 ಕೋಟಿ ಬೃಹತ್ ಬಜೆಟ್‌ನ ಈ ಸಿನಿಮಾ ಅಭಿಮಾನಿಗಳಲ್ಲಿ ಭಾರಿ ನಿರೀಕ್ಷೆ ಹುಟ್ಟಿಸಿತ್ತು. ಆದರೆ ತಮಿಳು ನಾಡು ಸರ್ಕಾರ ಸಿನಿಮಾಗೆ ತಡೆಯಾಜ್ಞೆ ಕೋರಿ ನ್ಯಾಯಲಯದ ಮೆಟ್ಟಿಲೇರಿದ್ದರಿಂದಾಗಿ ಬಿಡುಗಡೆಗೆ ನಿರ್ಬಂಧ ಹೇರಲಾಗಿತ್ತು. ಮುಸ್ಲಿಂ ಜನಾಂಗವನ್ನು ಅವಹೇಳನ ಮಾಡಲಾಗಿದೆ ಎಂದು ಕೆಲ ಮುಸ್ಲಿಂ ಸಂಘಟನೆಗಳು ಆಪಾದಿಸಿದ್ದರಿಂದಾಗಿ ತಡೆಯಾಜ್ಞೆ ಕೋರಲಾಯಿತೆಂದು ಸರ್ಕಾರ ಸಮಜಾಯಿಸಿ ನೀಡಿದೆ.

ಕೇಂದ್ರ ಸೆನ್ಸಾರ್ ಮಂಡಳಿ ಒಪ್ಪಿಗೆ ಪತ್ರ ನೀಡಿದ ಮೇಲೂ ಸರ್ಕಾರ ಈ ರೀತಿಯ ಕ್ರಮಕ್ಕೆ ಮುಂದಾಗಿರುವುದು ದುರುದ್ದೇಶದಿಂದ ಕೂಡಿದೆ ಹಾಗೂ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಲಾತ್ಕಾರದಿಂದ ಕಿತ್ತುಕೊಳ್ಳುವುದೇ ಆಗಿದೆ ಎಂದು ಆರೋಪಿಸಿ ಹಾಗೂ ಬೆಂಗಳೂರಿನ ಚಿತ್ರ ಮಂದಿರಗಳಲ್ಲಿ ಪ್ರದರ್ಶನಕ್ಕೆ ತಾತ್ಕಾಲಿಕ ತಡೆ ನೀಡಿರುವ ಕ್ರಮವನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಂಗೀತ ನಿರ್ದೇಶಕ ವಿ. ಮನೋಹರ್ ಸರ್ಕಾರದ ಕ್ರಮವನ್ನು ಖಂಡಿಸುತ್ತಾ ಸೆನ್ಸಾರ್ ಮಂಡಳಿಯು ಸಿನಿಮಾವನ್ನು ಮೂರು ಹಂತಗಳಲ್ಲಿ ಪರೀಕ್ಷಿಸಿ ಸಿನಿಮಾದಲ್ಲಿ ಯಾವುದೇ ಆಕ್ಷೇಪಾರ್ಹ ಅಂಶಗಳು ಕಾಣದಿದ್ದಲ್ಲಿ ಮಾತ್ರವೇ ಒಪ್ಪಿಗೆ ಪತ್ರ ನೀಡಲಾಗುತ್ತದೆ. ಆದ್ದರಿಂದ ಸಿನಿಮಾ ಬಿಡುಗಡೆಗೆ ತಡೆ ನೀಡುವುದು ಸರಿಯಾದ ಕ್ರಮವಲ್ಲ ಎಂದು ಅಭಿಪ್ರಾಯಪಟ್ಟರು. ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ ಮಾತನಾಡಿ ಚಿತ್ರರಂಗದಲ್ಲಿ ಹಲವು ದಾಖಲೆಗಳನ್ನು ನಿರ್ಮಿಸಿರುವ ಕಮಲಹಾಸನ್ ಒಬ್ಬ ಜಾತ್ಯಾತೀತವಾದಿಯಾಗಿ, ಪ್ರಜಾಪ್ರಭುತ್ವವಾದಿ ನಡೆದುಕೊಂಡಿರುವವರು, ಅಂಥವರು ತನ್ನ ಚಿತ್ರದ ಮೂಲಕ ಒಂದು ಜನಾಂಗವನ್ನು ಅವಹೇಳನ ಮಾಡುತ್ತಾರೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ವಾಸ್ತವವಾಗಿ ಚಿತ್ರದಲ್ಲೂ ಆ ತರಹದ ಯಾವುದೇ ಆಕ್ಷೇಪಾರ್ಹ ಅಂಶಗಳಿಲ್ಲ ಎಂದು ದೃಡೀಕರಿಸಿರುವಾಗ ಚಿತ್ರದ ಬಿಡುಗಡೆಗೆ ನಿರ್ಬಂಧ ಹೇರಿರುವುದು ಖಂಡನಾರ್ಹ ಎಂದು ಹೇಳಿದರು. ಪ್ರತಿಭಟನೆಯಲ್ಲಿ ಕಮಲಹಾಸನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಆರ್. ವೇಲು, ಕಾರ್ಯದರ್ಶಿ ಕಮಲ್ ವೆಂಕಟೇಶ್, ಡಿವೈಎಫ್‌ಐ ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷರಾದ ಲಿಂಗರಾಜು, ಉತ್ತರ ಜಿಲ್ಲಾ ಸಂಚಾಲಕರಾದ ಎಸ್. ಪ್ರಸಾದ್, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಡಿವೈಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಪಿ. ನಾಗರಾಜು, ರವಿಚಂದ್ರನ್, ಬಾಲು, ಮೋಹನ್ ಬಾಬು ಹಾಗೂ ರಜನಿಕಾಂತ್ ಅಭಿಮಾನಿ ಗಳ ಸಂಘದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಇತ್ತೀಚೆಗೆ "ಕೇಸರಿ ಭಯೋತ್ಪಾದನೆ"ಯ ಬಗ್ಗೆ ಗೃಹಮಂತ್ರಿ ಶಿಂದೆಯವರ ಟಿಪ್ಪಣಿಗೆ ಬಿಜೆಪಿ/ಆರೆಸ್ಸೆಸ್ ಪಾಳೆಯದಲ್ಲಿ ಬೊಬ್ಬೆ ಎದ್ದ ಬೆನ್ನಲ್ಲೇ, ಚಿತ್ರನಟ ಶಾರುಖ್ ಖಾನ್ ವಿದೇಶಿ ಪ್ರಕಟಣೆಯೊಂದರಲ್ಲಿ ಬರೆದ ಯಾವುದೋ ಲೇಖನದ ಬಗ್ಗೆ ವಿವಾದ ಎದ್ದಿದೆ. ದೇಶದ ವಿಭಿನ್ನತೆಯಷ್ಟೆ ವಿಭಿನ್ನವಾಗಿರುವ, ಸ್ವಾತಂತ್ರ್ಯ ಮತ್ತು ದೇಶ-ವಿಭಜನೆಯ ನಂತರದ ಆರು ದಶಕಗಳಿಗೂ ಮೀರಿದ ಕಾಲಾವಧಿಯಲ್ಲಿ ಮಹಾತ್ಮ ಗಾಂಧಿಯವರನ್ನು, ಜತೆಗೆ ಲಕ್ಷ-ಲಕ್ಷ ಅಮಾಯಕ ಜನರನ್ನು ಆಹುತಿ ಪಡೆದಿರುವ ಈ ಭಯೋತ್ಪಾದನೆಯನ್ನು ಯಾವುದೋ ಸ್ವಯಂಕಲ್ಪಿತ ಆವರಣಗಳೊಳಗೆ ತುರುಕಿಸಲು ಪ್ರಯತ್ನಿಸುವ ಬದಲು, ಎಲ್ಲ ವಿಧಗಳ ಭಯೋತ್ಪಾದನೆಯನ್ನು ಯಾವುದೇ ರಾಜಿ ಮಾಡಿಕೊಳ್ಳದೆ ಎದುರಿಸಬೇಕಾಗಿದೆ, ಸೋಲಿಸಬೇಕಾಗಿದೆ-ಇದು ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಿಕೊಳ್ಳಲು, ಬಲಪಡಿಸಲು ಅಗತ್ಯವಾಗಿದೆ

ಮಹಾತ್ಮ ಗಾಂಧಿ ಮತ್ತು ಲಕ್ಷ-ಲಕ್ಷ ಅಮಾಯಕರ ಆಹುತಿ ಪಡೆದ ಭಯೋತ್ಪಾದನೆಯ ಈ ಪಿಡುಗು

ಸೀತಾರಾಂ ಯೆಚೂರಿ

65 ವರ್ಷಗಳ ಹಿಂದೆ ಇದೇ ದಿನ, ಜನವರಿ 30ರಂದು ಒಬ್ಬ ಹಿಂದೂ ಮತಾಂಧ ಮಹಾತ್ಮ ಗಾಂಧಿಯವರನ್ನು ಗುಂಡಿಟ್ಟು ಕೊಂದ. 29 ವರ್ಷಗಳ ಹಿಂದೆ, 1984ರಲ್ಲಿ ಆಗಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರನ್ನು ಖಲಿಸ್ತಾನೀ ಉಗ್ರಗಾಮಿಗಳು ಹತ್ಯೆಗೈದರು. 22 ವರ್ಷಗಳ ಹಿಂದೆ, 1991ರ ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ, ಆಗ ಪ್ರಧಾನ ಮಂತ್ರಿಗಳಾಗಿದ್ದ ರಾಜೀವ ಗಾಂಧಿಯವರನ್ನು ಒಂದು ಎಲ್‌ಟಿಟಿಇ 'ಮಾನವ ಬಾಂಬ್' ಆಹುತಿ ಪಡೆಯಿತು.

ಸ್ವಾತಂತ್ರ್ಯ ಮತ್ತು ದೇಶ-ವಿಭಜನೆಯ ನಂತರದ ಆರು ದಶಕಗಳಿಗೂ ಮೀರಿದ ಈ ಕಾಲಾವಧಿಯಲ್ಲಿ ಲಕ್ಷ-ಲಕ್ಷ ಜನ, ಅವರಲ್ಲಿ ಹೆಚ್ಚಿನವರು ಅಮಾಯಕ ಜನರು, ಈ ಭಯೋತ್ಪಾದಕ ಹಿಂಸಾಚಾರಕ್ಕೆ ಆಹುತಿಯಾಗಿದ್ದಾರೆ-ಕೋಮುವಾದ ಮತ್ತು ಮೂಲಭೂತವಾದ ಎಸಗಿದ ಹಿಂಸಾಚಾರಗಳಿಗೆ. ಇವುಗಳಲ್ಲಿ ಇತ್ತೀಚಿನದೆಂದರೆ ಗುಜರಾತಿನಲ್ಲಿ 2002ರ ಭೀಕರ ಕೋಮುವಾದಿ ನರಹತ್ಯಾಕಾಂಡ. ಮೂಲಭೂತವಾದಿ ಶಕ್ತಿಗಳು ಗಡಿಯಾಚೆಯಿಂದ ಪ್ರಾಯೋಜಿಸಿದ ಭಯೋತ್ಪಾದನೆ 2008ರಲ್ಲಿ, ಮುಂಬೈಯಲ್ಲಿ 26/11 ಭಯೋತ್ಪಾದಕ ದಾಳಿಗಳಲ್ಲಿ ತಾರಕಕ್ಕೇರಿತು. ದೇಶದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿರುವ ವಿವಿಧ ಭಯೋತ್ಪಾದಕ ಸಂಘಟನೆಗಳು-ವಿಶೇಷವಾಗಿ ಈಶಾನ್ಯ ಭಾಗದಲ್ಲಿ. ಮಾವೋವಾದಿಗಳ ರಾಜಕೀಯ ಹಿಂಸಾಚಾರ-ದೇಶದ ಈಗಿನ ಪ್ರಧಾನ ಮಂತ್ರಿಗಳು ಇದನ್ನು "ಭಾರತದ ಆಂತರಿಕ ಭದ್ರತೆಗೆ ಅತ್ಯಂತ ಗಂಭೀರ ಬೆದರಿಕೆ" ಎಂದಿದ್ದಾರೆ. ಇನ್ನು ಜಾತಿ-ಆಧಾರಿತ ಭಯೋತ್ಪಾದಕ ಹಿಂಸಾಚಾರ. ಹೆಚ್ಚುತ್ತಿರುವ ಲಿಂಗ-ಆಧಾರಿತ ಭಯೋತ್ಪಾದಕ ಹಿಂಸಾಚಾರದ ಪ್ರತೀಕವಾಗಿ ದಿಲ್ಲಿಯ ಪಾಶವೀ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಇಡೀ ದೇಶವೇ ಕ್ರೋಧಾವಿಷ್ಟವಾಗಿ ಎದ್ದು ನಿಲ್ಲುವಂತೆ ಮಾಡಿದೆ.

ಭಾರತದಲ್ಲಿ ಭಯೋತ್ಪಾದಕ ಹಿಂಸಾಚಾರ ಮತ್ತು ಭಯೋತ್ಪಾದನೆಯ ರಾಜಕೀಯ ದೇಶದ ವಿಭಿನ್ನತೆಯಷ್ಟೆ ವಿಭಿನ್ನವಾದುದು. ಈ ಭಯೋತ್ಪಾದನೆಯನ್ನು ಯಾವುದೋ ಸ್ವಯಂಕಲ್ಪಿತ ಆವರಣಗಳೊಳಗೆ ತುರುಕಿಸಲು ಪ್ರಯತ್ನಿಸುವ ಬದಲು, ಎಲ್ಲ ವಿಧಗಳ ಭಯೋತ್ಪಾದನೆಯನ್ನು ಯಾವುದೇ ರಾಜಿ ಮಾಡಿಕೊಳ್ಳದೆ ಎದುರಿಸಬೇಕಾಗಿದೆ, ಸೋಲಿಸಬೇಕಾಗಿದೆ-ಇದು ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಿಕೊಳ್ಳಲು, ಬಲಪಡಿಸಲು ಅಗತ್ಯವಾಗಿದೆ.

ಪರಸ್ಪರ ಪೋಷಣೆ, ಬಲವರ್ಧನೆ

ಕಾಂಗ್ರೆಸ್ ಪಕ್ಷದ ಜೈಪುರ 'ಚಿಂತನ ಶಿಬಿರ'ದಲ್ಲಿ "ಕೇಸರಿ ಭಯೋತ್ಪಾದನೆ"ಯ ಬಗ್ಗೆ ಗೃಹಮಂತ್ರಿ ಶಿಂದೆಯವರ ಟಿಪ್ಪಣಿಗೆ ಬಿಜೆಪಿ/ಆರೆಸ್ಸೆಸ್ ಪಾಳೆಯದಲ್ಲಿ ಒಂದು ಬೊಬ್ಬೆ ಎದ್ದ ಬೆನ್ನಲ್ಲೇ, ಈಗ ಚಿತ್ರನಟ ಶಾರುಖ್ ಖಾನ್ ವಿದೇಶಿ ಪ್ರಕಟಣೆಯೊಂದರಲ್ಲಿ ಬರೆದ ಯಾವುದೋ ಲೇಖನದ ಬಗ್ಗೆ ವಿವಾದ ಎದ್ದಿದೆ. ಆ ಚಿತ್ರನಟ ತಾನು ಯಾವುದೇ ವಿವಾದಕ್ಕೆ ಯಾವುದೇ ಅವಕಾಶ ಕೊಟ್ಟಿಲ್ಲ, ಅಥವ ತಾನು "ಭಾರತದಲ್ಲಿ ಅಸುರಕ್ಷಿತ, ತೊಂದರೆಗೀಡಾಗಿದ್ದೇನೆ ಅಥವ ಆತಂಕಿತನಾಗಿದ್ದೇನೆ" ಎಂಬ ಇಂಗಿತವನ್ನೇನೂ ಕೊಟ್ಟಿಲ್ಲ ಎಂದಿದ್ದಾರೆ. ಆ ಲೇಖನವನ್ನೊಮ್ಮೆ ಓದಿ ನೋಡಿ, " .ಕೆಲವು ಸಂದರ್ಭಗಳಲ್ಲಿ ನಾನೊಬ್ಬ ಮುಸ್ಲಿಂ ಚಿತ್ರನಟನಾಗಿರುವುದನ್ನು ಮತಾಂಧರು ಮತ್ತು ದಾರಿ ತಪ್ಪಿದ ಮತೀಯ ಸಿದ್ಧಾಂತಗಳ ಸಂಕುಚಿತ ಬುದ್ಧಿಯ ಮಂದಿ ತಮ್ಮ ಸಣ್ಣ ಪ್ರಯೋಜನಗಳಿಗಾಗಿ ದುರುಪಯೋಗ ಪಡಿಸಿಕೊಂಡಿದ್ದಾರೆ" ಎಂದು ಒತ್ತಿ ಹೇಳಿದ್ದೇನಷ್ಟೇ ಎಂದಾತ ಹೇಳಿದ್ದಾರೆ. ವ್ಯಂಗ್ಯವೆಂದರೆ ಇದನ್ನು ಸಾಬೀತು ಪಡಿಸಲೋ ಎಂಬಂತೆ ಪಾಕಿಸ್ತಾನದ ಆಂತರಿಕ ವ್ಯವಹಾರಗಳ ಮಂತ್ರಿ ರಹಮಾನ್ ಮಲಿಕ್ ಈ ಚಿತ್ರನಟನ ಭದ್ರತೆಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ತಕ್ಷಣವೇ ಭಾರತದ ಗೃಹ ಕಾರ್ಯದರ್ಶಿಯಿಂದ ಇದಕ್ಕೆ ಪ್ರತ್ಯುತ್ತರ ಬಂತು. ಭಾರತದ ಸರಕಾರ ಮತ್ತು ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ಪಾಕಿಸ್ತಾನಕ್ಕೆ ನಿಮ್ಮದನ್ನು ಮೊದಲು ನೀವು ನೋಡಿಕೊಳ್ಳಿ, ಭಯೋತ್ಪಾದನೆಗೆ ಆಹುತಿಯಾಗುತ್ತಿರುವ ನಿಮ್ಮದೇ ನಾಗರಿಕರ ಬಗ್ಗೆ ಕಾಳಜಿ ವಹಿಸಿ ಎಂದು ಬಹಿರಂಗವಾಗಿ ಹೇಳಿವೆ.



ಇದೇ ರೀತಿ, ಇದಕ್ಕೆ ಮೊದಲು, ಎಲ್ಲ ಬಣ್ಣಗಳ ಭಯೋತ್ಪಾದನೆ ಪರಸ್ಪರ ಪೋಷಿಸಿ, ಬಲಪಡಿಸುತ್ತವೆ ಎಂಬುದನ್ನು ಸಾಬೀತು ಪಡಿಸಲೋ ಎಂಬಂತೆ ಮುಂಬೈ 26/11 ಭಯೋತ್ಪಾದಕ ದಾಳಿಗಳ ಪ್ರಮುಖ ಆರೋಪಿ ಹಾಗೂ ಸದ್ಯಕ್ಕೆ ಪಾಕಿಸ್ತಾನದಲ್ಲಿ ಆಶ್ರಯ ಪಡೆದಿರುವ ಹಾಫಿಝ್ ಸಯೀದ್ ಗೃಹಮಂತ್ರಿಗಳ 'ಕೇಸರಿ ಭಯೋತ್ಪಾದನೆ' ಕುರಿತ ಟಿಪ್ಪಣಿಯ ಮೇಲೆರಗಿ, ಇದು ತಮ್ಮ ಭಯೋತ್ಪಾದನೆಯ ರಾಜಕೀಯದ ಒಂದು ಅನುಮೋದನೆ ಎಂದಿದ್ದಾನೆ. ನೆನಪಿಸಿಕೊಳ್ಳಿ, 1999ರಲ್ಲಿ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳ ಮೊದಲು, ಲಷ್ಕರ್-ಎ-ತಯ್ಯೆಬದ ಮಾಹಿತಿ ಕಾರ್ಯದರ್ಶಿಯನ್ನು, ಭಾರತದಲ್ಲಿ ಮುಂದಿನ ಸರಕಾರವನ್ನು ಯಾರು ರಚಿಸಬೇಕು ಎಂದು ಕೇಳಿದಾಗ "ಬಿಜೆಪಿ ನಮಗೆ ಸೂಕ್ತ. ಒಂದೇ ವರ್ಷದಲ್ಲಿ ಅವರು ನಮ್ಮನ್ನು ಒಂದು ಪರಮಾಣು ಮತ್ತು ಕ್ಷಿಪಣಿ ಸಜ್ಜಿತ ಶಕ್ತಿಯಾಗಿ ಮಾಡಿದ್ದಾರೆ. ಲಷ್ಕರ್-ಎ-ತಯ್ಯೆಬಕ್ಕೆ ಬಿಜೆಪಿಯ ಹೇಳಿಕೆಗಳಿಂದಾಗಿ ಒಂದು ಉತ್ತಮ ಸ್ಪಂದನ ಸಿಗುತ್ತಿದೆ. ಮೊದಲಿಗಿಂತ ಈಗ ಎಷ್ಟೋ ಉತ್ತಮ. ಅವರು ಮತ್ತೆ ಅಧಿಕಾರಕ್ಕೆ ಬರಲಿ ಎಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ. ನಾವಾಗ ಇನ್ನೂ ಬಲಶಾಲಿಯಾಗಿ ಮೂಡಿ ಬರುತ್ತೇವೆ" ಎಂದಿದ್ದ(ಹಿಂದುಸ್ತಾನ್ ಟೈಮ್ಸ್, ಜುಲೈ 19, 1999).

'ಹಿಂದು ಭಯೋತ್ಪಾದನೆ' ಅಲ್ಲ, 'ಹಿಂದುತ್ವ ಭಯೋತ್ಪಾದನೆ'

ಎಲ್ಲ ವಿಧಗಳ ಭಯೋತ್ಪಾದನೆಯನ್ನು ಎದುರಿಸಬೇಕಾಗಿದೆ, ಅದರಲ್ಲಿ 'ಹಿಂದುತ್ವ ಭಯೋತ್ಪಾದನೆ'ಯೂ ಸೇರಿದೆ, 'ಹಿಂದು ಭಯೋತ್ಪಾದನೆ' ಅಲ್ಲ. ಯಾವುದೆ ಧಾರ್ಮಿಕ ಸಮುದಾಯವನ್ನು, ಆ ಧರ್ಮವನ್ನು ಅಂಗೀಕರಿಸಿರುವ ವ್ಯಕ್ತಿಗಳ ಭಯೋತ್ಪಾದಕ ಚಟುವಟಿಕೆಗಳಿಗೆ ಜವಾಬ್ದಾರರನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಆದರೆ ಇದೇ ಅಳತೆಗೋಲು ಎಲ್ಲ ಧರ್ಮಗಳಿಗೂ ಅನ್ವಯವಾಗಬೇಕು. ಆರೆಸ್ಸೆಸ್‌ಗೆ ಮಾತ್ರ ಹಾಗಲ್ಲ. "ಇಸ್ಲಾಮಿಕ್ ಭಯೋತ್ಪಾದನೆಯನ್ನು ಕಠೋರವಾಗಿ ಹತ್ತಿಕ್ಕಬೇಕು" ಎಂಬ ನಿರ್ಣಯಗಳನ್ನು ಅಂಗೀಕರಿಸುವುದು ಅದರ ವಾಡಿಕೆಯೇ ಆಗಿ ಬಿಟ್ಟಿದೆ. ಇದು ಕೇವಲ ಇಬ್ಬಗೆ ನೀತಿಯ ದ್ಯೋತಕವಲ್ಲ. ಅದು ಭಾರತದ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ಉನ್ಮತ್ತ ಧಾರ್ಮಿಕ ಅಸಹಿಷ್ಣುತೆಯನ್ನು ಆಧರಿಸಿದ ಆರೆಸ್ಸೆಸ್‌ನ "ಹಿಂದೂ ರಾಷ್ಟ್ರ" ಆವೃತ್ತಿಯ ಸೈದ್ಧಾಂತಿಕ ಬೇರನ್ನು ಬಿಂಬಿಸುತ್ತದೆ.

'ಕೇಸರಿ ಭಯೋತ್ಪಾದನೆ' ಕುರಿತ ಗೃಹಮಂತ್ರಿಗಳ ಹೇಳಿಕೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ತನಿಖೆಗಳನ್ನು ಆಧರಿಸಿರಬಹುದು. ಜುಲೈ 2010ರಲ್ಲಿ ಆಗಿನ ಗೃಹ ಮಂತ್ರಿಗಳು ಎನ್‌ಐಎ ಸಮಝೌತ ಎಕ್ಸ್‌ಪ್ರೆಸ್ ಮೇಲಿನ ಭಯೋತ್ಪಾದಕ ದಾಳಿಯ ತನಿಖೆ ನಡೆಸುತ್ತದೆ ಮತ್ತು ಇದರ ಹಿಂದಿರುವ ಸಂಪೂರ್ಣ ಪಿತೂರಿಯನ್ನು, ಮಾಲೆಗಾಂವ್(ಸಪ್ಟಂಬರ್ 8, 2006), ಹೈದರಾಬಾದಿನ ಮಕ್ಕಾ ಮಸೀದಿ(ಮೇ 18, 2007) ಮತ್ತು ಅಜ್ಮೇರ್‌ನ ದರ್ಗಾ(ಅಕ್ಟೋಬರ್ 11, 2007) ಮೇಲಿನ ಭಯೋತ್ಪಾದಕ ದಾಳಿಗಳ ಆರೋಪಿಗಳೊಡನೆ ಇರುವ ಕೊಂಡಿಗಳನ್ನು ಪರೀಕ್ಷಿಸುವುದಾಗಿ ಸಂಸತ್ತಿನಲ್ಲಿ ಪ್ರಕಟಿಸಿದ್ದರು. ಫೆಬ್ರುವರಿ 18, 2007 ರಂದು ದಿಲ್ಲಿ-ಲಾಹೋರ್ ಸಮಝೌತ ಎಕ್ಸ್‌ಪ್ರೆಸ್‌ನ ಎರಡು ಕೋಚ್‌ಗಳಲ್ಲಿ ನಡೆದ ಬಾಂಬುಗಳ ಸ್ಫೋಟದಲ್ಲಿ 68 ಮಂದಿ ಸಾಯಿಸಲ್ಪಟ್ಟರು.

ಇದಕ್ಕೆ ಮೊದಲು ಕೂಡ, ಕೇಂದ್ರ ಸರಕಾರದ ಗಮನವನ್ನು ಕೆಲವು ಆರೆಸ್ಸೆಸ್‌ನ ಸಂಘಟನೆಗಳನ್ನು ದೇಶದ ಹಲವೆಡೆ ಬಾಂಬ್ ಸ್ಫೋಟಗಳೊಂದಿಗೆ ತಳಕು ಹಾಕುವ ವರದಿಗಳತ್ತ ಸೆಳೆಯಲಾಗಿತ್ತು. ಅಕ್ಟೋಬರ್ 13, 2008ರಂದು ನಡೆದ ರಾಷ್ಟ್ರಿಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಸಿಪಿಐ(ಎಂ) ಮಂಡಿಸಿದ ಹೇಳಿಕೆ ಹೀಗಂದಿತ್ತು: "ಕಳೆದ ಕೆಲವು ವರ್ಷಗಳಲ್ಲಿ ಪೋಲೀಸ್ ತನಿಖೆಗಳು ದೇಶದ ಹಲವೆಡೆ ನಡೆದಿರುವ ಬಾಂಬ್ ಸ್ಫೋಟಗಳಲ್ಲಿ ಭಜರಂಗ ದಳ ಮತ್ತು ಇತರ ಆರೆಸ್ಸೆಸ್

ಪುಟ 15ಕ್ಕೆ

12 CITU ರಾಜ್ಯ ಸಮ್ಮೇಳನ

ಉತ್ಸಾಹಭರಿತ ಯಶಸ್ವಿ ರಾಜ್ಯ ಸಮ್ಮೇಳನ – ಬೃಹತ್ ರ‍್ಯಾಲಿ

"ಬೆಲೆ ಏರಿಕೆ, ಖಾಸಗೀಕರಣ, ಗುತ್ತಿಗೀಕರಣ ನೀತಿಗಳ ವಿರುದ್ಧ ಆಳುವವರಿಗೆ ಕಾರ್ಮಿಕ ವರ್ಗವೇ ಸವಾಲೆಸೆಯುವ ಶಕ್ತಿ"

ಟಣ್, ಟಣ್ . ಟಣ್ ,
ಟಣಾ ಟಣಾ ಟಣಾ ಟಣ್..........
ಟಣ್, ಟಣ್ , ಟಣ್ ,
ಟಣಾ ಟಣಾ ಟಣಾ ಟಣ್..........

ಸಣಕಲು ದೇಹದ ಆ ವಯೋವೃದ್ದ- ಗೋಪಾಲ ಹನುಮಂತ ಗೌಡ ಕಣ್ಣು ಮುಚ್ಚಿದ ಧ್ಯಾನಸ್ಥ ಯೋಗಿಯಂತೆ ಬಡಿಯುತ್ತಿರುವ ಜಾಗಟೆಯ ಲಯಬದ್ದ ಸದ್ದು ಸುತ್ತಮುತ್ತಲ ಎಲ್ಲರ ಕಿವಿಗಳನ್ನು ತುಂಬುತ್ತಿದೆ. ಅದು ಸುಗ್ಗಿ ಕುಣಿತ. ಅಲ್ಲಿ ಏಳೆಂಟು ಯುವಕರ ಸಾಲುಗಳೆರಡು. ಮುಖಕ್ಕೆ ತೆಳು ಗುಲಾಬಿ ಬಣ್ಣ, ದಟ್ಟ ಕಪ್ಪು ಬಣ್ಣದ ಮೀಸೆ, ಹುಬ್ಬುಗಳು, ಯಕ್ಷಗಾನದ ಪಾತ್ರಧಾರಿಗಳಂತಹ ಬಣ್ಣ ಬಣ್ಣದ ವೇಷ ಭೂಷಣ. ಕೈಯಲ್ಲಿ ನಂದಿ ಕೋಲಿನಂತಹದ್ದೇ ಎತ್ತರದ ಬಣ್ಣದ ಕೋಲು. (ಕೋಲಿನ ತುದಿಯಲ್ಲಿ ಸಿಐಟಿಯುವಿನ ಕೆಂಬಾವುಟ.) ಅದು 'ಜಲ್ಲದ ಕುಣಿತ' ಅಂತಲೂ ಕರೆಯುವ ಕುಣಿತ. ಜಾಗಟೆ ಸದ್ದನ್ನೇ ಅನುಸರಿಸಿ ಈ ಜಾನಪದ ಕಲಾವಿದರು ಹಾಕುವ ಹೆಜ್ಜೆ...ಗೆಜ್ಜೆಯ ಸದ್ದು.



ಜೊತೆಗೆ ವೃಧ್ಧ ವೆಂಕಟರಮಣ ಬೀರಪ್ಪಗೌಡ ಬಡಿಯುವ 'ಚಂಡೆ'ಯಂತಹ 'ಕೆಂಡ' ವಾದ್ಯದ ಸದ್ದು.....

ಹಿಂದೆ ಮತ್ತೊಂದು. ಅದು ಸಿದ್ದಾಪುರ ತಾಲ್ಲೂಕಿನ ಅರೆಹಳ್ಳದ ಡೊಳ್ಳು ಕುಣಿತದ ತಂಡ. ಹಳದಿ ಪೇಟ, ಕವಡೆಸರ, ಚಿರತೆ ಮೈ ಬಣ್ಣದ ಮೇಲು ವಸ್ತ್ರ, ಸೊಂಟಕ್ಕೆ ಕಂಬಳಿ ಉಡುಗೆ, ಎದೆ ಮೇಲೆ ಅಡ್ಡಡ್ಡ ಕರಿ ಕಂಬಳಿ ಹುರಿ ಮತ್ತು ಬಿಳಿ ಹಗ್ಗದ ಹುರಿ. ಕಲಾವಿದರ ಕೊರಳಿಗೆ ನೇತು ಬಿದ್ದಿರುವ ದೊಡ್ಡ ದೊಡ್ಡ ಡೊಳ್ಳು ವಾದ್ಯಗಳು. ನಾನಾ ಆಕಾರವಿದ್ದರೂ ಏಕ ಕಾಲಕ್ಕೆ ...ಡಂ...ಡಂ...ಡಂ... ಸದ್ದು ಮೊಳಗಿಸುವ ಡೊಳ್ಳು, ಹದಕ್ಕೆ ತಕ್ಕಂತೆ ಗಿಲಿಗಿಚ್ಚಿ ನಾದ.

ಎಲ್ಲಕ್ಕೂ ಮುಂದೆ ಬೇಡರ ವೇಷ. ರೆಕ್ಕೆ ಬಿಚ್ಚಿದ ನವಿಲಿನಂತಹ ಒಟ್ಟು ಆಕಾರ, ನವಿಲಗರಿಯ ಅಲಂಕಾರ. ಮುಖ...ಅದೋ ಮುಗ್ದ ಮಕ್ಕಳು ಬೆಚ್ಚುವ ವಿಚಾರ. ರೋಷದಿಂದ ಮುಂದೆ ಮುನ್ನುಗ್ಗುವಂತಹ 'ಹುಲಿ ವೇಷ'ವನ್ನು ನೆನಪಿಸುವ ಕುಣಿತ. ಸೊಂಟಕ್ಕೆ ಹಗ್ಗ ಬಿಗಿದು ಹೊರ ನುಗ್ಗದಂತೆ ಹಿಂದಕ್ಕೆ ಎಳೆದು ನಿಯಂತ್ರಿಸುವ ಇಬ್ಬರು ಕಟ್ಟಾಳುಗಳ ಹಿಡಿತ.

ಅದರ ಹಿಂದೆ ಸಿಐಟಿಯು 12ನೇ ರಾಜ್ಯ ಸಮ್ಮೇಳನದ ಬ್ಯಾನರ್.

ಬ್ಯಾನರ್‌ನ ಹಿಂದೆ ಸಿಐಟಿಯು ನಾಯಕರ ಹಿಂಡು. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್, ಕಾರ್ಯದರ್ಶಿ ಎಸ್. ವರಲಕ್ಷ್ಮಿ, .ಕೆ ಮಹಾಂತೇಶ್, ವೀರಾಸ್ವಾಮಿ ಮುಂತಾದವರು. ಸಮ್ಮೇಳನ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಶಾಂತಾರಾಮ ನಾಯಕ್ ಇತರರು. ಅವರ ಹಿಂದೆ ಶಿಸ್ತುಬದ್ದವಾಗಿ ಸಾಲಾಗಿ ಸಾಗಿಬರುವ ಕಾರ್ಮಿಕರ ದಂಡು. ಕೆಂಪು ವಸ್ತ್ರಧಾರಿಗಳ ಹಿಂಡು. ಶಿರಸಿಯ ಜನಕ್ಕೆ ಮನೆ ಬಿಟ್ಟು ಅಂಗಳ ದಾಟಿ ಬೀದಿಗೆ ಬಂದು ನಿಲ್ಲುವ ತವಕ ಪಡಲು ಇನ್ನೇನು ಕಾರಣ ಬೇಕು.

ಜನವರಿ 27, 2013. ಭಾನುವಾರ ಬೆಳಿಗ್ಗೆ. ಬೆಳಗಿನ ಮಂಜು ಕರಗಿ ಜನ ಕೆಲಸ ಕಾರ್ಯ, ಖರೀದಿಗಳಿಗೆ ಹೊರ ಬೀಳುವ ಹೊತ್ತಲ್ಲಿ ಕರ್ನಾಟಕ ರಾಜ್ಯ ಪ್ರಮುಖ ಪಟ್ಟಣಗಳಲ್ಲೊಂದಾದ 'ಶಿರಸಿ'ಯ ಮುಖ್ಯ ರಸ್ತೆಗಳ ತುಂಬ ಜನ ನೆರೆದು ಗಿಜಿಗುಟ್ಟುತ್ತಿದ್ದರು. ಕೆಂಬಾವುಟ, ಕೆಂಬಾವುಟ, ಸಾವಿರಾರು ಕೆಂಬಾವುಟಗಳು ಶಿರಸಿಯ ಬೀದಿಯಲ್ಲಿ ಬೆಳ್ಳಂಬೆಳಗ್ಗೆ ಪಟಪಟನೆ ಹಾರುತ್ತಿದ್ದವು.



ಶಿರಸಿ .... ದಿಕ್ಕುಗಳಿಂದ ಹೊರಟು ಸಂತೆ ಪೇಟೆಯಂತಹ ಹಳೆ ಬಸ್ ನಿಲ್ದಾಣದ ಬಳಿಯಲ್ಲಿ ಒಂದಾದ ಈ ಮೆರವಣಿಗೆಯನ್ನು ಅಂಗಡಿ, ಮುಂಗಟ್ಟು, ಔಷಧಿ ಮಳಿಗೆಗೆ, ಮಂಡಿಗಳಿಂದ ಜನ ಕುತೂಹಲದಿಂದ ನೋಡೇ ನೋಡಿದರು. ಮೆರವಣಿಗೆ ನೋಡಿ ಸಂತೋಷಗೊಂಡವರು ಮುಖ ಅರಳಿಸಿದರು. ಕೆಲವರು ಕೈ ಬೀಸಿದರು.

" ಸಿಐಟಿಯು 12 ನೇ ರಾಜ್ಯ ಸಮ್ಮೇಳನಕ್ಕೆ ಮುನ್ನಡೆಯಿರಿ...ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಬೇಡವೇ ಬೇಡ... ಬೆಲೆ ಏರಿಕೆ ನಿವಾರಿಸದ ಕೇಂದ್ರ ರಾಜ್ಯ ಸರ್ಕಾರಗಳಿಗೆ ಧಿಕ್ಕಾರ... ಕನಿಷ್ಟ ಕೂಲಿ 10.000 ರೂ. ಸಿಗಲೇ ಬೇಕು... ಅಂಗನವಾಡಿ ನೌಕರರನ್ನು ಕಾಯಂ ಮಾಡಿ... ಪಂಚಾಯತಿ ನೌಕರರಿಗೆ ಸಮರ್ಪಕ ವೇತನ ಸಿಗಲೇಬೇಕು... ಹಮಾಲಿ ನೌಕರರಿಗೆ ಸೇವಾ ಭದ್ರತೆ- ಉದ್ಯೋಗ ಭದ್ರತೆ ದೊರಕಲೇ ಬೇಕು..." ಘೋಷಣೆಗಳು ಒಂದಕ್ಕೊಂದು ಪೈಪೋಟಿ ನಡೆಸುತ್ತಿದ್ದವು.

ಹೊಸಪೇಟೆ ರಸ್ತೆ, ದೇವಿಕೆರೆ, ಭೂತೇಶ್ವರ ಪ್ರಸನ್ನ ದೇವಸ್ಥಾನ, ಚರ್ಚ್ ರಸ್ತೆ, ನಟರಾಜ ರಸ್ತೆ, ಶಿರಸಿ ಹಳೆ ಊರಿನ ಭಾಗಗಳು, ಹೊಸ ಬಡಾವಣೆಗಳು ಎಲ್ಲೆಲ್ಲೂ ಹೋ ಹೋ ಎಂದು ಹೊರಟಿತು. ಬುರ್ಕಾ ತೊಟ್ಟು ಕೈಲಿ ಬ್ಯಾಸ್ಕೆಟ್ ಹಿಡಿದು ಮನೆಯಿಂದ ಖರಿದಿಗೆ ಹೊರಟು ನಿಂತ ಹಿರಿಯ ಮಹಿಳೆಯರು, ಸ್ಕೂಟಿಯೋ, ಮತ್ತಾವುದೋ ಬೈಕು, ಮೊಪೆಡ್‌ಗಳಲ್ಲಿ ಹೊರ ಹೊರಟಿದ್ದ ಯುವತಿಯರು, ಅಂಗಡಿಗಳ ಮುಂದೆ ಖರೀದಿಗೆ ನಿಂತಿದ್ದ ಗಂಡಸರು, ವ್ಯಾಪಾರಸ್ಥರು ಎಲ್ಲರೂ ಮೆರವಣಿಗೆಯನ್ನು ತಿರು ತಿರುಗಿ ನೋಡಿದರು. ಜನವರಿಯ ಚಳಿಯನ್ನು ಜಾಡಿಸಿ ಒದ್ದು ಎದ್ದು ಭಾನುವಾರದ ಟ್ಯೂಷನ್ನಿಗೆ ಪಾರೀ ಚೀಲ ಏರಿಸಿ ಹೊರಟ ವಿದ್ಯಾರ್ಥಿಗಳು ಜಾನಪದ ಕಲಾವಿದರ ನಾನಾ





ಪ್ರಕಾರಗಳ ಕುಣಿತ, ವಾದ್ಯಗಳ ಸದ್ದು ಆಕರ್ಷಣೆಗೆ ಎಷ್ಟೋ ಹೊತ್ತು ನಿಂತೆ ಬಿಟ್ಟರು.

ದೂರದಿಂದಲೇ ಸದ್ದು ಕೇಳಿ ಓಡಿ ಬರುವ ಚಿಣ್ಣರು, ದಾರಿಗೆ ಬೀಳುವ ಮಕ್ಕಳನ್ನು ತಡೆಯುವ ಹೆಸರಿನಲ್ಲಿ ತಾವು ಆಚೆ ಬಂದು ಮೆರವಣಿಗೆ ಕಣ್ತುಂಬಿಕೊಳ್ಳುವ ದೊಡ್ಡವರು.... ಯಾರನ್ನೂ ಮೆರವಣಿಗೆಯ ಆಕರ್ಷಣೆ ತಟ್ಟದೇ ಬಿಡಲಿಲ್ಲ. ಹೀಗೆ ಹೊರಟ ಮೆರವಣಿಗೆ ತಲುಪಿದ್ದು... ಮೈದಾನಕ್ಕೆ. ಸುಡು ಬಿಸಿಲಿನಲ್ಲೂ ಪ್ರಚಂಡ ಸಂಖ್ಯೆಯಲ್ಲಿ ಜನರನ್ನು ಅಣಿನೆರೆಸಿದ್ದೀರಿ ಎಂದು ಹಾರ್ದಿಕ ಶುಭಾಶಯ ಹೇಳಿ ಮೆಚ್ಚಿಗೆ ಸೂಚಿಸಿದರು ತಪನ್.

ಪ್ರಸ್ತುತ ಸಂದರ್ಭದಲ್ಲಿ ದೇಶವನ್ನು ದುರುಂತದಿಂದ ಕಾಪಾಡುವ ಹೊಣೆ ಕಾರ್ಮಿಕ ವರ್ಗದ ಮೇಲೆ ಬಿದ್ದಿದೆ. ದೇಶದ ಶತ್ರುಗಳು ಅಧಿಕಾರದ ವೇದಿಕೆ ಮೇಲಿದ್ದಾರೆ. ಇಡೀ ಜಗತ್ತಿನ ಬಂಡವಾಳಶಾಹಿ ಬಿಕ್ಕಟ್ಟಿನಲ್ಲಿದೆ.







ಮುಂದುವರಿದ ಬಂಡವಾಳಶಾಹಿ ದೇಶಗಳ ಹಣಕಾಸು ವ್ಯವಸ್ಥೆ ಕುಸಿದು ಬಿದ್ದಿದೆ. ಬಿಕ್ಕಟ್ಟು ನಮ್ಮ ದೇಶವನ್ನೂ ತಟ್ಟಿದೆ. ಬ್ಯಾಂಕ್‌ನಲ್ಲಿ ಹಣ ಇಡುವುದು ಸಾಮಾನ್ಯ ಜನ. ಶ್ರೀಮಂತರು ಅಲ್ಲಿ ಹಣ ಇಡುವುದಿಲ್ಲ. ಈ ಸರ್ಕಾರ ಪಾಠ ಕಲಿತಿಲ್ಲ. ಇಡೀ ದೇಶದ ಆರ್ಥಿಕತೆಯನ್ನು ಜೂಜುಕೋರತನಕ್ಕೆ, ಅನಾಹುತಕ್ಕೆ ತಳ್ಳುತ್ತಿದ್ದಾರೆ. ಬ್ಯಾಂಕುಗಳ ಖಾಸಗೀಕರಣ, ವಿಮಾ ಖಾಸಗೀಕರಣ ಮಾಡಲಾಗುತ್ತಿದೆ. ಯುರೋಪ್ ಮುಂತಾದ ರಾಷ್ಟ್ರಗಳಲ್ಲಿ ಅಲ್ಲಿ ದಿವಾಳಿ ಎದ್ದ ಖಾಸಗಿ ಬ್ಯಾಂಕ್, ವಿಮಾ ಕಂಪನಿಗಳಿಗೆ ಸರ್ಕಾರಗಳು ಬೇಲ್ ಕೊಟ್ಟವು. ಕೊನೆಗೆ ಸರ್ಕಾರಗಳೇ ದಿವಾಳಿ ಎದ್ದವು. ಹೀಗೆ ಇಡೀ ಆರ್ಥಿಕತೆಯನ್ನು ಮುಳುಗಿಸಿದ ವಿದೇಶಿ ಬ್ಯಾಂಕುಗಳನ್ನು ನಮ್ಮ ದೇಶದ ಆಳುವವರು ಆಹ್ವಾನಿಸುತ್ತಿದ್ದಾರೆ. 60–70 ಲಕ್ಷ ಉದ್ಯೋಗ ನಾಶ ಆಗಿದೆ, ದೇಶ ವಿರೋಧಿ ವಿಮಾ ಮಸೂದೆ ಅಂಗೀಕಾರಕ್ಕೆ ಕಾದಿದೆ. ಬಿಜೆಪಿ ವಿರೋಧದ ನಾಟಕವಾಡುತ್ತದೆ. ಆಮೇಲೆ ಕುತಂತ್ರದಿಂದ ಅದನ್ನು ಬೆಂಬಲಿಸುತ್ತದೆ. ಇದು ಅಪರಾಧ ಅಲ್ಲದಿದ್ದರೆ ಮತ್ತೇನು ? ದೇಶದ 4 ಕೋಟಿ ಕುಟುಂಬಗಳು ಅವಲಂಬಿಸಿರುವ ಚಿಲ್ಲರೆ ವ್ಯಾಪಾರದ ವಿಷಯದಲ್ಲಿ ಪ್ರತಿದಿನ ಸುಳ್ಳು ಹೇಳಲಾಗುತ್ತಿದೆ. ವಾಲ್ ಮಾರ್ಟ್, ಟೆಲ್ ಕೋ. ಮುಂತಾದ ಬಹುರಾಷ್ಟ್ರೀಯ ಕಂಪನಿಗಳು ಚಿಲ್ಲರೆ ವ್ಯಾಪಾರದಲ್ಲಿರುವ ದೇಶಗಳಲ್ಲಿ ಅಲ್ಲಿನ ಸರಕು ಮಾರುಕಟ್ಟೆ ಮೇಲೆ ಸರ್ಕಾರದ ನಿಯಂತ್ರಣ ಹೋಗಿದೆ. ಮನಮೋಹನ್, ಚಿದಂಬರಂ, ಮಾಂಟೆಕ್ ಸಿಂಗ್ ಎಲ್ಲರೂ ಅರ್ಥಶಾಸ್ತ್ರಜ್ಞರೇ ಆಗಿದ್ದಾರೆ. ಆದರೆ ಅವರು ಯಾರಗಾಗಿ ಇದ್ದಾರೆ ? ಆಹಾರ ಧಾನಗಳ ಬೆಲೆಗಳು ವಿಪರೀತವಾಗಿ ಏರುತ್ತಿದ್ದರೂ, ಬೆಲೆ ನಿಯಂತ್ರಿಸುವ ಸಲುವಾಗಿ ಗೋದಾಮುಗಳಿಂದ ಅಕ್ಕಿ, ಗೋಧಿ ಬಿಡುಗಡೆ ಮಾಡಲು ತಯಾರಿಲ್ಲ, ಆದರೆ ವಿದೇಶಕ್ಕೆ ನಮ್ಮ ಜನರಿಗೆ ಕೊಡುವ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಕೊಡಲು ತಯಾರಿದ್ದಾರೆ. ಇದು ಒಂದು ಘೋರ ಅಪರಾಧ. ಈ ದೇಶವಿರೋಧಿ ಕ್ರಮಕ್ಕೆ ಆಳುವವರು ಉತ್ತರ ಹೇಳಬೇಕು. ಅದಕ್ಕಾಗಿಯೇ ಫೆಬ್ರವರಿ 20–21 ರ ಎರಡು ದಿನಗಳ ಐತಿಹಾಸಿಕ ಮುಷ್ಕರ ನಡೆಯುತ್ತಿದೆ ಎಂದು ಕೇಂದ್ರ ಯುಪಿಎ ಸರ್ಕಾರದ ನೀತಿಗಳನ್ನು ಖಂಡಿಸಿದ ತಪನ್ ಸೇನ್, ನೋಟಿನ ಕಂತೆಗಳಿಂದ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ಹೆಚ್ಚುವುದಿಲ್ಲ. ಕಾರ್ಮಿಕರು ಉತ್ಪಾದನೆ ಮಾಡಿದರೆ ಮಾತ್ರ ಜಿಡಿಪಿ ಹೆಚ್ಚುತ್ತದೆ. ಗೇಟ್ ಬಳಿ ಸಭೆ ಮಾಡುತ್ತೇನೆ ಎನ್ನುವ ಕಾರ್ಮಿಕರನ್ನು ಕಾರ್ಖಾನೆ ಗೇಟ್‌ನಿಂದ 100 ಮೀ. 200. ಮೀ ದೂರ ನಿಲ್ಲಿಸಲಾಗುತ್ತಿದೆ ಎಂದು ವಿಷಾಧಿಸಿದರು.

ಬೆಲೆ ಏರಿಕೆ ತಡೆಯ ಬೇಕಾದರೆ ಕಾಳ ಸಂತೆಕೋರರ ಜೊತೆ ಶಾಮೀಲಾಗಿರುವುದನ್ನು ಬಿಡಿ. ವಿದ್ಯುತ್ ಕ್ಷೇತ್ರದಲ್ಲಿಯೂ ಕೂಡ ಜೂಜುಕೋರತನ ಬಂದಿದೆ. 10–12 ಗಂಟೆ ಲೋಡ್ ಶೆಡ್ಡಿಂಗ್ ಜಾರಿಗೆ ಬಂದಿದೆ. ಕಾರ್ಮಿಕರಿಗೆ ಕೆಲಸವಿಲ್ಲ.

ಆಳುವವರಿಗೆ ಕಾರ್ಮಿಕರು ಶತ್ರುಗಳಂತೆ. ಕಾರ್ಮಿಕ ಕಾನೂನು ಜಾರಿಯಾಗುತ್ತಿಲ್ಲ. ಕಾರ್ಮಿಕ ಕಾನೂನು ಉಲ್ಲಂಘನೆ ಮಾಡುವವರಿಗೆ ಪ್ರಧಾನಿ ಜೊತೆ ಬೆಳಗಿನ 'ಉಪಹಾರ' ಸೇವಿಸುವ ಅವಕಾಶ–'ಉತ್ತಮ ಉದ್ದಿಮೆದಾರ' ಎಂಬ ಪುರಸ್ಕಾರ ದೊರೆಯುತ್ತಿದೆ. ಅತ್ಯಾಚಾರಿಯನ್ನು ಅಟ್ಟಾಡಿಸುವ ಬದಲು, ಅಪರಾಧಿಯನ್ನು ಹಿಡಿಯುವ ಬದಲು ಆಪರಾಧಿಗಳನ್ನು ರಕ್ಷಣೆ ಮಾಡಲಾಗುತ್ತಿದೆ. ಕ್ರೈಮ್, ಅಮಾನವೀಕರಣ ಹೆಚ್ಚುತ್ತಿದೆ.


ಹಣಕಾಸು ಕೊರತೆ ನಿವಾರಣೆ 'ಹುಚ್ಚು'

ಹಣಕಾಸು ಕೊರತೆ ನಿವಾರಿಸುವ ಯತ್ನದಲ್ಲಿ ಸರ್ಕಾರಕ್ಕೆ ಹುಚ್ಚು ಹಿಡಿದಿದೆ. 99 ಶೇ. ಅಸಂಘಟಿತ ಕಾರ್ಮಿಕರಿಗೆ ಕಾರ್ಮಿಕ ಸೌಲಭ್ಯ ಸಿಗುತ್ತಿಲ್ಲ. ಸರ್ಕಾರ ಕಾರ್ಮಿಕರನ್ನು ಲೂಟಿ ಮಾಡುತ್ತಿದೆ. ಕಟ್ಟಡ ಕಾರ್ಮಿಕರಿಗಾಗಿ ಸಂಗ್ರಹ ಮಾಡಲಾದ ಸೆಸ್ ಸಾವಿರಾರು ಕೋಟಿ ರೂಪಾಯಿ ರಾಜ್ಯ ಸರ್ಕಾರಗಳಲ್ಲಿ ಕೊಳೆಯುತ್ತಿದೆ. ಆ ಹಣದಲ್ಲಿ ಶೇ.3 ರಷ್ಟು ಮಾತ್ರ ಖರ್ಚಾಗಿದೆ. ದಿನನಿತ್ಯ ನೂರಾರು ಜನ ಕಟ್ಟಡ ಕಟ್ಟುವಾಗ ಬಿದ್ದು ಸಾಯುತ್ತಾರೆ. ಆದರೆ ಪರಿಹಾರ ಕೊಡುತ್ತಿಲ್ಲ. ಕರ್ನಾಟಕದಲ್ಲಿ ಸರ್ಕಾರ ನಿಗದಿ ಪಡಿಸಿರುವ ಕನಿಷ್ಟ ಕೂಲಿಯೂ ಕಡಿಮೆ. ಸ್ಕೀಮ್ ನೌಕರರ ದೆಹಲಿ ಹೋರಾಟವನ್ನು ಉದ್ದೇಶ ಪೂರ್ವಕವಾಗಿ ಮರೆಮಾಚಲಾಯಿತು. ಮಾಧ್ಯಮಗಳು ಕೂಡ ಪ್ರಚಾರ ನೀಡಲಿಲ್ಲ.

ಭ್ರಷ್ಟತೆ ಕಾನೂನುಬದ್ಧವಾಗಿದೆ. ಅತ್ಯಾಚಾರ, ದೌರ್ಜನ್ಯಗಳು ವ್ಯಾಪಕವಾಗುತ್ತಿವೆ. ಎಲ್ಲವನ್ನು ಮಾರುಕಟ್ಟೆಗೆ ತೂರುತ್ತಿರುವುದರ ಪರಿಣಾಮ ಇದು. ಒಂದು ರೂಪಾಯಿ ಡಿಸೇಲ್‌ನಲ್ಲಿ 33 ಪೈಸೆ ತೆರಿಗೆ ಕೊಡುವ ಜನರು ಒಂದಷ್ಟು ಸಹಾಯಧನ ಕೊಡಿ ಎಂದರೆ ದೇಶದ ಪ್ರಧಾನಿಗಳು "ಹಣ ಗಿಡದಲ್ಲಿ ಬೆಳೆಯುವುದಿಲ್ಲ" ಎನ್ನುತ್ತಾರೆ. ಕಳೆದ ವರ್ಷ ಶ್ರೀಮಂತರಿಂದ 3 ಲಕ್ಷ ಕೋಟಿ ತೆರಿಗೆ ಹಣ ಸಂಗ್ರಹಿಸದೇ ಬಿಟ್ಟರು. ಪ್ರಸ್ತುತ ಬಜೆಟ್‌ನಲ್ಲಿ ಬಂಡವಾಳಿಗರಿಗೆ 5.28 ಲಕ್ಷ ಕೋಟಿ ರಿಯಾಯಿತಿ ನೀಡಲಾಗಿದೆ. ಈ ಹಣವೇನು ಪ್ರಧಾನಿಯವರ ಹಿತ್ತಲ ಗಿಡದಲ್ಲಿ ಬಿಟ್ಟಿತ್ತೇ ? ಎಂದು ಕೇಂದ್ರ ರಾಜ್ಯ ಸರ್ಕಾರಗಳ ವಿರುದ್ಧ ಹರಿಹಾಯ್ದ ತಪನ್ ದೇಶದ ಕಾರ್ಮಿಕ ವರ್ಗ –ದುಡಿಯುವ ಜನತೆ ಈ ಸವಾಲನ್ನು ಸಮರ್ಥವಾಗಿ ಎದುರಿಸಲಿದ್ದಾರೆ. ಕಳೆದ ಸಿಐಟಿಯು 11 ನೇ ರಾಜ್ಯ ಸಮ್ಮೇಳನದ ನಂತರ ಸದಸ್ಯತ್ವದಲ್ಲಿ ಶೇ. 46 ರಷ್ಟು ಏರಿಕೆ ದಾಖಲಿಸಿರುವ ಕರ್ನಾಟಕ ರಾಜ್ಯದಲ್ಲಿಯೂ ಕಾರ್ಮಿಕ ಚಳುವಳಿ ಈ ಸವಾಲನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗುತ್ತದೆ ಎಂದು ಆಶಿಸಿದರು.

ಪುಟ 12ಕ್ಕೆ





ಸಮ್ಮೇಳನದ ಉದ್ಘಾಟನೆ

ವಿವಿಧ ಕಾರ್ಮಿಕ ಸಂಘಟನೆಗಳ ನಡುವೆ ಐಕ್ಯತೆ ಬೆಳವಣಿಗೆ ಐತಿಹಾಸಿಕ ಸಾಧನೆ

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ವಿಶ್ಲೇಷಣೆ

ಜನವರಿ, 27ರ ಸಂಜೆ. ಡಾ. ಎಂ.ಕೆ. ಘಂದೆ ನಗರ(ಶಿರಸಿ)ದಲ್ಲಿ ಸಂಜೆ ಕಾಂ. ದೀಪಂಕರ್ ಮುಖರ್ಜಿ ವೇದಿಕೆ(ಲಿಂಗದ ಕೋಣ ಭವನ)ಯಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು)ನ 12 ನೇ ರಾಜ್ಯ ಸಮ್ಮೇಳನದ ಉದ್ಘಾಟನೆ. ಮೊದಲಿಗೆ ಸಿಐಟಿಯುನ ರಾಜ್ಯ ಸಮಿತಿಯ ಅಧ್ಯಕ್ಷರಾದ ವಿಜೆಕೆ ನಾಯರ್ ಅವರು ಕೆಂಬಾವುಟವನ್ನು ಏರಿಸಿದರು. ಘೋಷಣೆಗಳು ಮೊಳಗಿದವು. ನಿಧನರಾದ ಮತ್ತು ಹುತಾತ್ಮರಾದ ಸರಿಗಾತಿಗಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂತರ ನಡೆದ ಸಮಾರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಸಿ.ಆರ್. ಶ್ಯಾನುಬಾಗ್ ಎಲ್ಲರನ್ನೂ ಸ್ವಾಗತಿಸಿ ಸ್ವಾಗತ ಭಾಷಣ ಮಾಡಿದರು. ಸಮ್ಮೇಳನದ ಉದ್ಘಾಟನೆ ತಪನ್ ಸೇನ್ ಅವರಿಂದ.


ಐಕ್ಯತೆ ಬೆಳವಣಿಗೆ ಐತಿಹಾಸಿಕ ಸಾಧನೆ–ತಪನ್

ದೇಶದ ಕಾರ್ಮಿಕ ಚಳುವಳಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ತುಂಬಾ ಪ್ರಮುಖ ಸಾಧನೆ ಮಾಡಲಾಗಿದೆ. ಕಾರ್ಮಿಕ ಚಳುವಳಿಯಲ್ಲಿ ಹಲವಾರು ಸಂಘಟನೆಗಳಿದ್ದರೂ ವಿವಿಧ ಕಾರ್ಮಿಕ ಸಂಘಟನೆಗಳ ನಡುವೆ ಐಕ್ಯತೆ ಬೆಳವಣಿಗೆಯಾಗಿದ್ದು ಇದು ಒಂದು ಐತಿಹಾಸಿಕ ಸಾಧನೆಯಾಗಿದೆ ಎಂದು ಸಿಐಟಿಯು ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ. ತಪನ್ ಸೇನ್

ಹೇಳಿದರು. ಕಾರ್ಮಿಕ ರಂಗದಲ್ಲಿ ಹಲವಾರು ಸಂಘಟನೆಗಳು ಇದ್ದರೂ ನಾವು ಒಟ್ಟಾಗುವ ಪ್ರಕ್ರಿಯೆಯಲ್ಲಿದ್ದೇವೆ. ಸಾಮಾನ್ಯ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಒಟ್ಟಾಗಿ ಎದುರಿಸುವ ನಿಟ್ಟಿನಲ್ಲಿ ಪ್ರಗತಿಯಾಗುತ್ತಿದೆ. ದಿನೇ ದಿನೇ ಜಂಟಿ ಹೋರಾಟ ಉನ್ನತ ಹಂತಕ್ಕೆ ಹೋಗುತ್ತಿದೆ. ಫೆಬ್ರವರಿ 20–21, 2013 ರಂದು ದೇಶದಾದ್ಯಂತ ಎರಡು ದಿನಗಳ ಐತಿಹಾಸಿಕ ಮುಷ್ಕರ ನಡೆಯುತ್ತಿದೆ.

ಆಕಾಶದ ಕೆಳಗಿರುವುದೆಲ್ಲದರ ಖಾಸಗೀಕರಣ

ಜಾಗತೀಕರಣ ಮತ್ತು ಉದಾರೀಕರಣದ ಭರದಲ್ಲಿ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಗಾಳಿಗೆ ತೂರಲಾಗುತ್ತಿದೆ. ಯೋಜನಾ ಬದ್ದ ಬೆಳವಣಿಗೆಯ ಪರಿಕಲ್ಪನೆ, ಪಂಚವಾರ್ಷಿಕ ಯೋಜನೆಯ ಪರಿಕಲ್ಪನೆ ಎಲ್ಲದರ ಮೇಲೆ ದಾಳಿ ಆಗುತ್ತಿದೆ. 12 ನೇ ಪಂಚ ವಾರ್ಷಿಕ ಯೋಜನೆಯ ದಾಖಲೆಗಳನ್ನು ನೋಡಿದರೆ ಅಲ್ಲಿ ಯೋಜನೆಯೇ ಇಲ್ಲ. ಅದನ್ನು 'ಯೋಜನೆ' ಅಂತ ಯಾಕೆ ಕರೆಯಬೇಕು ಎಂಬ ಪ್ರಶ್ನೆ ಏಳುತ್ತದೆ. ಸಾರಿಗೆ, ಸಂಪರ್ಕ, ವಿದ್ಯುತ್ ವಲಯ, ಹಣಕಾಸು ವಲಯ, ದೇಶದ ರಕ್ಷಣಾ ಸಾಧನಗಳ ಉತ್ಪಾದನೆ, ಶಿಕ್ಷಣ, ಆರೋಗ್ಯ, ರಸ್ತೆ, ಸೇತುವೆ ಮುಂತಾದ ಮೂಲಭೂತ ಸೌಕರ್ಯಗಳು ...ಹೀಗೆ ಎಲ್ಲ ರಂಗದಲ್ಲಿ ಖಾಸಗೀಕರಣವನ್ನು ಪ್ರತಿಪಾದಿಸಲಾಗುತ್ತಿದೆ. ಎಲ್ಲವನ್ನೂ ಕೂಡ ಖಾಸಗಿಯವರು ಮಾಡುತ್ತಾರೆ ಎನ್ನಲಾಗುತ್ತಿದೆ. ಹೆದ್ದಾರಿ ನಿರ್ಮಿಸಿ 25 ವರ್ಷಗಳ ಕಾಲ ಅನಿರ್ಬಂಧಿತವಾಗಿ ಸುಂಕ ವಸೂಲಿಗೆ ಖಾಸಗಿಯವರಿಗೆ ಅವಕಾಶ ನೀಡಲಾಗುತ್ತಿದೆ. ಈ ಆಕಾಶದ ಕೆಳಗಿರುವುದನ್ನೆಲ್ಲ ಖಾಸಗೀಕರಣ ಮಾಡಬೇಕೆಂದು ಪ್ರತಿಪಾದಿಸಲಾಗುತ್ತಿದೆ. ಕಾರ್ಮಿಕರನ್ನು ಬೀದಿಪಾಲು ಮಾಡುವ ದೇಶವನ್ನು ದಿವಾಳಿ ಎಬ್ಬಿಸುವ ನೀತಿಗಳ ವಿರುದ್ಧ ಸಾರ್ವಜನಿಕರು ಏನೇ ಹೋರಾಟ ಮಾಡಿದರೂ ಜನರು ಏನೇ ಹೇಳಿದರೂ ಕೇಂದ್ರದ ಯುಪಿಎ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಇದು ಪ್ರಜಾಪ್ರಭುತ್ವಕ್ಕೇ ಅಪಾಯಕರ ಎಂದು ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಅವರು ತಪನ್ ಸೇನ್ ಎಚ್ಚರಿಸಿದರು.



ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರು ಸಂಘಟಿತರಾಗಲು ಹೋದರೆ ಸರ್ಕಾರ ಅಡ್ಡಿ ಪಡಿಸುವ ಧೋರಣೆ ಕಂಡು ಬರುತ್ತಿದೆ. ಸಿಐಟಿಯು ಸಂಘಟನೆಗೆ ಮಾತ್ರವಲ್ಲ ಬಿಎಂಎಸ್‌ನಂತಹ ಸಂಘಟನೆಗೂ ಅದೇ ಪರಿಸ್ಥಿತಿ ಎದುರಾಗಿದೆ. ಈ ಧೋರಣೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕಾರ್ಮಿಕ ವರ್ಗ ಇದಕ್ಕೆ ಸರಿಯಾದ ಉತ್ತರ ನೀಡಲಿದೆ ಎಂದು ತಪನ್ ಸೇನ್ ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ವಿಜೆಕೆ ನಾಯರ್ ಅವರು ವಹಿಸಿದ್ದರು. ಶ್ರದ್ಧಾಂಜಲಿ ನಿರ್ಣಯವನ್ನು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕೆ. ಶಂಕರ್ ಮಂಡಿಸಿದರು. ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಶಾಂತಾರಾಮ ನಾಯಕ್, ಕಾರ್ಯಾಧ್ಯಕ್ಷರಾದ ತಿಲಕಗೌಡ, ಮತ್ತು ಹರೀಶ್ ನಾಯ್ಕ, ಸಿಐಟಿಯು ಸಂಘಟನೆಯ ರಾಜ್ಯ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು. ಪ್ರಸಕ್ತ ಅಧಿವೇಶನದಲ್ಲಿ ಬಿಎಂಎಸ್ ಸಂಘಟನೆಯ ಮುಖಂಡರಾದ ಸೂರ್ಯನಾರಾಯಣ ರಾವ್ ಅವರು ಸಿಐಟಿಯು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿ ನಮ್ಮ ದೇಶದಲ್ಲಿ ಹಲವಾರು ಕಾರ್ಮಿಕ ಸಂಘಟನೆಗಳು ಇವೆ. ಅವು ಎಂದೂ ಒಂದಾಗಲು ಸಾಧ್ಯವಿಲ್ಲ ಎನ್ನಲಾಗುತ್ತಿತ್ತು. ಆದರೆ ಈಗ ದೇಶದ ಕಾರ್ಮಿಕ ಸಂಘಟನೆಗಳ ಕಾರ್ಮಿಕ ಸಮಸ್ಯೆಗಳ ಆಧಾರದಲ್ಲಿ ಒಂದೇ ವೇದಿಕೆಗೆ ಬಂದಿವೆ. ಸಂಘಟನೆಗಳ ನಡುವೆ ಏನೇ ಭಿನ್ನಾಭಿಪ್ರಾಯ ಇದ್ದರೂ ಈ ಐಕ್ಯತೆಯ ಮೂಲಕ ಕಾರ್ಮಿಕ ವಿರೋಧಿ ಸರ್ಕಾರವನ್ನು ಹೊಡೆದೋಡಿಸೋಣ ಎಂದರು.

ಎಐಟಿಯುಸಿ ಸಂಘಟನೆಯ ಪರವಾಗಿ ವಿಜಯ ಭಾಸ್ಕರ್ ಅವರು ಮಾತನಾಡಿ ಐಕ್ಯ ಚಳುವಳಿಗೆ ಆದ್ಯತೆ ನೀಡಿರುವುದಕ್ಕಾಗಿ ಸಿಐಟಿಯು ಸಂಘಟನೆಗೆ ಅಭಿನಂದನೆ ಸಲ್ಲಿಸಿ ನಮ್ಮ ಮುಂದಿರುವ ಸವಾಲು ರಾಷ್ಟ್ರಮಟ್ಟದಲ್ಲಿ ಮೂಡಿರುವ ಐಕ್ಯತೆಯನ್ನು ತಳಹಂತದಲ್ಲಿ ಅಂದರೆ ಕಾರ್ಖಾನೆ ಮಟ್ಟದಲ್ಲಿ ಮೂಡಬೇಕಿದೆ. ಜಂಟಿ ಕಾರ್ಮಿಕರ ಸಂಘಟನೆ (ಜೆಸಿಟಿಯು) ಮೂಲಕ ಮಹತ್ವದ ಹೋರಾಟಗಳನ್ನು ಮಾಡುತ್ತಾ ಬಂದಿದ್ದೇವೆ ಎಂದರು.

ಎಐಯುಟಿಯುಸಿ ಸಂಘಟನೆಯ ಪರವಾಗಿ ಪ್ರಕಾಶ್ ಅವರು ಮಾತನಾಡಿ ಸಹಸ್ರಾರು ಸಂಖ್ಯೆಯಲ್ಲಿ ಶಿರಶಿಯಂತಹ ಒಂದು ಊರಿನಲ್ಲಿ ಕಾರ್ಮಿಕರು ಹರಿದು ಬಂದರು ಎಂಬುದು ಸಂತೋಷ ವಿಷಯ. ಜಂಟಿ ಹೋರಾಟ 19 ವರ್ಷದಿಂದ ನಡೆದಿದೆ. ಚಳುವಳಿ ಇಂದು ಪ್ರಚಾರದ ಹಂತದಲ್ಲಿ ಇಲ್ಲ. ತೀವ್ರ ಪ್ರತಿರೋಧಾತ್ಮಕ ಚಳುವಳಿಯ ಹಂತ ಇದು. ಇದನ್ನು ಯಶಸ್ವಿ ಮಾಡೋಣ ಎಂದರು.

ಅಧ್ಯಕ್ಷೀಯ ಭಾಷಣ ಮಾಡಿದ ವಿಜೆಕೆ ನಾಯರ್ ಅವರು ಮಾತನಾಡುತ್ತ 2008 ರಲ್ಲಿ ಅಂತರ ರಾಷ್ಟ್ರೀಯ ಆರ್ಥಿಕ ಬಿಕ್ಕಟ್ಟು ಅಮೆರಿಕದಿಂದ ಆರಂಭವಾಗಿ ಎಲ್ಲ ಕಡೆಗೆ ಹರಡಿತು. ಎಡಪಕ್ಷಗಳ ಒತ್ತಡ ಹೋರಾಟದಿಂದ ಬ್ಯಾಂಕು, ವಿಮೆ ಮುಂತಾದ ಹಣಕಾಸು ರಂಗದಲ್ಲಿ ಉದಾರೀಕರಣ ಮತ್ತು ಜಾಗತೀಕರಣ ನೀತಿಗಳಿಗೆ ತಡೆ ಆಗಿದ್ದರಿಂದ ಭಾರತದಲ್ಲಿ ಈ ಬಿಕ್ಕಟ್ಟು ದೇಶದ ಆರ್ಥಿಕತೆಯ ಮೇಲೆ ಯುರೋಪ್, ಮುಂತಾದ ದೇಶಗಳಲ್ಲಿ ಮಾಡಿದಷ್ಟು ಭೀಕರ ಪರಿಣಾಮ ಮಾಡಲಿಲ್ಲ. ಗ್ರೀಸ್ ದೇಶದಲ್ಲಿ ತಂದೆ ತಾಯಂದಿರು ಶಾಲೆಯಿಂದ ತಮ್ಮ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗದೇ ಶಾಲೆಯಲ್ಲೇ ಬಿಟ್ಟ ಪರಿಸ್ಥಿತಿ ಬಂತು. (ಅಲ್ಲಿ ಮಕ್ಕಳನ್ನು ಶಾಲೆಯಲ್ಲೇ ಬಿಟ್ಟರೆ ಆ ಮಗುವಿನ ಬ್ರೆಡ್ ಮತ್ತು ಆಹಾರದ ಜವಾಬ್ದಾರಿ ಸರ್ಕಾರದ್ದಾಗುತ್ತದೆ.) ಭಾರತದಲ್ಲಿ ಹಣಕಾಸು

...ರಂಗ ಸಾರ್ವಜನಿಕ ಸಂಸ್ಥೆಗಳೇ ಪ್ರಧಾನವಾಗಿ ಉಳಿದಿದ್ದರಿಂದ ಇಲ್ಲಿ ಹಾಗಾಗಲಿಲ್ಲ. ವಜ್ರ ಉದ್ದಿಮೆ, ಸಿದ್ಧ ಉಡು... ಕ್ಷೇತ್ರ ಮುಂತಾದ ಕಡೆಗಳಲ್ಲಿ ತೀವ್ರ ಸಮಸ್... ಕಂಡು ಬಂದು ಕ್ರಮೇಣ ಚೇತರಿಕೆ ಆಯಿತು.

ಇಂದಿರಾ ಗಾಂಧಿ 1971ರಲ್ಲಿ ಗರೀಬಿ ಹಠಾವೋ ಎಂದು ಘೋಷಣೆ ಕೊಟ್ಟರು. 197... ರ ತುರ್ತು ಪರಿಸ್ಥಿತಿಯಲ್ಲಿ 80 ರ ನಂತರ ಇಂದಿರಾ ಗಾಂಧಿ ಅವರ ನೀತಿಗಳ ಮೂಲ... ಅವರ ಎಡ ಮುಖವಾಡ ಕಳಚಿತು. ಐಎಂಎಫ್‌ನ ಷರತ್ತುಗಳಿಂದಾಗಿ ಸರ್ಕಾ... ನೇಮಕಾತಿ ಮೇಲೆ ನಿರ್ಬಂಧ ಹೇರಲಾಯಿತು. ಇಲಾಖೆಯ ನೌಕರರ ಬದಲಿಗೆ ಸ್ವಯಂ ಸೇವಕರ ಮೂಲಕ ಗೌರವಧನದ ಮೂಲ... ಸ್ಕೀಮ್‌ಗಳನ್ನು ಜಾರಿಗೆ ತರುವ ಪ್ರಯತ್ನ ನಡೆಯಿತು. ಈ ನೀತಿಗಳ ಸ... ಬದಲಾಯಿಸುವವರೆಗೆ ಹೋರಾಟ ನಿಲ್ಲುವ... ಎಂದು ಅವರು ಘೋಷಿಸಿದರು. ತಪನ್ ಅವ... ಭಾಷಣವನ್ನು ಕನ್ನಡಕ್ಕೆ ಪ್ರಸನ್ನ ಕುಮಾರ್ ಅವರು ಅನುವಾದಿಸಿದರು. ತಿಲಕ ಗೌಡ ಎಲ್ಲರಿಗೂ ವಂದಿಸಿದರು.

ಜನವರಿ, 28 ರಂದು ಬೆಳಿಗ್ಗೆ ಪ್ರ... ಕಾರ್ಯದರ್ಶಿಗಳು ರಾಜ್ಯ ಸಮಿತಿಯ ಪರವಾ... ಕರಡು ವರದಿ ಮಂಡಿಸಿದರು. ಈ ವರದಿಯ ಮೇಲೆ ಗುಂಪು ಚರ್ಚೆಗಳು ನಡೆದವು. ಒಟ್ಟು ......ಸಂಗಾತಿಗಳು ಈ ಗುಂಪು ಚರ್ಚೆಯನು ಪ್ರತಿನಿಧಿಸಿ ಸಮ್ಮೇಳನದಲ್ಲಿ ಸು ....ಗಂಟೆಗ... ಕಾಲ ಮಾತನಾಡಿದರು. 29 ರಂದು ವರದಿ ಮೇಲಿನ ಚರ್ಚೆ ಮುಕ್ತಾಯಗೊಂಡಿತು. ಫೆಬ್ರವ... 20–21 ರ ಅಖಿಲ ಭಾರತ ಕಾರ್ಮಿಕರ ಐ... ಮುಷ್ಕರ ಮತ್ತು ಕೋಲಾರ ಚಿನ್ನದ ಗಣಿ ಮುಚ್ಚುವಿಕೆ ವಿರೋಧಿ ಸು... ನಿರ್ಣಯವನ್ನೊಳಗೊಂಡಂತೆ ಒಟ್ಟು 3... ನಿರ್ಣಯಗಳು ಮಂಡನೆಯಾಗಿ ಎಲ್ಲವೂ ಸರ್ವಾನುಮತದಿಂದ ಅಂಗೀಕಾರಗೊಂ...

ಫೆಬ್ರುವರಿ 20–21 ರ ದೇಶವ್ಯಾ... ನಡೆಯಲಿರುವ ಕಾರ್ಮಿಕರ ಐಕ್ಯ ಮುಷ್ಕರದ ಕರೆ ಮೇಲಿನ ಚರ್ಚೆಯಲ್ಲಿ 14 ಲ... ಕರಪತ್ರಗಳನ್ನು ಮುದ್ರಿಸಿ ಹಂಚುವುದು, ... ಚಳುವಳಿ ಕುರಿತ 38,150 ಪುಸ್ತಕಗಳ ಮಾರಾಟ, 1 ಲಕ್ಷ 10 ಸಾವಿರ ಪೋಸ್ಟರ್‌ಗಳ ಮುದ್ರಿ... ಅಂಟಿಸುವುದನ್ನೊಳಗೊಂಡಂತೆ, ಆಟೋ ಪ್ರಚಾರ, ಜಾಥಾ, ಪಂಜಿನ ಮೆರವಣಿಗೆ ಬೀದಿನಾಟಕಗಳ ಮೂಲಕ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬೀದಿಗಿಳಿದು ಹೋರಾಟ ರೂಪಿಸಲು ಸಿದ್ದವಾಗುತ್ತಿರುವುದಾ... ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿರು... ಪ್ರತಿನಿಧಿಗಳಿಗೆ ಧನ್ಯವಾದ ತಿಳಿಸಿದ ಪ್ರಕಾರ್ಯದರ್ಶಿಗಳು ಮತ್ತಷ್ಟು ಸಿದ್ಧತೆಯಿಂ... ಜೆಸಿಟಿಯುವಿನ ಐಕ್ಯ ಹೋರಾಟವನ್ನು ಸಿಐಟಿಯು ತನ್ನ ತೀವ್ರ ಕಾರ್ಯ ತತ್ಪರತೆ... ಯಶಸ್ವಿಗೊಳಿಸಬೇಕಿದೆಯೆಂದರು. ಆ ಮೂ... ರಾಜ್ಯದಲ್ಲಿ ಸಿಐಟಿಯು ಸಾಮಾನ್ಯ ಶ್ರಮಿಕ ಜನ...

ಮಧ್ಯೆ ತನ್ನ ಅಸ್ತಿತ್ವವನ್ನು ವಿಸ್ತರಿಸಿಕೊಂಡು ಗಟ್ಟಿಗೊಳ್ಳಬೇಕಿದೆಯೆಂದು ತಿಳಿಸಿದರು.

ನಂತರ ಪೂರ್ಣ ಪ್ರಜಾಪ್ರಭುತ್ವ ಮಾದರಿಯಲ್ಲಿ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ...ಜನ ಹೊಸ ಮುಖಂಡರನ್ನೊಳಗೊಂಡಂತೆ ಒಟ್ಟು 35 ಜನರ ನೂತನ ಪದಾಧಿಕಾರಿಗಳನ್ನು ಹಾಗೂ 88 ಸದಸ್ಯರ ರಾಜ್ಯ ಸಮಿತಿಯನ್ನು ಸಮ್ಮೇಳನವು ಆಯ್ಕೆ ಮಾಡಿತು.

ನಂತರ ಅಖಿಲ ಭಾರತ ಸಿಐಟಿಯು ಅಧ್ಯಕ್ಷರಾದ ಕಾಂ. ಎ.ಕೆ. ಪದ್ಮನಾಭನ್ ಮಾತನಾಡಿ ಈ ತಾಲ್ಲೂಕು ಪ್ರದೇಶವಾದ ಸಿರಸಿ ಪಟ್ಟಣದಲ್ಲಿ ಸಿಐಟಿಯು ರಾಜ್ಯ ಸಮ್ಮೇಳನ ಯಶಸ್ಸು ಕಾಣುವ ಬಗ್ಗೆ ನಮಗೆ ಅನುಮಾನವಿತ್ತು. ಆದರೆ ನಮ್ಮ ನಿರೀಕ್ಷೆ ಮೀರಿ ಸಮ್ಮೇಳನ ಸಂಘಟಿಸಿ ಯಶಸ್ವಿಗೊಳಿಸಿದ್ದಾರೆ ಮತ್ತು ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ರಾಜ್ಯ ಸಮ್ಮೇಳನಗಳನ್ನು ನಡೆಸ ಬಲ್ಲೆವೆಂದು ಸಾಧಿಸಿ ತೋರಿದ್ದಿರೆಂದು ಪ್ರಶಂಶಿಸಿದರು. ಮತ್ತು ಸಮ್ಮೇಳನ ಯಶಸ್ವಿಗೊಳಿಸಿದ ಎಲ್ಲಾ ಉತ್ತರ ಕನ್ನಡ ಜಿಲ್ಲಾ ಸಂಗಾತಿಗಳಿಗೆ ಧನ್ಯವಾದ ತಿಳಿಸಿದರು. ಸಮ್ಮೇಳನ್ನಗಳು ಇರುವುದು ವಿಮರ್ಶೆ, ಟೀಕೆ ಹಾಗೂ ಸ್ವವಿಮರ್ಶೆಗಳಿಗಾಗಿ. ಈ ಸಮ್ಮೇಳನದ ಚರ್ಚೆಗಳು ಅಷ್ಟರಮಟ್ಟಿಗೆ ಅರ್ಥಪೂರ್ಣವಾಗಿ ಜರುಗಿದವು ಎಂದರು.

ಬಹಿರಂಗ ಸಭೆಯಲ್ಲಿ 'ಬೆವರು' ಪುಸ್ತಕ ಬಿಡುಗಡೆ



42% ಸದಸ್ಯತ್ವ ಹೆಚ್ಚಳದೊಂದಿಗೆ ಸಾಕಷ್ಟು ಉತ್ತಮ ಪ್ರಗತಿ ಸಾಧಿಸಿರುವ ಕರ್ನಾಟಕ ಸಿಐಟಿಯು ಮತ್ತಷ್ಟು ತಾಲ್ಲೂಕು, ವಲಯ, ಗ್ರಾಮಗಳನ್ನು ತಲುಪಲು ಸಾಧ್ಯವಿತ್ತು. ಬಹಳ ದಾಳಿಗಳ ಎದುರಿಸಿದ್ದೇವೆ. ಆದರೆ ಜಾಗತೀಕರಣದ ಅಪಾಯಗಳ ಕುರಿತ ಅರಿವನ್ನು ಗ್ರಾಮೀಣ ಪ್ರದೇಶಗಳಿಗೆ ತಲುಪಿಸಲು ಸಾಧ್ಯವಾಗಲಿಲ್ಲ. ಪೂರ್ಣಾವಧಿ ಕಾರ್ಯಕರ್ತರ ಬಗ್ಗೆ ಚರ್ಚಿಸಿದ್ದೀರಿ. ಆದರೆ ಪೂರ್ಣಾವಧಿ ಕಾರ್ಯಕರ್ತರಿಂದಲೇ ಎಲ್ಲಾ ಅಗುವುದಿಲ್ಲ. ತಳಹಂತದ ಕಾರ್ಯಕರ್ತರನ್ನು ಕ್ರಿಯಾಶೀಲವಾಗಿಸಿ ಚಳುವಳಿಗಳಲ್ಲಿ ಅವರನ್ನು ಸಕ್ರಿಯಗೊಳಿಸುವ ಮೂಲಕ ನಮ್ಮ ಸಂಘಟನಾ ಶಕ್ತಿಯನ್ನು ಗಟ್ಟಿಗೊಳಿಸಿಕೊಳ್ಳಬೇಕಿದೆ. ಅದಲ್ಲದೆ ಸಂಘದ ಕಾರ್ಯಕರ್ತರಿಗೆ ಸಿಐಟಿಯು ಸಂದೇಶ, ವರ್ಕಿಂಗ್ ಕ್ಲಾಸ್, ಪೀಪಲ್ಸ್ ಡೆಮಾಕ್ರಸಿ ಮುಂತಾದ ನಮ್ಮ ಪತ್ರಿಕೆಗಳ ಚಂದಾ ಮಾಡಿಸಿ ಸ್ವಕಲಿಕೆಗೆ ಒತ್ತು ನೀಡಬೇಕು ಎಂದರು. ಚಳುವಳಿಗೆ ಹಣದ ಅಗತ್ಯವಿರುವಲ್ಲಿ ಸಾರ್ವಜನಿಕರ ಮುಂದೆ ಹೋಗಬೇಕು. ಅಗತ್ಯಬಿದ್ದರೆ ಸಹ ಸಂಘಟನೆಗಳ ನೆರವು ಪಡೆಯಬೇಕು ಎಂದು ತಿಳಿಸಿದರು. ನಿಧಿ ಸಂಗ್ರಹದ ವಿಷಯದಲ್ಲಿ ಅಂಗನವಾಡಿ ಸಂಘಟನೆಯ ಅನುಭವವನ್ನು ವಿಶೇಷವಾಗಿ ಅಭಿನಂದಿಸಿದರು.

ಸಮಾಜದಲ್ಲಿ ತುಳಿತಕ್ಕೊಳಗಾದವರ, ದಲಿತರ, ಬುಡಕಟ್ಟು ಜನಾಂಗಗಳ, ಮಹಿಳೆಯರ ಮೇಲೆ ನಡೆಯುವ ದಾಳಿ ದೌರ್ಜನ್ಯಗಳು ಮಡೆ ಸ್ನಾನ, ಪಂಕ್ತಿಭೇದ ದಂತಹ ಪ್ರಕರಣಗಳಾದಾಗ ... ಕುರುಡು ನಂಬಿಕೆಗಳನ್ನು ಹರಡುವ ಪ್ರಕರಣಗಳಾದಾಗ ಮೇಲ್‌ಸಮಿತಿಯ ಸುತ್ತೋಲೆಗಳಿಗಾಗಿ ಕಾಯದೇ, ತಕ್ಷಣ ಪ್ರತಿಭಟನೆಗಿಳಿಯಲು ಮುಂದಾಗಬೇಕೆಂದ ಪದ್ಮನಾಭನ್ ಮಂಬರುವ ದಿನಗಳಲ್ಲಿ ಕಾರ್ಮಿಕ ದ್ರೋಹಿ ನೀತಿಗಳ ದಾಳಿ ದಬ್ಬಾಳಿಕೆಗಳು ಹೆಚ್ಚಾಗಲಿದ್ದು ಅವನ್ನು ಎದುರಿಸಲು ಬೇಕಾದಂತೆ ಚಳುವಳಿ ಸಜ್ಜಾಗಿರಬೇಕು ಎಂದರು.

ನಂತರ ಸ್ವಾಗತ ಸಮಿತಿಯ ಪ್ರ.ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ ಸಿಐಟಿಯು ಸಂಗಾತಿಗಳು, ಸಹ ಸಂಘಟನೆಗಳ ಸಂಗಾತಿಗಳು ಸೇರಿ ಈ ಸಮ್ಮೇಳನದ ಮೂಲಕ ಸುಮಾರು ಒಂದೂವರೆ ಲಕ್ಷ ಕುಟುಂಬಗಳಿಗೆ ಸಿಐಟಿಯು ರಾಜ್ಯ ಸಮ್ಮೇಳನದ ಕುರಿತು ಸಂವಾದಿಸಿ ಅವರನ್ನು ತಲುಪಿದ್ದೇವೆ. ಇದರ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದರು. ಸಮ್ಮೇಳನದ ಯಶಸ್ಸಿಗೆ ಶ್ರಮಿಸಿದವರನ್ನು ವೇದಿಕೆಗೆ ಕರೆದು ಗೌರವಿಸಲಾಯಿತು. ಕಿರು ಕಾಣಿಕೆಗಳನ್ನು ಸಿಐಟಿಯು ರಾಷ್ಟ್ರಾಧ್ಯಕ್ಷರು ಹಾಗೂ ರಾಜ್ಯಾಧ್ಯಕ್ಷರು ನೀಡಿದರು.

ಪೋಲೀಸರನ್ನು ಮನುಷ್ಯರೆಂದು...

ಪುಟ 3 ರಿಂದ

ಪೇದೆಗಳನ್ನು ಮನಬಂದಂತೆ ಬಳಸುತ್ತಾರೆ, ಇನ್ನು ಅಧಿಕವಾಗಿ ರಜಾ ದಿನಗಳಲ್ಲಿಯೂ ದುಡಿದರೆ ಅದಕ್ಕೆ ಸಿಗುವ ವೇತನ, ಭತ್ಯೆಗಳೂ ತೀರಾ ಸಣ್ಣದು ಅಥವಾ ಇಲ್ಲ ಎನ್ನುತ್ತವೆ ಸಮೀಕ್ಷೆಗಳು. ಹ...ಕ್ಷೆ ಸೇವೆಗೆ ಪೇದೆಯಾಗಿ ಸೇರಿದವರು ಭಡ್ತಿ ಪಡೆಯುವುದೂ ತೀರಾ ವಿಳಂಬವಾಗಿ ಇಲ್ಲವೇ ಬಹುತೇಕವಾಗಿ ಒಂದು ಭಡ್ತಿ ಅಷ್ಟರಲ್ಲೇ ನಿವೃತ್ತಿಯಾದವರೇ ಹೆಚ್ಚು. ಇನ್ನು ಅತ್ಯಂತ ಕ್ಲಿಷ್ಟಕರ, ಅಪಾಯಕಾರಿಯಾದ ಸನ್ನಿವೇಶಗಳಲ್ಲಿ ದುಡಿಯುವ ಪೇದೆಗಳಿಗೆ ಭದ್ರತೆಯೂ ಇಲ್ಲವೆಂಬುದನ್ನು ಸ್ವತಃ ಪೇದೆಗಳೂ, ಕುಟುಂಬದ ಸದಸ್ಯರು ಆತಂಕದಿಂದ ಹೇಳುತ್ತಾರೆ. ಹಾಗೇ ವರ್ಗಾವಣೆಯ ವಿಷಯದಲ್ಲಿಯೂ ತಾರತಮ್ಯಗಳಿವೆ.

ಗಾಣದೆತ್ತಿನಂತೆ ದುಡಿಯುವವರು

ಹೀಗೆ ದುಡಿಯುವ ಪೇದೆಗಳ ವೈಯುಕ್ತಿಕ, ಕೌಟುಂಬಿಕ ಜೀವನದ ನಿರ್ವಹಣೆಗೆ ಸರಕಾರ ನೀಡುವ ಗಮನವಾದರೂ ಏನು? ಬಹುತೇಕ ಶಿಥಿಲಾವಸ್ಥೆಯಲ್ಲಿರುವ ಹಲವಾರು ದಶಕಗಳ ರಿಪೇರಿಯೂ ಆಗದ ಹಳೆಯ ಮನೆಗಳು, ಕನಿಷ್ಟ ಸೌ...ಗಳ ಕೊರತೆ, ಮನೆಗಳೇ ಸಿಗದೇ ಬಾಡಿಗೆ ಮನೆಗಳಲ್ಲಿ ವಾಸ ಮಾಡುವ ಸನ್ನಿವೇಶಗಳಿವೆ. ಇನ್ನು ಮೂರು ವರುಷಗಳಾದರೂ ಸಮವಸ್ತ್ರ ... ಉಟ್ಟು ದುಡಿಯಬೇಕಾದ ಚಿಂತಾಜನಕ ಸ್ಥಿತಿಯ ಬಗ್ಗೆ ಅತ್ಯಂತ ಮುಂದುವರಿದಿದೆ ಎನ್ನಲಾಗುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯಿಂದ ವರದಿಯಾಗಿದೆ. ಹೀಗೆ ಪೇದೆಗಳು ಸೌಲಭ್ಯಗಳ ಕೊರತೆ, ಹಲವಾರು ಕಡೆಗಳಿಂದ ವಿಪರೀತ ಕಿರುಕುಳ, ಮಾನಸಿಕ ಯಾತನೆಗಳನ್ನು ನಿತ್ಯವೂ ಅನುಭವಿಸುತ್ತಲೇ ಬಾಳಬೇಕಾಗಿದೆ.

ಪ್ರಜಾಪ್ರಭುತ್ವೀಯ ಹಕ್ಕುಗಳೆಲ್ಲಿ?

ಇಷ್ಟಾದರೂ ಪೇದೆಗಳ ನೋವುಗಳನ್ನು ಕೇಳುವವರಾದರೂ ಎಲ್ಲಿ? ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವೆಂದು ಆಳುವವರು ಹೇಳಿಕೊಳ್ಳುತ್ತಾರೆ. ಅಂದರೆ ಪ್ರತಿ ನಾಗರೀಕ ಅಥವಾ ದುಡಿಯುವವರು ಅವರ ವೃತ್ತಿ ಸಂಘಗಳನ್ನು ಕಟ್ಟಿಕೊಂಡು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಆಗ್ರಹಿಸುವ, ಹೋರಾಡುವ ಹಕ್ಕು ಇದೆ. ಆದರೆ ಭಾರತದ ಸಂವಿಧಾನ ಕೊಡ ಮಾಡಿದ ಈ ಮೂಲಭೂತ ಹಕ್ಕುಗಳು ಮಾತ್ರ ಪೋಲೀಸ್ ಪೇದೆಗಳಿಗಿಲ್ಲ. ಸಂಘಗಳನ್ನು ಕಟ್ಟಿಕೊಂಡರೆ ಅದನ್ನು ತಡೆಯುವ, ನಾಶ ಮಾಡಲು ಏನೆಲ್ಲಾ ಕಾನೂನು ಬಾಹೀರ, ದಬ್ಬಾಳಿಕೆಯ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂಬುದನ್ನು ನಾವು ಕರ್ನಾಟಕದಲ್ಲಿಯೇ ನೋಡಿದ್ದೇವೆ.ಒಂದು ವೇಳೆ ಅಂತಹ ಸಂಘ ರಚನೆಯಾದರೆ ಅದಕ್ಕೆ ಉನ್ನತ ಪೋಲೀಸ್ ಅಧಿಕಾರಿಗಳೇ ಅಧ್ಯಕ್ಷರಾಗುತ್ತಾರೆ. ಮಾಲೀಕರೇ ಕಾರ್ಮಿಕ ಸಂಘದ ನಾಯಕರಾದರೆ ಏನಾದೀತು? ಅದೇ ಆಗ ಆಗಿದೆ. ಬಹುತೇಕ ಎಡ ಪಕ್ಷಗಳ ನೇತೃತ್ವದ ರಾಜ್ಯಗಳು ಮಾತ್ರ ಅವರ ಸಂಘ ರಚನೆಗೆ, ಹಕ್ಕುಗಳನ್ನು ಮುಕ್ತವಾಗಿ ಅನುಭವಿಸಲು ಅವಕಾಶ ನೀಡಿವೆ. ಉಳಿದೆಡೆ ದಮನಕಾಂಡವೇ!

ಇತ್ತೀಚಿನ ದಿನಗಳಲ್ಲಿ ಪದವಿ, ಉನ್ನತ ಶಿಕ್ಷಣ ಪೂರೈಸಿದವರು ಪೇದೆಗಳಾಗಿ ಸೇರುತ್ತಿದ್ದಾರೆ. ಇವರ ತಿಳುವಳಿಕೆ, ಸಾಮಾಜಿಕ, ಸಾಂಸ್ಕೃತಿಕ ಮಟ್ಟ, ಸಂವೇದನೆಗಳನ್ನು ಅಧಿಕಾರಿಗಳು ಗಮನಿಸಬೇಕಾಗುತ್ತದೆ. ಇಂತಹ ಹೊಸ ವಾತಾವರಣದಲ್ಲಿ ಸಂಬಂಧಗಳು ಉತ್ತಮವಾಗಬೇಕಿತ್ತು, ಆದರೆ ಹಾಗಾಗುತ್ತಿಲ್ಲ. ಆಳುವವರ್ಗಗಳ ದಮನ ಚಕ್ರದಲ್ಲಿ, ಆಡಳಿತ ಯಂತ್ರದ ಮುಖ್ಯ ಅಸ್ತ್ರವಾಗಿರುವ ಈ ಇಲಾಖೆಯ ನೌಕರರು ಗುಲಾಮರಂತೆ ಹುಕುಂ ಜಾರಿ ಮಾಡುವುದನ್ನೇ ಬಯಸಲಾಗುತ್ತದೆ. ಇಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಗಾಳಿಯೂ ಸೋಂಕದಂತೆ ಆಳುವವರು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ಎದ್ದು ಬರುವ ಪ್ರತಿಭಟನೆ, ಆಗ್ರಹವನ್ನು ಆರಂಭದಲ್ಲೇ ಚಿವುಟಿ ಹಾಕಲಾಗುತ್ತದೆ.

ಹೀಗಿರುವಾಗ ಇಲಾಖೆಯ ನೌಕರರಲ್ಲಿ ಅತೃಪ್ತಿ ಸ್ಫೋಟಗೊಳ್ಳದೇ ಇರಲು ಹೇಗೆ ಸಾಧ್ಯ? ಅದರಲ್ಲೂ ಬಿಜೆಪಿಯಂತಹ ಭ್ರಷ್ಟ, ಅರಾಜಕ, ಕುಸಿದು ಹೋದ ದುರಾಡಳಿತದ ಸರಕಾರವಿರುವಾಗ? ಮುಖ್ಯಮಂತ್ರಿ, ಗೃಹಮಂತ್ರಿಗಳಿಗೆ ಅಧಿಕಾರದ ಖುರ್ಚಿ ಉಳಿಸಿಕೊಳ್ಳುವ, ಹಗರಣಗಳನ್ನು ಮುಚ್ಚಿಕೊಳ್ಳುವ ಕಸರತ್ತಿನಲ್ಲೇ ಮಗ್ನರಾಗಿರುವಾಗ, ಮೇಲಾಗಿ ತಮ್ಮ ಖಾತೆಗಳ ನಿರ್ವಹಣೆಯನ್ನು ಸಂವಿಧಾನ ಬಾಹೀರ ಹೊರ ಶಕ್ತಿಗಳಿಗೆ ಗುತ್ತಿಗೆ ಕೊಟ್ಟಿರುವಾಗ ಇಲಾಖೆಯ ಸುಧಾರಣೆ, ಸಿಬ್ಬಂದಿಗಳ ಬದುಕು, ಹಕ್ಕುಗಳ ರಕ್ಷಣೆಗೆ ಸಮಯವಾದರೂ ಎಲ್ಲಿ?

ಹೊಡೆದ ಗುಂಡು ಸಿಡಿದದ್ದು ಯಾರತ್ತ?

ಇಷ್ಟಾದ ಮೇಲಾದರೂ ಸರಕಾರ, ಹಿರಿಯ ಅಧಿಕಾರಿಗಳು ಎಚ್ಚೆತ್ತು ಕೊಳ್ಳಬೇಕು. ಇಲ್ಲವಾದರೆ ಎತ್ತಿದ ಕೋವಿ ಎತ್ತಲೂ ಮತ್ತೇ ತಿರುಗಲೂ ಬಹುದಲ್ಲಾ?! ಇಲ್ಲಿ ಪೇದೆ ಆನಂದಕುಮಾರ್ ಕೃತ್ಯವನ್ನು ಖಂಡಿತಾ ಒಪ್ಪಲು ಸಾಧ್ಯವಿಲ್ಲ. ಯಾವುದೇ ಪ್ರತಿಭಟನೆ, ಪ್ರತಿಕ್ರಿಯೆಗಳು ವ್ಯಕ್ತಿಗತ ನೆಲೆಯಲ್ಲಾಗಲೀ, ಹತ್ಯೆಯ ಸ್ವರೂಪದಲ್ಲಾಗಲೀ ವ್ಯಕ್ತವಾಗುವುದನ್ನು ಒಪ್ಪಲಾಗದು. ಅದು ಪರಿಹಾರ ಅಲ್ಲ. ಪ್ರತಿಭಟನೆ, ಪ್ರತಿರೋಧಕ್ಕೆ ಸಾಮೂಹಿಕ, ಪ್ರಜಾಸತ್ತಾತ್ಮಕ ಸ್ವರೂಪವಿರಬೇಕಾಗುತ್ತದೆ. ಇಲ್ಲವಾದರೆ ಇಂತಹವುಗಳು ಲೆಕ್ಕಕ್ಕೆ ಬಾರದ ಹುಸಿ ಗುಂಡುಗಳಾಗುತ್ತವೆ.

ನಿಜ. ಆದರೆ ಈ ಹತಾಶೆ, ಆಕ್ರೋಶದಲ್ಲಿ ಗುಂಡು ಹೊಡೆದದ್ದು ಎಸ್.ಐ. ವಿಜಯಕುಮಾರನಿಗಷ್ಟೇ ಅಲ್ಲ ಎಂದು ಮಾತ್ರ ಭೂಮಿಯನ್ನೇ ಆಳುವವರಿಗೆ ಅರ್ಥವಾಗುವುದಾದರೂ ಹೇಗೆ?

ಉತ್ಸಾಹಭರಿತ ಯಶಸ್ವೀ ರಾಜ್ಯ ಸಮ್ಮೇಳನ....

ಪುಟ ೧ ರಿಂದ

ಇತಿಹಾಸದ ನೆನಪುಗಳ ಮೆಲುಕು

ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದವರು ಸಿಐಟಿಯುವಿನ ಹಿರಿಯ ಸಂಗಾತಿ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ. ವಿಜೆಕೆ ನಾಯರ್. ಅವರು ಮಾತನಾಡುತ್ತಾ ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯಕ್ಕೂ ಮೊದಲಿನಿಂದಲೂ ಕಾರ್ಮಿಕ ಹೋರಾಟ, ಕಮ್ಯುನಿಸ್ಟ್ ಚಳವಳಿ ನಡೆಯುತ್ತಾ ಬಂದಿದೆ. ಆಗ ಮುಂಬೈ ಪ್ರಾಂತದ ಭಾಗವಾಗಿದ್ದ ಜಿಲ್ಲೆಯಲ್ಲಿ ಮಹಾರಾಷ್ಟ್ರದ ಪ್ರಸಿದ್ಧ ಹೋರಾಟಗಾರರಾದ ಕಾಂ. ಗೋದಾವರಿ ಪುರುಳೇಕರ್, ಕಾಂ. ಶ್ಯಾಮರಾವ್ ಪುರಳೇಕರ್‌ರವರ ಪರಿಶ್ರಮ, ತ್ಯಾಗ ಕೊಡುಗೆ ಮರೆಯಲಾಗದಂತಹದ್ದು. ಕಾರ್ಮಿಕ ಮುಖಂಡ ಕಾಂ.ಸ್ಥಳೇಕರ್ ದಾಂಡೇಲಿಯಲ್ಲಿ ಮುನಿಸಿಪಲ್ ಅಧ್ಯಕ್ಷರಾಗಿ ಮಾಡಿದ ಕೆಲಸ...ಕಾರ್ಮಿಕರಿಗೆ, ಬಡವರಿಗೆ ಮನೆ ಕೊಟ್ಟದ್ದು...ರಾಜ್ಯದಲ್ಲಿ ಯಾರೂ ರಾಜ್ಯದಲ್ಲಿ ಮಾಡಿಲ್ಲ. ಸ್ವಾತಂತ್ರ್ಯ ಹೋರಾಟಗಾರ ಕಾಂ.ಧಾರೇಶ್ವರ್ ಮುಂತಾದವರು, ಪಿಕಳೆ, ದಾಂಡೇಲಿಯಲ್ಲಿ ಕಾಂ. ಸಿಂಗ್ ಹುಲಿಗಳ ತರ ಹೋರಾಟ ನಡೆಸಿದ್ದಾರೆ. 1970 ರಲ್ಲಿ ಸಿಐಟಿಯು ರಚನೆಯಾದಾಗ ಸಂಘಟನೆಯಲಿದ್ದ ಅಷ್ಟೂ ಕಾರ್ಮಿಕರು ಸಿಐಟಿಯುವನ್ನು ಬೆಂಬಲಿಸಿದ ಜಿಲ್ಲೆ ಉತ್ತರ ಕನ್ನಡ ಜಿಲ್ಲೆ. 'ವೆಸ್ಟ್ ಕೋಸ್ಟ್' ಹೋರಾಟ ಹತ್ತು ದಿನದ ಹೆಸರಾಂತ ಹೋರಾಟ.

ಇರತಹ ಹೋರಾಟಗಳ ಬೆನ್ನಿಗೆ ನರಗುಂದ ನವಲಗುಂದ ಹೋರಾಟ, ಬೆಂಗಳೂರಿನ ಸಾರ್ವಜನಿಕ ಕೈಗಾರಿಕೆಗಳ ಮುಷ್ಕರ, ಇಂತಹ ಹೋರಾಟಗಳ ಫಲವಾಗಿ ರಾಜ್ಯದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ 1983 ರಲ್ಲಿ ಅಧಿಕಾರಕ್ಕೆ ಬಂದಿತು.

ಕಾರ್ಮಿಕರು ಮತ್ತು ರೈತರ ಹೋರಾಟಗಳನ್ನು ಬೆಸೆದು ಚಳುವಳಿ ಮಾಡಬೇಕು ಎಂದು ಹೇಳಿದರು.

ಕಾರ್ಮಿಕರ ಮತ್ತು ಸಮಾಜದ ಪಾಲು ಕುಸಿತ

1990ಕ್ಕೆ ಮುಂಚೆ ಕೈಗಾರಿಕಾ ಉತ್ಪಾದನೆಯ ಒಟ್ಟು ಮೌಲ್ಯದಲ್ಲಿ 100 ರೂಪಾಯಿಯಲ್ಲಿ 33 ರೂ. ಕಾರ್ಮಿಕರಿಗೆ ಸಿಗುತ್ತಿತ್ತು. ಮಾಲಿಕರಿಗೆ 12 ರೂಪಾಯಿ ಸಿಗುತ್ತಿತ್ತು. ಬಡ್ಡಿ ತೆರಿಗೆ ಇತ್ಯಾದಿಗಳ ಮೂಲಕ 55 ರೂಪಾಯಿ ಸಮಾಜಕ್ಕೆ ಸಲ್ಲುತ್ತಿತ್ತು. ಈಗ ಅದೇ 100 ರೂಪಾಯಿ ಮೌಲ್ಯದಲ್ಲಿ 12 ರೂಪಾಯಿ ಮಾತ್ರ ಕಾರ್ಮಿಕರಿಗೆ ಸಿಗುತ್ತಿದೆ. ಮಾಲಿಕನಿಗೆ 100 ರೂಪಾಯಿಯಲ್ಲಿ 45 ರೂಪಾಯಿ ಸಿಗುತ್ತಿದೆ. 43 ರೂಪಾಯಿ ಮಾತ್ರ ಸಮಾಜಕ್ಕೆ ಸಲ್ಲುತ್ತಿದೆ. ಆದ್ದರಿಂದ ಈಗ ಮುಖ್ಯವಾದ ಹೋರಾಟ ಕೂಲಿಗಾಗಿ, ಖಾಯಮಾತಿಗಾಗಿ. 10 ಸಾವಿರ ಕೂಲಿ ಬೇಕು. ಕೆಲಸ ಕಾಯಂ ಆಗಬೇಕು. ಸಾರ್ವಜನಿಕ ಕ್ಷೇತ್ರವನ್ನು ಮುಚ್ಚಕೂಡದು. ಅಧಿಕಾರಕ್ಕೆ ಬರುವ ಮುಂಚೆ 2 ರೂಪಾಯಿಗೆ ಅಕ್ಕಿ ಕೊಡುತ್ತೇವೆ ಎಂದು ಭಾಜಪ ಹೇಳಿತ್ತು. ಭಾಜಪ, ಕಜಪ, ಬೇಸರ ಪಕ್ಷ (ಬಿಎಸ್‌ಆರ್ ಪಕ್ಷ) ಈ ಎಲ್ಲ ಪಕ್ಷಗಳು ಸೇರಿಕೊಂಡು ಬಳ್ಳಾರಿಯ ಕಬ್ಬಿಣ ಮುಕ್ಕಿದರು. ಬಳ್ಳಾರಿಯ 'ಸೊಸೆ' ಮತ್ತು 'ಮಗಳು' ಎಲ್ಲರೂ ತಿಂದರು. ಕುಮಾರ ಸ್ವಾಮಿ ವಚನ ಭ್ರಷ್ಟ ಎನ್ನುವುದಾದರೆ 2 ರೂಪಾಯಿಗೆ 35 ಕೆ.ಜಿ. ಅಕ್ಕಿ ಕೊಡುತ್ತೇವೆಂದು ಭರವಸೆ ನೀಡಿ ಕೊಡದೇ ಇರುವುದು ಏನು ? ಜನರಿಗೆ ಅಕ್ಕಿ ಕೊಡಲು 35 ಕೋಟಿ ಕೊಡುವುದಿಲ್ಲ. ಯಾರಾದರೂ ಸ್ವಾಮೀಜಿ ಕೇಳಿದರೆ 50 ಕೋಟಿ ಕೊಡಲು ಇವರು ಸಿದ್ಧ ಎಂದು ವಿಜೆಕೆ ನಾಯರ್‌ರವರು ಖಂಡಿಸಿದರು.

ರಾಜ್ಯದಲ್ಲಿ ಸಿಐಟಿಯು ಸಂಘಟನೆ ಕಾರ್ಮಿಕ ಚಳುವಳಿ ಬೆಳೆಯುತ್ತಿದೆ. ರಾಜ್ಯದ 175 ತಾಲೂಕುಗಳ ಪೈಕಿ 170 ರಲ್ಲಿ ಕೆಂಬಾವುಟ ಇದೆ. ಫೆಬ್ರವರಿ 20-21 ವ್ಯಾಪಾರ ವಹಿವಾಟು ಸಾರಿಗೆ: ಎಲ್ಲವೂ ಸ್ಥಗಿತಗೊಳ್ಳುವಂತಹ ಹೋರಾಟ ನಡೆಯಲಿದೆ ಎಂದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್ ಮಾತನಾಡಿ ರಾಜ್ಯದಲ್ಲಿ ಅಕ್ಕಿ ಬೆಲೆ 50 ರೂಪಾಯಿ ಆಗಿದೆ. ಸರ್ಕಾರ ಸಮಿತಿ ರಚನೆ ಎನ್ನುತ್ತಿದೆ. ರಾಜ್ಯದಲ್ಲಿ ರಾಜಕೀಯ ಕಚ್ಚಾಟ ನಡೆಯುತ್ತಿದೆ. ಅದು ಜನರಿಗೆ ಅಕ್ಕಿ ಕೊಡಿಸಲು ಅಲ್ಲ, ಅಂಗನವಾಡಿ, ಗ್ರಾಮ ಪಂಚಾಯತ್ ನೌಕರರು, ಹೆಂಚು, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು ಮುಂತಾದ ಕಾರ್ಮಿಕರಿಗೆ ಕನಿಷ್ಠ ಕೂಲಿ ಸಿಗಬೇಕು ಎಂಬ ಕಾರಣಕ್ಕಾಗಿಯೂ ಅಲ್ಲ.

ಕೇಸರಿ ಬಾವುಟ, ಕೆಂಬಾವುಟ ಯಾವುದೇ ಬಾವುಟ ಹಿಡಿದಿರಲಿ...ಕಾರ್ಮಿಕರು ಕಾರ್ಮಿಕರೇ.. ಅದಕ್ಕಾಗಿ ಐಕ್ಯ ಹೋರಾಟ. ಐಕ್ಯ ಚಳುವಳಿಯ ಅಲೆ ಎದ್ದು ಬರುತ್ತಿದೆ. ಸರ್ಕಾರವನ್ನು ಬೀಳಿಸಿದರೆ ಜನ ಕ್ಷಮಿಸುದಿಲ್ಲ ಎಂದಿದ್ದಾರೆ ಬಿಜೆಪಿ ಸರ್ಕಾರದ ಸಚಿವ ಕಾಗೇರಿ. ರಾಜ್ಯ ಬಿಜೆಪಿ ಸರ್ಕಾರದ ದುರಾಡಳಿತದಲ್ಲಿ ಕಾರ್ಮಿಕ ಆಯುಕ್ತರ ನೇಮಕವೇ ಆಗಿಲ್ಲ. ಒರಿಸ್ಸಾದಲ್ಲಿ ಒಂದು ರೂಪಾಯಿಗೆ ಕೆ.ಜಿ. ಅಕ್ಕಿ ನೀಡಲು ಅಲ್ಲಿನ ಸರ್ಕಾರ ತೀರ್ಮಾನಿಸಿದೆ. ಆದರೆ ಒರಿಸ್ಸಾದಲ್ಲಿ ಕಬ್ಬಿಣದ ಅದಿರು ಲೂಟಿ ಮಾಡಿ, ಬುಡಕಟ್ಟು ಜನರ ಭೂಮಿ ಕಬಳಿಸಿದ ಕಾರಣಕ್ಕೆ ಅಲ್ಲಿಂದ ಓಡಿಸಲಾದ ವೇದಾಂತ ಕಂಪನಿಗೆ ರಾಜ್ಯ ಸರ್ಕಾರವು ಬಿಸಿಯೂಟದ ಯೋಜನೆ ಗುತ್ತಿಗೆ ನೀಡಲಾಗಿದೆ. ಜಿಂದಾಲ್, ಇಸ್ಕಾನ್‌ನಂತಹ ಸಂಸ್ಥೆಗಳಿಗೆ ಬಿಸಿಯೂಟ ಪೂರೈಕೆ ಜವಾಬ್ದಾರಿ ವಹಿಸಿ ಸರ್ಕಾರ ಹೊಣೆಯಿಂದ ಜಾರಿಕೊಳ್ಳುತ್ತಿದೆ. ಭ್ರಷ್ಟಾಚಾರ ಮಿತಿಮೀರಿದೆ. ಮುಖ್ಯಮಂತ್ರಿಗಳು, ಮಂತ್ರಿಗಳು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಸಿಲುಕಿ ಜೈಲಿಗೆ ಹೋಗುತ್ತಿದ್ದಾರೆ.


ಕರ್ನಾಟಕ ಈ ವಿಷಯದಲ್ಲಿ ಮುಂದೆ ಇದೆ. ರಾಜ್ಯದಲ್ಲಿ ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನಗಳಾಗುತ್ತಿವೆ. ಅದು ಉದಯಿಸುವ ಸೂರ್ಯನನ್ನು ಅಂಗೈ ಇಟ್ಟು ತಡೆಯುವಂತಹ ಪ್ರಯತ್ನ ಆಗುತ್ತದೆ. ಈ ಲಜ್ಜೆಗೇಡಿ ಸರ್ಕಾರ "ಗೆಟ್ ಔಟ್..." ಎಂದು ಹೇಳಬೇಕು ಎಂದ ಪ್ರಸನ್ನ ಕುಮಾರ್ ಹೇಳಿದರು.


ಸಿಐಟಿಯು ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಮಾತನಾಡಿ ಗ್ರಾ... ಪಂಚಾಯತ್, ಅಂಗನವಾಡಿ ನೌಕರರ... ಬಿಸಿಯೂಟ ನೌಕರರ ಸೇವೆ ಕಾಯಂ ಆಗಬೇಕು... ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಂತ... ಯೋಜನೆಗಳು ಒಂದು ನಿಧಿಷ್ಟ ಅವಧಿಯ... 'ಸ್ಕೀಮ್'ಗಳಾಗದೇ ಕಾಯಂ ವ್ಯವಸ್ಥೆಯಾ... ಬೇಕು. ಕೇಂದ್ರ ಯುಪಿಎ ಸರ್ಕಾರ... ರೀತಿಯಲ್ಲೇ ರಾಜ್ಯ ಬಿಜೆಪಿ ಸರ್ಕಾರವು... ಅಂಗನವಾಡಿಗಳ ಖಾಸಗೀಕರಣದ ತೀರ್ಮಾ... ಕೈಗೊಳ್ಳುತ್ತಿದೆ. ಈ ಇದರಿಂದ 34 ಲಕ್ಷ ಮಕ್ಕಳ... 9 ಲಕ್ಷ ಗರ್ಭಿಣಿಯರು ತೊಂದರೆ... ಸಿಲುಕಿಲಿದ್ದಾರೆ ಎಂದರು.


ಹಣ ಸಂಗ್ರಹ ಮಾಡಲು ಹೋದಾ... ಬಿಜೆಪಿಯು ಕೆಲವು ಅಡ್ಡಿ ಪಡಿಸಿದ್ದಾ... ಅಂಗನವಾಡಿಯವರಿಂದ ಅಕ್ರಮವಾಗಿ... ವಸೂಲಿ ಮಾಡಲಾಗುತ್ತಿದೆ ಎಂದು ಅಪಪ್ರಚಾ... ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯ... ಕಾರ್ಮಿಕರಿಗೆ ಕನಿಷ್ಠ ಕೂಲಿ ಇತ್ಯಾದಿಗಳಿಗಾ... ಸಮ್ಮೇಳನ ನಡೆಯುತ್ತಿದೆ. ಸಿಐಟಿಯು... ಸಮಾನತೆಯ ಬದುಕಿಗಾಗಿ ಹೋರಾಡುತ್ತಿ... ರಾಜ್ಯದಲ್ಲಿ ಜನರಿಗೆ ಕುಡಿಯಲು ನೀರಿಲ್ಲ... ರಸ್ತೆಗಳು ಹಾಳಾಗಿವೆ. ಬಿಜೆಪಿ ಸರ್ಕಾ... ಭ್ರಷ್ಟಾಚಾರ, ಹಗರಣಗಳಲ್ಲಿ ಮುಳುಗಿದೆ. ಬಿಜೆ... ಮಂತ್ರಿಗಳು ಗಣಿ ಹಗರಣ, ಭೂ ಹಗರಣ... ಲೈಂಗಿಕ ಹಗರಣಗಳಲ್ಲಿ ಭಾಗಿಯಾಗಿದ್ದಾರೆ... ಇಂತಹ ಸಂದರ್ಭದಲ್ಲಿ ಸಿಐಟಿಯು ಬ... ಮಾತನಾಡಲು ಬಿಜೆಪಿಯವರಿಗೆ ಯಾವ ನೈತಿಕ... ಇದೆ ಎಂದು ಪ್ರಶ್ನಿಸಿದ ಅವರು ಬಿಜೆ... ರಾಮರಾಜ್ಯದ ಬೊಗಳೆ ಏನಾಯ್ತು ? ರಾಷ್ಟ್ರಭ... ಏನಾಯ್ತು ?ಬಿಜೆಪಿ ಮಂತ್ರಿಯಾಗಿದ್ದ ಜನಾರ್ಧ... ರೆಡ್ಡಿ ಈಗ ಎಲ್ಲಿದ್ದಾರೆ ? ಹರತಾಳ... ಹಾಲಪ್ಪವನರ ಕತೆ ಏನಾಗಿದೆ ? ... ಪ್ರಶ್ನಿಸಿದರು. ಕೆಂಬಾವುಟವನ್ನು ಯಾರೂ ನಾ... ಮಾಡಲು ಸಾಧ್ಯವಿಲ್ಲ. ಬಿಸಿಯೂಟ... ನೌಕರರಿಗೆ ತಿಂಗಳಿಗೆ ಬರಿ 1000 ರೂಪಾಯಿ... ಸಂಬಳ ನೀಡಲಾಗುತ್ತಿದೆ. ಅಂಗನವಾ... ಯವರಿಗೆ 3500 ಸಂಬಳ ಅದನ್ನೂ ನಾಲ್ಕು... ತಿಂಗಳಿಂದ ಕೊಟ್ಟಿಲ್ಲ. ಇಂತಹ ಧೋರಣೆ... ಖಂಡಿಸಿ ಫೆಬ್ರವರಿ 20-21 ರಂದು ಅಂಗ... ವಾಡಿ ಬಂದ್ ನಡೆಯುತ್ತದೆ. ಬಿಸಿಯೂಟ... ಅಂಗನವಾಡಿ ನೌಕರರನ್ನು, ಕಾರ್ಮಿಕರನ್ನು... ಅನವಶ್ಯಕವಾಗಿ ಕೆಣಕಲು ಬರಬೇಡಿ ಎಂದು... ವರಲಕ್ಷ್ಮಿಯವರು ಎಚ್ಚರಿಕೆ ನೀಡಿದರು. ತಪನ್... ಸೇನ್ ಅವರ ಮಾತುಗಳನ್ನು ಕೆ.ಎನ್. ಉಮೇಶ... ಕನ್ನಡಕ್ಕೆ ತಂದು ಕೊಟ್ಟರು. ಸಿಐಟಿಯು ರಾಜ... ಸಮಿತಿಯ ಪದಾಧಿಕಾರಿಗಳು ಹಾಗೂ ಸ್ವಾಗ... ಸಮಿತಿಯ ಮುಖಂಡರು ವೇದಿಕೆ... ಮೇಲಿದ್ದರು. ಯಮುನಾ ಗಾಂ... ಕಾರ್ಯಕ್ರಮ ನಿರೂಪಿಸಿದರು. ಹರೀಶ... ನಾಯಕ್ ವಂದನಾರ್ಪಣೆ ಮಾಡಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾಗಿ ವಿ.ಜೆ.ಕೆ.ನಾಯರ್, ಪ್ರಧಾನ ಕಾರ್ಯದರ್ಶಿಯಾಗಿ ಪ್ರಸನ್ನ ಕುಮಾರ್ ಪುನರಾಯ್ಕೆ

ಶಿರಸಿಯಲ್ಲಿ ಜನವರಿ 27 ರಿಂದ 29ರ ವರೆಗೆ ನಡೆದ ಸಿ.ಐ.ಟಿ.ಯು. 12ನೇ ರಾಜ್ಯ ಸಮ್ಮೇಳನದ ಕೊನೆಯ ದಿನ ರಾಜ್ಯ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಸಮ್ಮೇಳನ ಆಯ್ಕೆ ಮಾಡಿತು. 35 ಜನರ ಪದಾಧಿಕಾರಿಗಳಲ್ಲಿ ಅಧ್ಯಕ್ಷರಾಗಿ ವಿ.ಜೆ.ಕೆ.ನಾಯರ್, ಪ್ರಧಾನ ಕಾರ್ಯದರ್ಶಿಯಾಗಿ ಎಸ್. ಪ್ರಸನ್ನಕುಮಾರ್ ಮತ್ತು ಖಜಾಂಚಿಯಾಗಿ ಪಿ.ಕೆ. ಪರಮೇಶ್ವರ್ ಪುನರಾಯ್ಕೆಗೊಂಡರು.







ಉಪಾಧ್ಯಕ್ಷರಾಗಿ ಜಿ. ಮಾಧವ, ಕೆ.ಶಂಕರ್, ಎಸ್.ವರಲಕ್ಷ್ಮಿ, ವಿ.ಸುಕುಮಾರ್, ಆರ್. ಶ್ರೀನಿವಾಸ್, ಜೆ. ಬಾಲಕೃಷ್ಣ ಶೆಟ್ಟಿ, ರಮಣಿ, ಜೆ.ಜೈರಾಮ, ಟಿ. ಲೀಲಾವತಿ, ವೀರಾಸ್ವಾಮಿ ಎನ್., ತಿಲಕ ಗೌಡ, ಬಿ.ಎಂ.ಭಟ್, ಶಾಂತಾ ಎನ್. ಘಂಟಿ, ಹರೀಶ ನಾಯ್ಕ ಆಯ್ಕೆಯಾದರು.

ಕಾರ್ಯದರ್ಶಿಗಳಾಗಿ ಮಿನಾಕ್ಷಿ ಸುಂದರಂ, ಸೈಯದ್ ಮುಜೀಬ್, ವಸಂತ ಆಚಾರಿ, ಕೆ.ಎನ್. ಉಮೇಶ್, ಯಮುನಾ ಗಾಂವ್ಕರ್, ಮಂಟನ ಗೌಡ, ಬಾಲಕೃಷ್ಣ ಶೆಟ್ಟಿ (ಉಡುಪಿ), ಆರ್.ಎಸ್.ಬಸವರಾಜ, ಕೆ. ಮಹಾಂತೇಶ್, ಎಚ್.ಎಸ್. ಸುನಂದಾ, ಮಹೇಶ ಪತ್ತಾರ, ಮಾಲಿನಿ ಮೆಸ್ತಾ ಮತ್ತು ಸಹಕಾರ್ಯದರ್ಶಿಗಳಾಗಿ ಜಿ.ರಾಮಕೃಷ್ಣ, ಪ್ರತಾಪ ಸಿಂಹ, ಸಿದ್ಧಗಂಗಪ್ಪ, ರಾಘವೇಂದ್ರ, ಗೈಬು ಜೈನೆಖಾನ್, ನಾಗರತ್ನ ಆಯ್ಕೆಗೊಂಡರು. ಅಲ್ಲದೇ 88 ಜನರ ರಾಜ್ಯ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಚಾರ್ ವರದಿಯ ನಂತರ : ಪ್ರಚಾರವೇ ಹೆಚ್ಚು, ಫಲಿತಾಂಶ ಅಲ್ಪ


2006 ರಲ್ಲಿ ರಾಜಿಂದರ್ ಸಚಾರ್ ಸಮಿತಿ ಸಲ್ಲಿಸಿದ ವರದಿ ಭಾರತೀಯ ಮುಸ್ಲಿಮರ ಸಾಮಾಜಿಕ-ಆರ್ಥಿಕ ದುಸ್ಥಿತಿಯನ್ನು ತೋರಿಸಿತು. ಮೂಲಸೌಕರ್ಯಗಳ ಲಭ್ಯತೆಯ ವಿಷಯದಲ್ಲಿ ಅವರು ಪರಿಶಿಷ್ಟ ಜಾತಿಗಳು/ಪಂಗಡಗಳಿಗಿಂತಲೂ ಹಿಂದಿದ್ದಾರೆ, ಇದು ಅವರ ಒಟ್ಟಾರೆ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಮೇಲೆ ಪ್ರಭಾವ ಬೀರಿದೆ ಎಂದು ಅದು ಹೇಳಿತು. ಅಲ್ಲದೆ ಮುಸ್ಲಿಂ ಜನಸಂಖ್ಯೆಯಲ್ಲೂ ಛಿಂಗಡಣೆಗಳಿವೆ, ಅವರಲ್ಲಿ ಮುಸ್ಲಿಮ್ ಒಬಿಸಿಗಳ ಬಗ್ಗೆ ಹೆಚ್ಚಿನ ಕಾಳಜಿ ಬೇಕಾಗಿದೆ, ಅದರಿಂದ ಒಟ್ಟಾರೆಯಾಗಿ ಮುಸ್ಲಿಂ ಅಲ್ಪಸಂಖ್ಯಾತರ ಪರಿಸ್ಥಿತಿಯೂ ಉತ್ತಮಗೊಳ್ಳಬಲ್ಲದು ಎಂದಿತ್ತು. ಈ ವರದಿಯ ಮೇಲೆ ಹಲವು ಚರ್ಚೆ, ವಾಗ್ವಾದಗಳ ನಂತರ ಯುಪಿಎ ಸರಕಾರ 'ಬಹುವಲಯ ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮ'(ಎಂಡಿಡಿಪಿ) ಕಾರ್ಯಕ್ರಮವನ್ನು ಆರಂಭಿಸಿ, ಇದು ತನ್ನ ಮಹಾಸಾಧನೆಗಳಲ್ಲಿ ಒಂದು ಎಂದು ಪ್ರಚಾರ ಗಿಟ್ಟಿಸಿಕೊಂಡಿತು. ಅಲ್ಲದೆ ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರಿಗೆ ಶೈಕ್ಷಣಿಕ ಅನುಕೂಲಗಳನ್ನು ಹೆಚ್ಚಿಸುವ ಮತ್ತು ಸಾರ್ವಜನಿಕ ವಲಯದಲ್ಲಿ ಉದ್ಯೋಗವನ್ನು ಲಭ್ಯಗೊಳಿಸುವ ಭರವಸೆಗಳನ್ನೂ ಕೊಡಲಾಯಿತು. ಎಂಡಿಡಿಪಿಯನ್ನು ಮುಸ್ಲಿಂ ಜನಸಂಖ್ಯೆ ಹೆಚ್ಚು ಸಾಂದ್ರವಾಗಿರುವ 90 ಜಿಲ್ಲೆಗಳಲ್ಲಿ ಆರಂಭಿಸಲಾಯಿತು. ನಂತರ ಅದನ್ನು 121 ಜಿಲ್ಲೆಗಳಿಗೆ ವಿಸ್ತರಿಸಲಾಯಿತು.

ಇದಾಗಿ ಈಗ ಆರು ವರ್ಷಗಳಾಗಿವೆ. ಆದರೆ ಅಲ್ಪಸಂಖ್ಯಾತರ ದುಸ್ಥಿತಿಗಳಲ್ಲಿ ಬದಲಾವಣೆಯೇನೂ ಕಂಡಿಲ್ಲ ಎಂದು ಒಂದು ಅಧ್ಯಯನದಿಂದ ಕಂಡು ಬಂದಿದೆ. ಸಚಾರ್ ವರದಿ ಗಮನಿಸಿದ ವ್ಯವಸ್ಥೆಯೊಳಗಿನ ಪಕ್ಷಪಾತದ ಬೇರುಗಳು ಇನ್ನೂ ಆಳವಾಗಿ ಉಳಿದಿವೆ ಎಂಬುದೂ ಕಂಡು ಬಂದಿದೆ.

2005 ರಿಂದ 2010 ರ ನಡುವೆ ಸಾಕ್ಷರತೆಯ ಮಟ್ಟ ಒಟ್ಟು ಜನಸಂಖ್ಯೆಯಂತೆ ಅಲ್ಪಸಂಖ್ಯಾತರಲ್ಲೂ ಏರಿದೆ; ಆದರೆ ಏರಿಕೆ ಅತ್ಯಂತ ನಿಧಾನಗತಿಯಿಂದ ನಡೆದಿರುವುದು ಮುಸ್ಲಿಂ ಒಬಿಸಿಗಳ ನಡುವೆಯೇ. ಪರಿಶಿಷ್ಟಜಾತಿ/ಪಂಗಡಗಳಲ್ಲಿ ಕೂಡ ಸಾಕ್ಷರತೆಯ ಮಟ್ಟ ಗಮನಾರ್ಹವಾಗಿ ಹೆಚ್ಚಿತ್ತು. ಮೇಲಣ ಹಂತಗಳ ಶಿಕ್ಷಣದಲ್ಲಿ ಈ ಅಂತರ ಇನ್ನೂ ಹೆಚ್ಚು, ಮ್ಯಾಟ್ರಿಕ್ಯುಲೇಶನ್ ಮಟ್ಟದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಏರಿಕೆಯ ಮಟ್ಟ ನಗರಗಳಲ್ಲಿ 11 ಶೇ. ಮತ್ತು ಹಳ್ಳಿಗಳಲ್ಲಿ 7ಶೇ., ಪರಿಶಿಷ್ಟ ಪಂಗಡಗಳಲ್ಲಿ ಅನುಕ್ರಮವಾಗಿ 13ಶೇ. ಮತ್ತು 10ಶೇ.; ಆದರೆ ಮುಸ್ಲಿಮರಲ್ಲಿ ಇದು ಅನುಕ್ರಮವಾಗಿ 5ಶೇ. ಮತ್ತು 7ಶೇ. ಅಂದರೆ ಒಂದು ವಿಶೇಷ ಕಾರ್ಯಕ್ರಮದ ಹೊರತಾಗಿಯೂ ನಿರೀಕ್ಷಿತ ವೇಗದಲ್ಲಿ ಪರಿಸ್ಥಿತಿ ಉತ್ತಮಗೊಳ್ಳುತ್ತಿಲ್ಲ. ಉನ್ನತ ಶಿಕ್ಷಣದಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ; ಇತರ ಅಂಚಿಗೆ ತಳ್ಳಲ್ಪಟ್ಟಿದ್ದ ಸಾಮಾಜಿಕ ವಿಭಾಗಗಳ ಪ್ರಮಾಣದಲ್ಲಿ ಗಮನಾರ್ಹ ಹೆಚ್ಚಳವಾಗಿದ್ದರೂ ಮುಸ್ಲಿಂ ಒಬಿಸಿಗಳ ಪಾಲು ಕೇವಲ 2ಶೇ.ದಷ್ಟು ಹೆಚ್ಚಿದೆ, ಒಟ್ಟಾರೆಯಾಗಿ ಮುಸ್ಲಿಮರ ಪ್ರಮಾಣ 1.5ಶೇ.ದಷ್ಟು ಇಳಿದಿದೆ.

ಶಿಕ್ಷಣದಲ್ಲಿನ ಈ ಅಂತರದ ಪ್ರಭಾವ ಉದ್ಯೋಗದಲ್ಲಿಯೂ ಕಾಣ ಬಂದಿದೆ. ಔಪಚಾರಿಕ ವಲಯದ ಉದ್ಯೋಗಗಳಲ್ಲಿ ಮೇಲ್ಜಾತಿಗಳವರ ಮತ್ತು ಮುಸ್ಲಿಮರು ಬಿಟ್ಟು ಇತರರ ಮೇಲಾಟ ಹಾಗೆಯೇ ಮುಂದುವರೆದಿದೆ, ಪರಿಶಿಷ್ಟ ಜಾತಿ/ಪಂಗಡಗಳ ಮತ್ತು ಮುಸ್ಲಿಮರ ಪ್ರಮಾಣ ಇನ್ನೂ ಶೋಚನೀಯವಾಗಿಯೇ ಇದೆ. ಇಲ್ಲಿ ಮುಸ್ಲಿಮರ ಉದ್ಯೋಗ ಪ್ರಮಾಣ ಕೇವಲ 11.6 ಶೇ. ಇವರಲ್ಲಿ ನಗರಗಳಲ್ಲಿ ಸಾರ್ವಜನಿಕ ವಲಯದಲ್ಲಿ ಉದ್ಯೋಗ ಪಡೆದಿರುವವರ ಪ್ರಮಾಣ ಕೇವಲ 5.6ಶೇ., ಖಾಸಗೀ ವಲಯದಲ್ಲಿ 83ಶೇ. ಗ್ರಾಮೀಣ ಪ್ರದೇಶಗಳಲ್ಲಿ ರೇಗಾದಲ್ಲಿ ಮುಸ್ಲಿಮರ ಪ್ರಮಾಣ ಕೇವಲ 3 ಶೇ.

ಮುಸ್ಲಿಮರಲ್ಲಿ ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ, ವಿಮೆ ಮುಂತಾದ ಆಧುನಿಕ ವಲಯಗಳಲ್ಲಿ ಅವರ ಪ್ರಮಾಣ ಕೇವಲ 6 ಶೇ. ಅವರಲ್ಲಿ ನಗರವಾಸಿಗಳ ಪ್ರಮಾಣ ಬಹಳ ಹೆಚ್ಚು ಮತ್ತು ಅವರಲ್ಲಿ ಬಹುಮಂದಿ ಸ್ವ-ಉದ್ಯೋಗ ವಲಯದಲ್ಲಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲೂ ಕೈಕಸಬುದಾರರಾಗಿರುವವರೇ ಹೆಚ್ಚು. ಯುಪಿಎ ಸರಕಾರಗಳು ಹಿಡಿದಿರುವ ನವ-ಉದಾರವಾದಿ ದಾರಿಯಿಂದಾಗಿ ಹೂಡಿಕೆಗಳ ಅಭಾವವನ್ನು ಮತ್ತು ನಿಧಾನ ಬೆಳವಣಿಗೆಯ ದರಗಳನ್ನು ಕಾಣುತ್ತಿರುವ ವಲಯಗಳಿವು. ಸರಕಾರ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳ ವಲಯದಿಂದ ಹಿಂದೆ ಸರಿಯುವುದರಿಂದಾಗಿ ಈ ವಲಯದಲ್ಲಿರುವವರಿಗೆ ಹಣಕಾಸು ಸಾಲದ ಲಭ್ಯತೆ ಬಹಳ ಮುಖ್ಯವಾಗುತ್ತದೆ. ರಿಝರ್ವ್ ಬ್ಯಾಂಕ್ ವಿಮರ್ಶೆಯ ಪ್ರಕಾರವೇ ಅಲ್ಪಸಂಖ್ಯಾತರ ಬ್ಯಾಂಕ್ ಖಾತೆಗಳ ಪ್ರಮಾಣ 20.3ಶೇ.ಇದ್ದರೂ ಅವರು ಪಡೆದಿರುವ ಸಾಲಗಳ ಪ್ರಮಾಣ ಕೇವಲ 11.6ಶೇ. ಎಂಡಿಪಿಪಿಯ 121 ಜಿಲ್ಲೆಗಳಲ್ಲಿ ಕೂಡ 2009-11 ರ ಅವಧಿಯಲ್ಲಿ ಬ್ಯಾಂಕುಗಳು ಮುಸ್ಲಿಮರಿಗೆ ನೀಡಿದ ತಲಾ ಸಾಲದ ಪ್ರಮಾಣ ರೂ.50,000 ದಿಂದ ರೂ.1ಲಕ್ಷಕ್ಕೆ ಏರಿತಷ್ಟೇ; ಇದೇ ಅವಧಿಯಲ್ಲಿ ಇತರರ ಸಾಲದ ಪ್ರಮಾಣ ರೂ.2.3 ಲಕ್ಷದಿಂದ ರೂ.2.7 ಲಕ್ಷಕ್ಕೇರಿತು. ಆದರೂ ಆದ್ಯತೆಯ ವಲಯದ ಸಾಲಗಳಲ್ಲಿ ಮುಸ್ಲಿಮರಿಗೆ ಸಿಕ್ಕಿರುವ ಪ್ರಮಾಣ 2005 ರಿಂದ 2011ರ ನಡುವೆ 8.08ಶೇ. ದಿಂದ 13 ಶೇ.ಕ್ಕೇರಿತು ಎಂದು ಯುಪಿಎ-2 ಸರಕಾರದ ಹಣಕಾಸು ಇಲಾಖೆ ಹೇಳಿಕೊಳ್ಳುತ್ತಿದೆ.



ವೇದರಾಜ ಎನ್.ಕೆ.

ಇದಕ್ಕೆ ಮುಖ್ಯ ಕಾರಣ ಯುಪಿಎ-2 ಪ್ರಚಾರ ಗಿಟ್ಟಿಸಲು ತೋರಿಸುತ್ತಿರುವ ಕಾರ್ಯಕ್ರಮಗಳ ದಿಕ್ಕುತಪ್ಪಿದ ಮತ್ತು ಅದಕ್ಷ ಜಾರಿ ಕಾರಣ ಎಂದು ಈ ಪ್ರಶ್ನೆಯ ಅಧ್ಯಯನ ನಡೆಸಿದವರು ಹೇಳುತ್ತಾರೆ. ಉದಾಹರಣೆಗೆ, ಎಂಡಿಪಿಪಿ ಕಾರ್ಯಕ್ರಮದಲ್ಲಿ ಆರಿಸಿಕೊಂಡ 121 ಜಿಲ್ಲೆಗಳಲ್ಲಿ ನಗರಗಳಲ್ಲಿ ವಾಸಿಸುವ ಮುಸ್ಲಿಮರ ಪ್ರಮಾಣ 40ಶೇ. ಆದರೆ ಈ 40ಶೇ. ಮಂದಿಯನ್ನು ಈ ಕಾರ್ಯಕ್ರಮ ಒಳಗೊಳ್ಳುವುದೇ ಇಲ್ಲ. ಏಕೆಂದರೆ ಈ ಯೋಜನೆ ನಗರಪ್ರದೇಶಕ್ಕೆ ಅನ್ವಯವಾಗುವಂತದಲ್ಲ. ಇದಲ್ಲದೆ ಬಹುಸಂಖ್ಯಾತ ಕೋಮುಗಳವರ ಪಕ್ಷಪಾತದ ನಿಲುವುಗಳ ಪಾತ್ರವಂತೂ ಇದ್ದೇ ಇದೆ.

ತೆಲಂಗಾಣ: ಮಾಡಿದ್ದುಣ್ಣೋ ಮಹಾರಾಯ!

ಯುಪಿಎ-2 ಸರಕಾರಕ್ಕೆ ತೆಲಂಗಾಣ ಈಗ ಒಂದು ದೊಡ್ಡ ತಲೆನೋವಾಗಿದೆ; ಸಂಸತ್ತಿನಲ್ಲಿ ಅದಕ್ಕೆ ಸಂಖ್ಯೆಗಳ ಅಗತ್ಯ ಬಹಳ ಇರುವಾಗ ಅದರ ನೇತೃತ್ವದಲ್ಲಿರುವ ಸ್ವತಃ ಕಾಂಗ್ರೆಸ್ ಪಕ್ಷದ ಏಳು ಎಂಪಿಗಳು, ತೆಲಂಗಾಣ ಪ್ರದೇಶದ ಸದಸ್ಯರು ರಾಜೀನಾಮೆಯ ಬೆದರಿಕೆ ಹಾಕಿದ್ದಾರೆ. ಇದಕ್ಕೆ ತಕ್ಷಣದ ಕಾರಣ ಯುಪಿಎ-2 ಗೃಹಮಂತ್ರಿಗಳು ತೆಲಂಗಾಣ ರಾಜ್ಯ ರಚನೆ ಕುರಿತು ಕೊಟ್ಟಿದ್ದ ಜನವರಿ 28ರ ಗಡುವು ಮುಗಿದರೂ ಏನೂ ಆಗಿಲ್ಲದಿರುವುದು, ಬದಲಿಗೆ ಗೃಹಮಂತ್ರಿಗಳು ಮಾತುಕತೆಗಳಿಗೆ ಇನ್ನಷ್ಟು ಸಮಯ ಬೇಕು ಎಂದಿರುವುದು. ಒಂದು ತಿಂಗಳ ಹಿಂದೆ ಡಿಸೆಂಬರ್ 28ರಂದು ಸರ್ವಪಕ್ಷ ಸಭೆಯ ನಂತರ ಇದೇ ಗೃಹಮಂತ್ರಿಗಳು ಎರಡು ಭರವಸೆಗಳನ್ನು ನೀಡಿದ್ದರು-ಮೊದಲನೆಯದು, ಒಂದು ತಿಂಗಳ ಒಳಗೆ ನಿರ್ಧಾರ ಕೈಗೊಳ್ಳಲಾಗುವುದು, ಎರಡನೆಯದಾಗಿ, ಈ ಪ್ರಶ್ನೆಯ ಮೇಲೆ ಇನ್ನು ಮುಂದೆ ಸರ್ವಪಕ್ಷ ಸಭೆ ನಡೆಯುವುದಿಲ್ಲ. ಆದರೆ ಈಗ ನಿರ್ಧಾರವೂ ಇಲ್ಲ, ಸಾಲದ್ದಕ್ಕೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಇನ್ನಷ್ಟು ಸಮಾಲೋಚನೆಗಳು ನಡೆಸುವ ಇಂಗಿತವನ್ನೂ ಯುಪಿಎ-2 ಗೃಹಮಂತ್ರಿಗಳು ವ್ಯಕ್ತ ಪಡಿಸಿದ್ದಾರೆ.

ಯುಪಿಎ-2 ಸರಕಾರದ ಈಗಿನ ಗೃಹಮಂತ್ರಿಗಳ ಭರವಸೆ ಬಂದದ್ದು ಅದೇ ಸರಕಾರದ ಹಿಂದಿನ ಗೃಹಮಂತ್ರಿಗಳ ಇದಕ್ಕಿಂತಲೂ ಹೆಚ್ಚಿನ ಭರವಸೆಯ ಹೇಳಿಕೆಯ ಮೂರು ವರ್ಷಗಳ ನಂತರ. ಸರಿಯಾಗಿ ಮೂರು ವರ್ಷಗಳ ಹಿಂದೆ ಡಿಸೆಂಬರ್ 9, 2009ರ ಮಧ್ಯರಾತ್ರಿಯಲ್ಲಿ "ತೆಲಂಗಾಣ ರಾಜ್ಯದ ರಚನೆಯ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ" ಎಂದು ಅವರು ನೀಡಿದ ಹೇಳಿಕೆ ಈ ಸಮಸ್ಯೆಯ ಪ್ರಸಕ್ತ ಘಟ್ಟವನ್ನು ಆರಂಭಿಸಿತ್ತು. ಈ ಹೇಳಿಕೆ ಬಂದದ್ದೂ ಆಂಧ್ರಪ್ರದೇಶದ ಆಗಿನ ಕಾಂಗ್ರೆಸ್ ಮುಖ್ಯಮಂತ್ರಿ ಅಪಘಾತದಲ್ಲಿ ಮರಣ ಹೊಂದಿದ್ದರಿಂದ ಉಂಟಾದ ಸಂದೇಹದ, ಅಸ್ಥಿರತೆಯ ಸಂದರ್ಭದಲ್ಲಿ.

ಆದರೆ ಇತರ ವಿಷಯಗಳಂತೆ ಇದರಲ್ಲೂ ಕಾಂಗ್ರೆಸ್ ಪಕ್ಷದ ಸಮಯಸಾಧಕ ನಿಲುವಿನ ಆರಂಭ ಇನ್ನೂ ಹಿಂದಕ್ಕೆ ಹೋಗುತ್ತದೆ-1999ರಲ್ಲಿ ಅದು ಆಂಧ್ರಪ್ರದೇಶದಲ್ಲಿ ವಿರೋಧ ಪಕ್ಷವಾಗಿದ್ದಾಗ ತಾನೇ ಎತ್ತಿದ್ದ ಪ್ರಶ್ನೆಯಿದು. 2001 ರಲ್ಲಿ ಕೇಂದ್ರದಲ್ಲಿ ವಿರೋಧಪಕ್ಷವಾಗಿದ್ದ ಕಾಂಗ್ರೆಸ್‌ನ ಅಧ್ಯಕ್ಷೆ ಝಾರ್ಖಂಡ್, ಛತ್ತೀಸ್‌ಗಡ್ ಮತ್ತು ಉತ್ತರಾಂಚಲ ರಾಜ್ಯಗಳ ರಚನೆಯ ಸಂದರ್ಭದಲ್ಲಿ ತೆಲಂಗಾಣ ರಾಜ್ಯವನ್ನೂ ರಚಿಸಬೇಕು ಎಂದು ಆಗಿನ ಕೇಂದ್ರ ಗೃಹಮಂತ್ರಿಗಳನ್ನು ಆಗ್ರಹಿಸಿದ್ದರು ಎಂಬುದನ್ನು ಕೂಡ ಇಲ್ಲಿ ಗಮನಿಸಬೇಕು. ಮುಂದೆ ಈ ಪ್ರಶ್ನೆಯ ಮೇಲೆ ತೆಲುದು ದೇಶಂ ಪಕ್ಷವನ್ನು ತ್ಯಜಿಸಿದವರು ತೆಲಂಗಾಣ ರಾಷ್ಟ್ರ ಸಮಿತಿ(ಟಿಆರ್‌ಎಸ್) ಎಂಬ ಪಕ್ಷವನ್ನು ರಚಿಸಿಕೊಂಡು ಕಾಂಗ್ರೆಸ್‌ನ ಈ ಬೇಡಿಕೆಯನ್ನು ತಮ್ಮದಾಗಿಸಿಕೊಂಡರು. 2004ರಲ್ಲಿ ಇದೇ ರಾಜ್ಯ ರಚನೆಯ ಭರವಸೆಯ ಮೇಲೆ ಆ ಪಕ್ಷದೊಡನೆ ಮೈತ್ರಿಯ ಮೂಲಕ ಈ ಸಮಯಸಾಧಕತನ ಮುಂದುವರೆಯಿತು. ಟಿಆರ್‌ಎಸ್ ಕಾಂಗ್ರೆಸ್ ನೇತೃತ್ವದ ಸರಕಾರದ ಭಾಗವೂ ಆಯಿತು, ಎರಡು ವರ್ಷಗಳ ನಂತರ ಆ ಮೈತ್ರಿಯೂ ಮುರಿಯಿತು. ಈಗ 2009ರ ಮತ್ತೊಂದು ಸಮಯಸಾಧಕ ಹೇಳಿಕೆಯ ಫಲವನ್ನು ಅದು ಉಣ್ಣಬೇಕಾಗುತ್ತಿದೆ. ಅದರ ಸಮಯಸಾಧಕ ನಿಲುವು ತಾನೇ ನೇಮಿಸಿದ ಶ್ರೀಕೃಷ್ಣ ಸಮಿತಿಯ ಸಲಹೆಗಳ ಪ್ರಯೋಜನವನ್ನು ಕೂಡ ಪಡೆಯಲಾರದಂತಹ ಸ್ಥಿತಿಯಲ್ಲಿ ಅದನ್ನು ತಂದು ನಿಲ್ಲಿಸಿದೆ. ಆದರೆ ಇದಕ್ಕೆ ಬೆಲೆ ತೆರಬೇಕಾಗಿರುವುದು ಎಂದಿನಂತೆ ಜನಸಾಮಾನ್ಯರು-ಈ ಸಂದರ್ಭದಲ್ಲಿ ಎರಡೂ ತೆಲುಗುಭಾಷಿಕ ಪ್ರದೇಶಗಳ ಜನರು.

ಜಗದಗಲ

ಶರತ್‌ಚಂದ್ರ

ಮಾಲಿಯಲ್ಲಿ ಫ್ರೆಂಚ್ ಮಿಲಿಟರಿ ಅತಿಕ್ರಮಣ – ಇನ್ನೊಂದು ಲಿಬ್ಯಾ ?

ಪಶ್ಚಿಮ ಆಫ್ರಿಕಾದ ಆಯಕಟ್ಟಿನ ಜಾಗದಲ್ಲಿ ಇರುವ ಮಾಲಿಯ ಮೇಲೆ ಸಾಮ್ರಾಜ್ಯಶಾಹಿ ಕಣ್ಣು ಬಿದ್ದಿದೆ. ಅಲ್ಜೀರಿಯಾದ ನೈಋತ್ಯಕ್ಕೆ ಇರುವ ಮಾಲಿಗೆ ಜನವರಿ ಎರಡನೇ ವಾರದಲ್ಲಿ ಫ್ರಾನ್ಸಿನ ಎರಡುವರೆ ಸಾವಿರದಷ್ಟು ಪಡೆಗಳು ಅತಿಕ್ರಮಣ ನಡೆಸಿವೆ. ಅವರ ಘೋಷಿತ ಉದ್ದೇಶ ಮಾಲಿ ಇಸ್ಲಾಮಿಕ್ ಜೆಹಾದಿಗಳ ನಿಯಂತ್ರಣಕ್ಕೆ ಹೋಗುವುದನ್ನು ತಪ್ಪಿಸುವುದು. ಆದರೆ ಈ ಅತಿಕ್ರಮಣ ಅಫ್ಘಾನಿಸ್ತಾನದಂತಹ (ಅಂತಹುದೇ ದುರ್ಗಮ ಪ್ರದೇಶಗಳನ್ನು ಹೊಂದಿರುವ) ದೀರ್ಘ ಯುದ್ಧಕ್ಕೆ ಎಡೆ ಮಾಡಿಕೊಡಬಹುದೆಂಬ ಆತಂಕ ವ್ಯಕ್ತವಾಗಿದೆ. ಈಗಾಗಲೇ ತೀವ್ರ ಸಾವುನೋವುಗಳಾಗಿವೆ. 3.75 ಲಕ್ಷ ಜನ ಮನೆಮಾರು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಇವರಲ್ಲಿ ಒಂದುವರೆ ಲಕ್ಷ ಜನ ನೆರೆಯ ದೇಶಗಳಿಗೆ ವಲಸೆ ಹೋಗಿದ್ದಾರೆ.

ಈಗಿನ ಘಟನೆಗಳ ಮುಖ್ಯ ಹಿನ್ನೆಲೆ ಕಳೆದ ವರ್ಷ ಮಾರ್ಚ್‌ನಲ್ಲಿ ಚುನಾವಣೆಯ ಒಂದು ತಿಂಗಳ ಮೊದಲಷ್ಟೇ ಆದ ಮಿಲಿಟರಿ ಕ್ಷಿಪ್ರಕ್ರಾಂತಿಯಿಂದ ಆರಂಭವಾಗುತ್ತದೆ. ಅದಕ್ಕೆ ಪ್ರತಿರೋಧ ಒಡ್ಡಿ ಅರಝುವಾದ್ ಎಂಬ ಮಾಲಿಯ ಉತ್ತರಭಾಗದಲ್ಲಿ ಎನ್.ಎಮ್.ಎಲ್.ಎ ಎಂಬ ವಿಮೋಚನಾ ಸಂಘಟನೆ ಸ್ವಾತಂತ್ರ್ಯ ಘೋಷಿಸಿತು. ಆದರೆ ಕೆಲವೇ ತಿಂಗಳುಗಳಲ್ಲಿ ಈ ಪ್ರದೇಶಗಳ ಮೇಲೆ ಮೂರು ಜೆಹಾದಿ ಗುಂಪುಗಳು ನಿಯಂತ್ರಣ ಸಾಧಿಸಿದವು. ಇಡೀ ದೇಶದ ಮೇಲೆ ಜೆಹಾದಿ ಗುಂಪುಗಳು ನಿಯಂತ್ರಣ ಸಾಧಿಸಲು ಮಿಲಿಟರಿ ಅತಿಕ್ರಮಣ ಅಗತ್ಯವಾಯಿತು. ಮಾಲಿ ಮಾತ್ರವಲ್ಲ ಇಡೀ ಪಶ್ಚಿಮ ಆಫ್ರಿಕಾ, ಮಾತ್ರವಲ್ಲ ಯುರೋಪು ಜೆಹಾದಿ ಗುಂಪುಗಳ ನಿಯಂತ್ರಣಕ್ಕೆ ಹೋಗುವುದನ್ನು ತಪ್ಪಿಸಬೇಕಾದರೆ ಮಿಲಿಟರಿ ಅತಿಕ್ರಮಣ ಅಗತ್ಯ ಎಂಬುದು ಫ್ರಾನ್ಸಿನ 'ಸೋಶಲಿಸ್ಟ್' ಅಧ್ಯಕ್ಷ ಹಾಲಂಡರ ಅಂಬೋಣ. ಆದರೆ ನಿಜಸಂಗತಿ ಬೇರೆಯೇ.

ಪಶ್ಚಿಮ ಆಫ್ರಿಕಾದಲ್ಲಿ ಆಯಕಟ್ಟಿನ ಜಾಗದಲ್ಲಿ ಇರುವ ಮಾಲಿ ಮತ್ತು ಇತರ ನೆರೆಯ ದೇಶಗಳಲ್ಲಿ ಹೆಚ್ಚಿನವು ಫ್ರಾನ್ಸಿನ ಮಾಜಿ ವಸಾಹತುಗಳು. ಚಿನ್ನ, ಬಾಕ್ಸೈಟ್, ಯುರೇನಿಯಂ, ಕಬ್ಬಿಣ, ಟಿನ್,



ಮ್ಯಾಂಗನೀಸ್, ತಾಮ್ರ ಮುಂತಾದ ಖನಿಜಗಳು ವಿಫುಲವಾಗಿವೆ ಮಾಲಿಯಲ್ಲಿ. ಉತ್ತರ ಭಾಗದಲ್ಲಿ ತೈಲ ನಿಕ್ಷೇಪಗಳೂ ಇವೆ ಎಂದಿವೆ ಇತ್ತೀಚಿನ ಅಧ್ಯಯನಗಳು. ಚೀನಾ ಈ ಪ್ರದೇಶದ ದೇಶಗಳ ಜತೆ ಆರ್ಥಿಕ ಸಹಕಾರ ಸ್ಥಾಪಿಸುತ್ತಿರುವುದು ಇವರಿಗೆ ನುಂಗಲಾರದ ತುತ್ತಾಗಿದೆ. ಆದ್ದರಿಂದ ಅಮೆರಿಕ ಮತ್ತು ಯುರೋಪಿಯನ್ ಕೂಟ ಎರಡಕ್ಕೂ ಮಾಲಿಯ ಮೇಲೆ ನಿಯಂತ್ರಣ ಮುಖ್ಯ. ಮಾಜಿ ವಸಾಹತು ಯಜಮಾನ ಆಗಿ ಈ ಪ್ರದೇಶದಲ್ಲಿ ಫ್ರಾನ್ಸಿಗೆ ವಿಶೇಷ ಆಸಕ್ತಿ ಇದ್ದೇ ಇದೆ. ಅಮೆರಿಕಕ್ಕೂ 2008ರಲ್ಲಿ ಸ್ಥಾಪಿಸಲಾದ ಆಫ್ರಿಕಾಮ್ ಮಿಲಿಟರಿ ವ್ಯೂಹದ ಯೋಜನೆಯಲ್ಲಿ ಮಾಲಿಗೆ ವಿಶೇಷ ಸ್ಥಾನ ಇದೆ. 2001ರಿಂದ ಮಾಲಿಗೆ ಮಿಲಿಟರಿ ತರಬೇತಿ ನೀಡುವ ಕಾರ್ಯಕ್ರಮದಲ್ಲೂ ಅಮೆರಿಕದ ಮಿಲಿಟರಿ ಭಾಗವಹಿಸುತ್ತಿದೆ. ಕ್ಷಿಪ್ರಕ್ರಾಂತಿ ನಡೆಸಿದ ಮಿಲಿಟರಿ ನಾಯಕ ಅಮೆರಿಕನ್ ತರಬೇತಿ ಪಡೆದವ ಮತ್ತು ಆಫ್ರಿಕಾಮ್ ಜತೆ ಸಂಬಂಧ ಹೊಂದಿದ್ದವನೇ. ಇದರ ಜತೆಗೆ ಈ ಪ್ರದೇಶದಲ್ಲಿ 'ಪ್ರಜಾಪ್ರಭುತ್ವ' ಸ್ಥಾಪಿಸಲೂ ಅಮೆರಿಕನ್ ಕಾರ್ಯಕ್ರಮ ನಡೆಸುತ್ತಿದೆ! ಈಗಿನ ಬಿಕ್ಕಟ್ಟನ್ನು ಬಳಸಿ ಲಿಬ್ಯಾ ರೀತಿಯಲ್ಲಿ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸಿ ಎಲ್ಲಾ ಪ್ರಾಕೃತಿಕ ಸಂಪತ್ತನ್ನು ಬಳಸುವುದು ಈ ಅತಿಕ್ರಮಣದ ಹಿಂದಿರುವ ನಿಜವಾದ ಉದ್ದೇಶ. ಜೆಹಾದಿ ಗುಂಪುಗಳ ಸವಾಲಿನ ಆತಂಕ ಪ್ರಚಾರ ಮತ್ತು ಅತಿಕ್ರಮಣಕ್ಕೆ ಜನಬೆಂಬಲ ಗಳಿಸಲು ಮಾತ್ರ.

ಮಾಲಿಯ ಆಂತರಿಕ ಪರಿಸ್ಥಿತಿ ಜೆಹಾದಿ ಗುಂಪುಗಳ ಬೆಳವಣಿಗೆಗೆ ಸಹಕಾರಿಯಾಯಿತು. 2008ರಿಂದ ಜಗತ್ತನ್ನು ಕಾಡುತ್ತಿರುವ ಆರ್ಥಿಕ ಬಿಕ್ಕಟ್ಟು ಗಣಿ ಕ್ಷೇತ್ರ ಬಿಟ್ಟು ಎಲ್ಲಾ ಕ್ಷೇತ್ರಗಳನ್ನೂ ತೀವ್ರವಾಗಿ ಬಾಧಿಸಿದೆ. ಇದ್ದ ಬದ್ದ ಉದ್ಯೋಗಗಳೂ ಮಾಯವಾಗಿವೆ. ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಮತ್ತು ಏರುತ್ತಿರುವ ಆಹಾರ ಬೆಳೆಗಳು ತೀವ್ರ ಅತೃಪ್ತಿಯನ್ನು ಉಂಟು ಮಾಡಿವೆ. ಈ ಅತೃಪ್ತಿ ತೀವ್ರ ಪ್ರತಿಭಟನೆ ಪ್ರಗತಿಪರ ಶಕ್ತಿಗಳ ರಾಜಕೀಯವನ್ನು ಮುನ್ನೆಲೆಗೆ ತರಲಾರಂಭಿಸಿತ್ತು. ಈ ಅತೃಪ್ತಿಯನ್ನು ಬಳಸಿಕೊಂಡು ಜೆಹಾದಿ ಗುಂಪುಗಳೂ ಬೆಳೆದಿವೆ. ಲಿಬ್ಯಾದಲ್ಲಿ ಗದ್ದಾಫಿ ಸರ್ಕಾರ ಉರುಳಿಸಲು ಅಮೆರಿಕ ಮತ್ತು ಯುರೋಪಿಯನ್ ಕೂಟ ಗದ್ದಾಫಿ–ವಿರೋಧಿ ಗೆರಿಲ್ಲಾ ಗುಂಪುಗಳಿಗೆ ದಂಡಿಯಾಗಿ ಹಂಚಿದ ಶಸ್ತ್ರಾಸ್ತ್ರಗಳ ದೊಡ್ಡ ಭಾಗ ಜೆಹಾದಿ ಗುಂಪುಗಳಿ ಸಿಕ್ಕಿದೆ. ಈ ರೀತಿ ಜೆಹಾದಿ ಗುಂಪು ಬೆಳವಣಿಗೆಗೆ ಅಮೆರಿಕ ಮತ್ತು ಯುರೋಪಿಯ ಕೂಟವೇ ಕಾರಣ. ನೆರೆಯ ಸೆನೆಗಲ್ ನ ಅವರಿಗೆ ಅನುಕೂಲವಾಗಿಲ್ಲದ ಎಡ ನಡುಪಂಥೀಯ ಅಧ್ಯಕ್ಷನ ಚುನಾವಣೆ, ಅದ ಮಾಜಿ ವಸಾಹತುಗಳಿರುವ ಈ ಪ್ರದೇಶದ ಹಿಡಿತ ಕಳೆದುಕೊಳ್ಳುತ್ತಿರುವುದು ಫ್ರಾನ್ಸ ಅತಿಕ್ರಮಣಕ್ಕೆ ಕಾರಣ ಎನ್ನಲಾಗಿದೆ.

ಈ ಅತಿಕ್ರಮಣದ ಪರಿಣಾಮ ಮಾಲಿ ಮೇ ಮಾತ್ರವಲ್ಲ. ಈ ಇಡೀ ಸಹೆಲ್–ಸಹಾರ ಪ್ರದೇಶದ ಮೇಲೆ ಆಗಲಿದೆ. ಈಗಾಗಲೇ ಫ್ರಾ ಅತಿಕ್ರಮಣ ಮುಂದೆ ಮಾಡಿ ಅಲ್ಜೀರಿಯಾದ ಒಂದು ಜೆಹಾದಿ ಗುಂಪು ಗ್ಯಾಸ್ ಸ್ಥಾವರ ವಿದೇಶೀ ಕಾರ್ಮಿಕರ ಬಸ್ಸಿನ ಮೇಲೆ ದಾ ಮಾಡಿತು. ಆ ದಾಳಿಯನ್ನು ಭದ್ರತಾ ಪ ಹಿಮ್ಮೆಟ್ಟಿಸಿದಾಗ ಗ್ಯಾಸ್ ಸ್ಥಾವರವನ್ನ ವಶಪಡಿಸಿಕೊಂಡು ಹಲವು ಸ್ಥಳೀಯ ಮ ವಿದೇಶೀ ಕಾರ್ಮಿಕರನ್ನು ಒತ್ತೆಯಾಳು ಇರಿಸಿಕೊಂಡಿತು. ಅಲ್ಜೀರಿಯಾ ಸರ್ಕಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡ ಮಿಲಿಟರಿ ಕಾರ್ಯಾಚರಣೆ ನಡೆಸಿದಾಗ 2 ಜನ ಸತ್ತಿದ್ದಾರೆ. 40ರಲ್ಲಿ 32 ಜೆಹಾದಿಗಳ ಸತ್ತಿದ್ದಾರೆ. ಒಂದು ಹಂತದಲ್ಲಿ ಈ ಜೆಹಾ ಗುಂಪು 600 ಅಲ್ಜೀರಿಯನ್ ಮತ್ತು ವಿದೇಶೀ ಕಾರ್ಮಿಕರನ್ನು ಒತ್ತೆಯಾಳುಗಳನ್ನಾ ಇಟ್ಟುಕೊಂಡಿತು. ಈ ಭಯೋತ್ಪಾದಕ ಕೃ ಫ್ರೆಂಚ್ ಅತಿಕ್ರಮಣದ ನೇರ ಫಲ. ಇಂತ ಭಯೋತ್ಪಾದಕ ಕೃತ್ಯಗಳು ಹೆಚ್ಚಲಿ ಕಡಿಮೆಯಾಗುವುದಿಲ್ಲ. ಆದ್ದರಿಂದ ಜೆಹಾ ಗುಂಪುಗಳನ್ನು ಮಟ್ಟ ಹಾಕಲು ಈ ಅತಿಕ್ರಮ ಎಂಬ ಫ್ರೆಂಚ್ ಅಧ್ಯಕ್ಷರ ಹೇಳಿಕೆ, ಬುಶ್, ಒಬಾಮರ ಹೇಳಿಕೆಗಳಷ್ಟೇ ಬೊಗಳೆ

ಚೀನಾದಲ್ಲಿ ಕಾರ್ಮಿಕ ಹೋರಾಟದ ಅಲೆ....

ಪುಟ 16 ರಿಂದ

ಬೇಕಾಯಿತು. ಮಾರ್ಚ್ 8 ರಂದು ಮುಷ್ಕರ ಕೊನೆಗೊಂಡಿತು.

ಸುಮಾರು ಒಂದು ಶತಮಾನದ ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ವಿರುದ್ಧ ಚೀನೀ ಜನತೆ ಪಡೆದ ಮೊದಲ ವಿಜಯವಾಗಿತ್ತು ಕಾರ್ಮಿಕರ ಈ ಅದ್ಭುತ ಸಂಘರ್ಷ. ಈ ಹೋರಾಟ ಚೀನಾದ ಕಾರ್ಮಿಕ ವರ್ಗಕ್ಕೆ ತನ್ನ ಸ್ವಂತ ಬಲದಲ್ಲಿ ನಂಬಿಕೆಯನ್ನು ಮೂಡಿಸಿತು. ಸ್ಫೂರ್ತಿಯ ಸೆಲೆಯಾಯಿತು. ಚೀನಾದಲ್ಲಿ ಕಾರ್ಮಿಕ ಮುಷ್ಕರಗಳ ಅಲೆಯೇ ಮೇಲೆದ್ದಿತು. ಚೀನಾದಲ್ಲಿ ಕಾರ್ಮಿಕ ವರ್ಗವೇ ಸಾಮ್ರಾಜ್ಯಶಾಹಿಗಳ ವಿರುದ್ಧ ನಿರ್ಣಾಯಕ ಹೋರಾಟ ಮಾಡುವ ಸಾಮರ್ಥ್ಯ ಇರುವ ಶಕ್ತಿ ಎಂದು ಸಾಬೀತಾಯಿತು. ಈ ಹೋರಾಟಗಳಿಗೆ ನಾಯಕತ್ವ ನೀಡಲು ಚೀನೀ ಕಮ್ಯುನಿಸ್ಟ್ ಪಕ್ಷ ಮೊದಲ ಬಾರಿಗೆ ಅಖಿಲ ಚೀನಾ ಕಾರ್ಮಿಕ ಮಹಾಧಿವೇಶನವನ್ನು ಸಂಘಟಿಸಲು ಕರೆ ನೀಡಿತು.

ಅಖಿಲ ಚೀನಾ ಕಾರ್ಮಿಕರ ಮೊದಲ ಮಹಾಧಿವೇಶನ ಮತ್ತು ಒಕ್ಕೂಟದ ಸ್ಥಾಪನೆ

ಚೀನಾದ ಮೊದಲ ಕಾರ್ಮಿಕ ಹೋರಾಟದ ಯಶಸ್ಸು ಅನೇಕ ಕಡೆಗಳಲ್ಲಿ ಕಾರ್ಮಿಕ ಸಂಘಗಳ ಸ್ಥಾಪನೆಗೆ, ಹೋರಾಟಗಳಿಗೆ ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಚೀನಾದ ಮೂರನೇ ಅತಿ ದೊಡ್ಡ ನಗರ, ಮಾವೋರವರ ಹುನಾನ್ ರಾಜ್ಯದ ಬಳಿಯ ಕ್ಯಾಂಟನ್ (ಈಗಿನ ಗಾಂಗ್‌ಜೌ ನಗರ) ದಲ್ಲಿ 12 ನಗರಗಳ ನೂರು ಕಾರ್ಮಿಕ ಸಂಘಗಳ 162 ಪ್ರತಿನಿಧಿಗಳು ಮಹಾಧಿವೇಶನ ದಲ್ಲಿ ಪಾಲ್ಗೊಂಡರು. ಈ ಸಮ್ಮೇಳನದಲ್ಲಿ ಕಾರ್ಮಿಕ ವರ್ಗ 'ಸಾಮ್ರಾಜ್ಯಶಾಹಿ ನಿರ್ಮೂಲನವಾಗಲಿ, ಯುದ್ಧಕೋರ ಪಾಳೆಯಗಾರೀ ಪ್ರಭುತ್ವ ನಾಶವಾಗಲಿ' ಎಂಬ ಘೋಷಣೆಯನ್ನು ತನ್ನ ಮೂಲ ಧ್ಯೇಯವಾಗಿ ಸ್ವೀಕರಿಸಿತು. ಪ್ರಜಾಪ್ರಭುತ್ವಕ್ಕಾಗಿ ನಡೆಯುತ್ತಿದ್ದ ಹೋರಾಟದಲ್ಲಿ ಕಾರ್ಮಿಕವರ್ಗದ ಪಾತ್ರ, ಅವರ ನಡುವೆ ಸಮಾಜವಾದಿ ಅರಿವನ್ನು ಮೂಡಿಸಲು ಮಾಡಬೇಕಾದ ಪ್ರಯತ್ನಗಳು, ಅಖಿಲ ಚೀನಾ ಕಾರ್ಮಿಕ ಒಕ್ಕೂಟದ ರಚನೆ ಇವುಗಳ ಬ ವಿವರವಾದ ಚರ್ಚೆಯಾಯಿತು. ಎಂಟು ಗಂ ಕಾಲ ಕೆಲಸ, ಕಾರ್ಮಿಕ ಹೋರಾಟಗಳಿ ಸೌಹಾರ್ದ ಬೆಂಬಲ ಮುಷ್ಕರಗಳು, ಇವುಗಳಿ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಕಮ್ಯುನಿಸ್ಟರು, ಸನ್ ಯಾತ ಸೆನ್‌ರವರ ಕೋಮಿಂಟಾಂಗ್ ಪಕ್ಷ ಅನುಯಾಯಿಗಳು, ಅರಾಜಕತಾವಾದಿಗಳು ಯಾವ ರಾಜಕೀಯ ಚಿಂತನೆಗೂ ಸೇರದವ ಈ ಎಲ್ಲರೂ ಭಾಗವಹಿಸಿದ್ದ ಮಹಾಧಿವೇಶನದಲ್ಲಿ ಚೀನೀ ಕಮ್ಯುನಿಸ್ಟ್ ಪಕ್ಷ ಕಾರ್ಮಿಕ ಚಳುವಳಿಯ ನಾಯಕ ಅಂಗೀಕರಿಸಿದರು.

'ವಿಶ್ವರೂಪಂ' ವಿರುದ್ಧ ವೃಥಾ ಅಸಹನೆ

...6 ರಿಂದ

...ವರುದ್ದು ಈ ಚಿತ್ರದಲ್ಲಿ "ಮುಸ್ಲಿಂ ಪಾತ್ರ". ...ಲ್ ಭಯೋತ್ಪಾದಕರೊಂದಿಗೆ ಫೈಟಿಂಗ್‌ಗೆ ...ಯುವ ಒಂದು ದೃಶ್ಯದಲ್ಲಿ ಕುರ್‌ಆನ್‌ನ ...ದು ವಾಕ್ಯವನ್ನು ಪಠಿಸಿಯೇ ...ರಾಟಕ್ಕಿಳಿಯುತ್ತಾರೆ. ಇದು ಪ್ರೇಕ್ಷಕನ ಶಿಳ್ಳೆ ...ಸುತ್ತದೆ. ಅದೇ ರೀತಿ ಕ್ಲೈಮಾಕ್ಸ್ ದೃಶ್ಯದಲ್ಲಿ ...ಯೋತ್ಪಾದಕರ ಶಿಬಿರದ ಮೇಲೆ ಧಾಳಿ ...ಸುವ ಸನ್ನಿವೇಶಗಳಲ್ಲಿಯೂ ಮಧ್ಯೆ ಕಮಲ್ ...ಮಾಜ್ ಮಾಡುವ ದೃಶ್ಯಗಳು ಚಿತ್ರದಲ್ಲಿವೆ. ...ರೀತಿ ಇಸ್ಲಾಂ ಧರ್ಮದ ಬಗ್ಗೆ ಇರುವ ...ರಾತ್ಮಕ ದೃಶ್ಯಗಳ ಬಗ್ಗೆ ಇಸ್ಲಾಂ ಧರ್ಮದ ...ತಿಗೆದಾರರು ಏನಂತಾರೋ?

ಅಷ್ಟಲ್ಲದೆ ಅಲ್‌ಖೈದಾ, ತಾಲಿಬಾನ್‌ಗಳ ...ಅವರ 'ಧರ್ಮ ಯುದ್ಧ'ದ ಅಮಲು, ...ದು ಅಫ್ಘಾನಿಸ್ತಾನದ ಮಹಿಳೆ, ಮಕ್ಕಳು ...ಗರೀಕರ ಮೇಲೆ ಬೀರಿರುವ ಪರಿಣಾಮ, ...ವರ ದಾರಣ ಬದುಕು, ಅಮೇರಿಕಾ ...ಯೋತ್ಪಾದಕರನ್ನು ಮಟ್ಟ ಹಾಕುವ ನೆಪದಲ್ಲಿ ...ಘ್ಘಾನಿಗಳ ವಾಸ ಪ್ರದೇಶಗಳ ಮೇಲೆ ನಿಷ್ಕರುಣೆಯಿಂದ ನಡೆಸುವ ದಾಳಿ, ಆ ದಾಳಿಗೆ ಬಲಿಯಾಗುವ ಮಕ್ಕಳು, ಮಹಿಳೆಯರು, ನಾಗರೀಕರ ಅಸಹಾಯಕ ಪರಿಸ್ಥಿತಿಯನ್ನು ಚಿತ್ರಕಟ್ಟಿ ಕೊಡುವ ಪ್ರಯತ್ನ ಮಾಡುತ್ತದೆ.

ಕಮಲ್‌ಹಾಸನ್ ಕೆಲ ಸಂಘಟನೆಗಳು ಆರೋಪಿಸಿದಂತೆ ಎಲ್ಲೂ ಮುಸ್ಲಿಮರೆಲ್ಲರೂ ಭಯೋತ್ಪಾದಕರು, ಅಥವಾ ಭಯೋತ್ಪಾದಕರೆಲ್ಲರೂ ಮುಸ್ಲಿಮರು ಅಂತ ನಿರೂಪಿಸಲು ಪ್ರಯತ್ನಿಸಿಲ್ಲ. ತನ್ನ ಚಿತ್ರದ ಕಥೆಗೆ ಅನಿವಾರ್ಯವಾದ ದೃಶ್ಯಗಳನ್ನು ಜೋಡಿಸಿದ್ದಾರೆ. ಅಷ್ಟೇ ತಾಲಿಬಾನ್‌ಗಳನ್ನು ಅಲ್‌ಖೈದಾ ಉಗ್ರರನ್ನು ಇನ್ಯಾವ ರೀತಿ ತೋರಿಸಲು ಸಾಧ್ಯ. ಇಷ್ಟಕ್ಕೂ ಇಸ್ಲಾಂಗೆ ಅವಮಾನವಾಗುತ್ತಿರುವುದು ಇಂತಹ ಚಿತ್ರಗಳಿಂದಲ್ಲ. ಶಾಂತಿದೂತ ಮುಹಮ್ಮದ್ ಪೈಗಂಬರರ ದಾರಿಯನ್ನು ಬಿಟ್ಟು ಅನಾಗರಿಕ ಹಿಂಸೆಯ ದಾರಿಯನ್ನು ತಾಲಿಬಾನ್, ಅಲ್‌ಖೈದಾದಂತಹ ಸಂಘಟನೆಗಳು ಹಿಡಿದಿರುವುದರಿಂದ ಎಂಬುದನ್ನು ಮುಸ್ಲಿಂ ಸಂಘಟನೆಗಳು ಅರಿತುಕೊಳ್ಳಬೇಕಿದೆ.

ವಿಶ್ವರೂಪಂ ಸಿನೆಮಾದ ವಿರುದ್ಧ ಹೋರಾಟಕ್ಕಿಳಿದಿರುವ ಕೆಲ ಮುಸ್ಲಿಂ ಸಂಘಟನೆಗಳಿಗೆ ನಿಜಕ್ಕೂ ಇಸ್ಲಾಂ ಮತ್ತು ಮುಸ್ಲಿಮರ ಬಗ್ಗೆ ಕಾಳಜಿ ಇದ್ದರೆ, ಇಸ್ಲಾಂ ಧರ್ಮಕ್ಕೆ ಅವಮಾನವಾಗಬಾರದು ಎಂಬ ಕಾಳಜಿ ಇದ್ದರೆ ತಾಲಿಬಾನ್, ಅಲ್‌ಖೈದಾದಂತಹ ಸಂಘಟನೆಗಳ ವಿವೇಚನೆ ಇಲ್ಲದ ಹಿಂಸಾ ವಿಧಾನದ ಧರ್ಮ ಯುದ್ಧದ ವಿರುದ್ಧ ಬೀದಿಗಿಳಿಯಬೇಕಿದೆ. ಇಷ್ಟಕ್ಕೂ ಶಾಂತಿ ದೂತ ಪೈಗಂಬರರ ಇಸ್ಲಾಂಗೂ ತಾಲಿಬಾನ್, ಲಾಡೆನ್ ಸಂತತಿಗಳಿಗೂ ಏನು ಸಂಬಂಧ, ಪ್ರವಾದಿಯ ಕಾಲದಲ್ಲಿ ಎಂದಾದರೂ ಅವರು ತನ್ನನ್ನು ಅವಮಾನಿಸಿದವರ ವಿರುದ್ಧ ಹಿಂಸೆಗಿಳಿದ, ಕ್ಷಮೆಯ ಬದಲಿಗೆ ಶಿಕ್ಷಿಸಿದ ಉದಾಹರಣೆಯನ್ನು ದೊಣ್ಣೆ ನಾಯಕರಿಗೆ ನೀಡಲು ಸಾಧ್ಯವೇ.

ಇಷ್ಟಕ್ಕೂ ಇಂತಹ ಸಂಘಟನೆಗಳ ವಿಶ್ವರೂಪಂ ವಿರುದ್ಧದ ಪ್ರತಿಭಟನೆ ಬಲಪಂಥೀಯ ಹಿಂದುತ್ವವಾದಿಗಳನ್ನಷ್ಟೇ ಬಲಪಡಿಸುತ್ತದೆ. ಅವರು ಈಗಾಗಲೇ ವಿಶ್ವರೂಪಂನ ವಿವಾದವನ್ನು ಹಿಡಿದು ಭಾರತೀಯ ಮುಸ್ಲಿಮರ ವಿರುದ್ಧ ರಂಗಕ್ಕಿಳಿದಿದ್ದಾರೆ. ಇದು ಇವರಿಗೆ ಅರ್ಥವಾಗುತ್ತದೆಯೇ? ಪ್ರಜ್ಞಾವಂತ ಮುಸ್ಲಿಂ ಯುವಜನರು ಇಂತಹ ಸಂದರ್ಭದಲ್ಲಿ ಸುಮ್ಮನಿರಬಾರದು. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಇಂತಹ ವಿವೇಚನಾರಹಿತ ನಡವಳಿಕೆಗಳನ್ನು ತೀವ್ರವಾಗಿ ವಿರೋಧಿಸಬೇಕು.

●

ಸೂಚನೆ

ಚಂದಾದಾರರು, ಏಜೆನ್ಸಿದಾರರಿಗೆ, ಜನಶಕ್ತಿಯ ಪ್ರಸಾರ, ಚಂದಾ, ಏಜೆನ್ಸಿಗಳಿಗೆ ಸಂಬಂಧಿಸಿದ ವ್ಯವಹಾರ, ವಿಚಾರಣೆ, ದೂರುಗಳು ಇತ್ಯಾದಿ ಇನ್ನೂ ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡತಕ್ಕದ್ದು.

ವಿಳಾಸ :
40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 9483966467

...ಭಯೋತ್ಪಾದನೆಯ ಈ ಪಿಡುಗು

...ಟ 7 ರಿಂದ

...ಸಂಘಟನೆಗಳ ಶಾಮೀಲನ್ನು ಗಮನಿಸಿವೆ– ...003ರಲ್ಲಿ ಮಹಾರಾಷ್ಟ್ರದ ಪರ್ಭಾನಿ, ಜಾಲ್ನ ...ತ್ತು ಜಲ್‌ಗಾಂವ್ ಜಿಲ್ಲೆಗಳಲ್ಲಿ; 2005ರಲ್ಲಿ ...ತ್ತರ ಪ್ರದೇಶದ ಮಾವು ಜಿಲ್ಲೆಯಲ್ಲಿ; 2006ರಲ್ಲಿ ...ನಾಂದೇಡ್‌ನಲ್ಲಿ; ಜನವರಿ 2008ರಲ್ಲಿ ...ರುನಲ್ವೇಲಿಯ ತೆಂಕಾಸಿಯ ಆರೆಸ್ಸೆಸ್ ...ಯಲ್ಲಿ; ಆಗಸ್ಟ್ 2008ರಲ್ಲಿ ಕಾನ್ಪುರದಲ್ಲಿ ...ತ್ಯಾದಿ,ಇತ್ಯಾದಿ."

ಇವನ್ನೆಲ್ಲ ಉಪೇಕ್ಷಿಸಿ, ಈಗ ಬಿಜೆಪಿ ...ಹಮಂತ್ರಿಗಳನ್ನು ತೆಗೆದು ಹಾಕಬೇಕು ಎಂದು ...ಗ್ರಹಿದೆ. "ಸಮಝೌತದ ಬಾಂಬ್ ಸ್ಫೋಟಗಳ ...ಂದೆ ಭಯೋತ್ಪಾದಕರಿದ್ದರೆ, ಸರಕಾರ ಅವರ ...ರುದ್ಧ ಕ್ರಮ ಕೈಗೊಳ್ಳಬಹುದು. ಸಂಘ ...ರಿವಾರದ ಕೆಲವು ಮಾಜಿ ಸ್ವಯಂಸೇವಕರು ...ಮೀಲಾಗಿದ್ದರೆ ದಯವಿಟ್ಟು ಅವರ ವಿರುದ್ಧ ...ಮ ಕೈಗೊಳ್ಳಿ, ಆದರೆ ನೀವು ಒಂದು ...ಷ್ಟ್ರೀಯವಾದಿ ಸಂಘಟನೆಯ ಪ್ರತಿಷ್ಠೆಗೆ ಮಸಿ ...ಳಿಯಲು ಸಾಧ್ಯವಿಲ್ಲ..." ಎಂದು ಅದರ ...ಕ್ತಾರರು ಹೇಳಿದ್ದಾರೆ.

...ಡ್ಸೆ, ಅದಕ್ಕೂ ಮೊದಲೇ..

ಹೀಗೆ ಮತ್ತೆ ಅವರು ಇಂತಹ ...ತ್ಪಾದಕ ಕ್ರಿಯೆಗಳು ಕೆಲವು 'ದಾರಿತಪ್ಪಿದ ...ಂಬಿಗಳ' ಕ್ರಿಯೆಗಳ ಫಲಿತಾಂಶವಾಗಿರ ...ಹುದು, ಇದಕ್ಕಾಗಿ ಇಡೀ ಸಂಘಟನೆಯನ್ನು ದೂರಲೇ ಬೇಕು ಎಂದು ಹೇಳಲಾಗದು ಎಂದು ಸಾರುತ್ತಿದ್ದಾರೆ. ಇಂತಹ ವಿವರಣೆಗಳು ಕೂಡ ಹೊಸದೇನಲ್ಲ. ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ನಾಥುರಾಂ ಗೋಡ್ಸೆಯ ಬಗ್ಗೆಯೂ ಹೀಗೇ ಹೇಳಲಾಗಿತ್ತು. ಆದರೆ ನಂತರ, ಆತನ ಸೋದರ ತಮ್ಮ ಕುಟುಂಬದ ಎಲ್ಲ ಸೋದರೂ ಆರೆಸ್ಸೆಸ್‌ನ ಸಕ್ರಿಯ ಸದಸ್ಯರಾಗಿದ್ದರು ಎಂದು ಒಂದು ಮಾಧ್ಯಮ ಸಂದರ್ಶನದಲ್ಲಿ ಹೇಳಿರುವ ದಾಖಲೆಯಿದೆ. "..... ಸಂಘದ ಆಕ್ಷೇಪಾರ್ಹ ಮತ್ತು ಹಾನಿಕಾರಕ ಚಟುವಟಿಕೆಗಳು ನಿಲ್ಲದೆ ಸಾಗಿವೆ, ಮತ್ತು ಸಂಘದ ಚಟುವಟಿಕೆಗಳು ಪ್ರಾಯೋಜಿಸುವ ಮತ್ತು ಅದರಿಂದ ಸ್ಫೂರ್ತಿ ಪಡೆದ ಹಿಂಸಾಚಾರದ ಪಂಥ ಹಲವು ಬಲಿಗಳನ್ನು ಪಡೆದಿದೆ. ಇತ್ತೀಚಿನ ಮತ್ತು ಅತ್ಯಮೂಲ್ಯ ಬಲಿಯೆಂದರೆ ಗಾಂಧೀಜಿಯವರದ್ದೇ"–ಇದು ಸ್ವತಃ ಸ್ವತಂತ್ರ ಭಾರತದ ಮೊದಲ ಕೇಂದ್ರ ಗೃಹಮಂತ್ರಿ ಸರ್ದಾರ್ ಪಟೇಲ್‌ರವರ ಒಕ್ಕಣಿಕೆ, ಆರೆಸ್ಸೆಸ್ ಮೇಲೆ ನಿಷೇಧವನ್ನು ಪ್ರಕಟಿಸುವ ಫೆಬ್ರುವರಿ 4, 1948ರ ಸರಕಾರೀ ಪ್ರಕಟಣೆಯಲ್ಲಿ.

ಆರೆಸ್ಸೆಸ್‌ನ ಇತಿಹಾಸ ಮತ್ತು ಅದರ ಕಾರ್ಯ ನಿರ್ವಹಣೆಯ ವಿಧಾನ ಈ ರೀತಿ ಸಂಘಟನೆಯ 'ತಿರುಳು' ಬೇರೆ, 'ಅಂಚು' ಬೇರೆ ಎಂದು ಹೇಳುವ ಸಿದ್ಧಾಂತಗಳೆಲ್ಲ ಸುಳ್ಳುಗಳಷ್ಟೆ ಎಂದು ತೋರಿಸುತ್ತವೆ. ಹಿಂದುಗಳಿಗೆ ಮಿಲಿಟರಿ ತರಬೇತಿ ಕೊಡುವ ಪ್ರಶ್ನೆ ಮತ್ತು ರಾಜಕೀಯ ಅಸ್ತ್ರವಾಗಿ ಹಿಂಸೆಯ ಬಳಕೆ ಆರೆಸ್ಸೆಸ್‌ನಲ್ಲಿ ಒಂದು ದೀರ್ಘ ಇತಿಹಾಸವನ್ನೇ ಹೊಂದಿದೆ. "ಎಲ್ಲ ರಾಜಕೀಯದ ಹಿಂದೂಕರಣ ಮತ್ತು ಹಿಂದುತ್ವದ ಮಿಲಿಟರೀಕರಣ" ಎಂಬ ಘೋಷಣೆ ಕೊಟ್ಟವರು ಸಾವರ್ಕರ್, ಜಿನ್ನಾರವರಿಗಿಂತ ಪೂರ್ಣ ಎರಡು ವರ್ಷಗಳ ಮೊದಲೇ 'ಎರಡು ರಾಷ್ಟ್ರ ಸಿದ್ಧಾಂತ'(ಇಸ್ಲಾಮಿ ಮತ್ತು ಹಿಂದೂ)ವನ್ನು ಪ್ರತಿಪಾದಿಸಿದ್ದ ವ್ಯಕ್ತಿ. ಇದರಿಂದ ಸ್ಫೂರ್ತಿ ಪಡೆದ ಡಾ.ಬಿ.ಎಸ್.ಮೂಂಜೆ(ಆರೆಸ್ಸೆಸ್ ಸ್ಥಾಪಕ ಡಾ.ಹೆಗ್ಡೆವಾರ್‌ರವರ ಗುರು) ಫ್ಯಾಸಿಸ್ಟ್ ಸರ್ವಾಧಿಕಾರಿ ಮುಸೋಲಿನಿಯನ್ನು ಭೇಟಿಯಾಗಲು ಇಟಲಿ ವರೆಗೂ ಹೋಗಿದ್ದರು. ಮಾರ್ಚ್ 19, 1931ರಂದು ಈ ಭೇಟಿ ನಡೆಯಿತು. ಮಾರ್ಚ್ 20ರ ಅವರ ದಿನಚರಿ ಟಿಪ್ಪಣಿಗಳು ಇಟಾಲಿಯನ್ ಫ್ಯಾಸಿಸಂ ತನ್ನ ಯುವಜನರಿಗೆ(ಗಲಭೆಕೋರರಿಗೆ ಎಂದು ಓದಿಕೊಳ್ಳಿ) ಮಿಲಿಟರಿ ತರಬೇತಿ ನೀಡುತ್ತಿದ್ದ ವಿಧಾನದಿಂದ ಅವರು ಆಕರ್ಷಿತರಾದುದನ್ನು, ಮೆಚ್ಚುಗೆ ವ್ಯಕ್ತಪಡಿಸಿರುವುದನ್ನು ತೋರ್ಪಡಿಸಿದೆ. ಭಾರತಕ್ಕೆ ಮರಳಿದ ಡಾ. ಮೂಂಜೆ 1935ರಲ್ಲಿ ನಾಸಿಕ್‌ನಲ್ಲಿ ಸೆಂಟ್ರಲ್ ಹಿಂದೂ ಮಿಲಿಟರಿ ಎಜ್ಯುಕೇಶನ್ ಸ್ಥಾಪಿಸಿದರು. ಇದು 1937ರಲ್ಲಿ ಸ್ಥಾಪಿಸಿದ ಭೋನ್ಸಾಲ ಮಿಲಿಟರಿ ಸ್ಕೂಲ್‌ನ ಪೂರ್ವವರ್ತಿ ಸಂಸ್ಥೆ(ಈಗ ಹಿಂದುತ್ವ ಭಯೋತ್ಪಾದನೆಗೆ ತರಬೇತಿ ನೀಡುತ್ತಿರುವಂತದ್ದು). ಗೋಲ್ವಾಲ್ಕರ್ 1939ರಲ್ಲಿ ಹಿಟ್ಲರ್ ಯೆಹೂದ್ಯರನ್ನು ನಾಝೀ ಫ್ಯಾಸಿಸಂ ಅಡಿಯಲ್ಲಿ ಹತ್ತಿಕ್ಕುತ್ತಿದ್ದುದರ ಬಗ್ಗೆ ಸಂಭ್ರಮ ಪಡುತ್ತ ಇದು "ಹಿಂದುಸ್ತಾನದಲ್ಲಿರುವ ನಾವು ಕಲಿಯಬೇಕಾದ, ಪ್ರಯೋಜನ ಪಡೆಯಬೇಕಾದ ಒಂದು ಒಳ್ಳೆಯ ಪಾಠ" ಎನ್ನುತ್ತಾರೆ. ನಂತರ, ಬಾಬ್ರಿ ಮಸೀದಿ ಧ್ವಂಸ ನಡೆಸಿದಾಗ ಆಗ ಉತ್ತರ ಪ್ರದೇಶದ ಮುಖ್ಯ ಮಂತ್ರಿಯಾಗಿದ್ದಾತ(ಮಧ್ಯೆ ಬಿಜೆಪಿ ಬಿಟ್ಟು ಇತ್ತೀಚೆಗೆ ಮತ್ತೆ ಅದನ್ನು ಸೇರಿದ ವ್ಯಕ್ತಿ) ಕಂಟ್ರಾಕ್ಟರುಗಳಿಗೆ ಹಲವು ದಿನಗಳೇ ಬೇಕಾಗುತ್ತಿದ್ದ ಕೆಲಸವನ್ನು ಕರಸೇವಕರು ಕೆಲವೇ ಗಂಟೆಗಳಲ್ಲಿ ಮಾಡಿಮುಗಿಸಿದರು ಎಂದು ಹಿರಿ-ಹಿರಿ ಹಿಗ್ಗುತ್ತ ಹೇಳಿದರು.

ಭಯೋತ್ಪಾದನೆಯನ್ನು ಪ್ರಭುತ್ವದ ಧೋರಣೆಯಾಗಿ ಆಲಿಂಗಿಸಿದ ಫ್ಯಾಸಿಸ್ಟ್ ಸರ್ವಾಧಿಕಾರಿ ಅಡೋಲ್ಫ್ ಹಿಟ್ಲರ್ 80 ವರ್ಷಗಳ ಹಿಂದೆ, 1933ರಲ್ಲಿ ಇದೇ ಜನವರಿ 30ರಂದು ಜರ್ಮನಿಯ ಛಾನ್ಸಲರ್(ಅಧ್ಯಕ್ಷ)ನಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ಎಂಬುದು ಇತಿಹಾಸದ ಒಂದು ವ್ಯಂಗ್ಯವೇ ಸರಿ.

ಭಯೋತ್ಪಾದನೆಗೆ ಧರ್ಮವಿಲ್ಲ ಎಂದು ಭಾರತ ದೃಢವಾಗಿ ಹೇಳಬೇಕು. ಭಯೋತ್ಪಾದನೆ ದೇಶ-ವಿರೋಧಿ, ಅದರಿಂದಾಗಿ ಅದಕ್ಕೆ ಎಳ್ಳಷ್ಟೂ ಸಹನೆ ತೋರಬಾರದು. ಅಲ್ಲದೆ, ಎಲ್ಲ ವಿಧಗಳ ಭಯೋತ್ಪಾದನೆ ಪರಸ್ಪರ ಪೋಷಿಸಿ ಬಲಪಡಿಸುತ್ತವಷ್ಟೇ, ಅವು ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ನಾಶಗೊಳಿಸುತ್ತವೆ.

ನಮ್ಮ ದೇಶದಲ್ಲಿ ಭಯೋತ್ಪಾದನೆಯ ಪಿಡುಗನ್ನು ಸೋಲಿಸುವ ನಮ್ಮ ದೃಢ ನಿರ್ಧಾರವನ್ನು ನಾವು ಈ ದಿನದಂದು ದ್ವಿಗುಣಗೊಳಿಸಬೇಕು.

JANASHAKTHI KANNADA VARA PATRIKE FEB. 10, 2013 Price : Rs. 10/- RNI No. KARKAN /2006/17926 Posted on every Saturday
Postal Reg. No. RNP/KA/BGS/2078/2013-15 Posted at MBC Bangalore GPO

ಚೀನಾದಲ್ಲಿ ಕಾರ್ಮಿಕ ಹೋರಾಟದ ಅಲೆ ಮತ್ತು ಮೊದಲ ಅಖಿಲ ಚೀನಾ ಕಾರ್ಮಿಕ ಮಹಾಧಿವೇಶನ



ಜಿ.ಎನ್.ನಾಗರಾಜ್ 22

ಭಾರತದ ಕಾರ್ಮಿಕರು ಇಂದು ಒಂದು ಐತಿಹಾಸಿಕ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಈ ಸಂದರ್ಭದಲಿ ಚೀನಾದಲ್ಲಿ ಎದ್ದ ಮೊದಲ ಕಾರ್ಮಿಕ ಹೋರಾಟದ ಅಲೆಯ ಬಗ್ಗೆ ತಿಳಿದುಕೊಳ್ಳೋಣ. ಚೀನಾದ ಕ್ರಾಂತಿಯ ಬಗ್ಗೆ ಜಗತ್ತಿನೆಲ್ಲೆಡೆಯಲ್ಲಿ ಹರಡಿರುವ ತಪ್ಪು ಕಲ್ಪನೆಯೊಂದಿದೆ. ಅದು ಒಂದು ರೈತಾಪಿ ಜನರ ನೇತೃತ್ವದಲ್ಲಿ ನಡೆದ ಕ್ರಾಂತಿ ಎಂದು. ಬಂಡವಾಳಶಾಹೀ ವ್ಯವಸ್ಥೆಯನ್ನು ನಿರ್ಮೂಲ ಮಾಡಲು ಕಾರ್ಮಿಕರೇ ಕ್ರಾಂತಿಯ ನೇತೃತ್ವ ವಹಿಸಬೇಕು ಎಂಬ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಸುಳ್ಳು ಮಾಡಲು ಜಗತ್ತಿನಾದ್ಯಂತ ಬಂಡವಾಳಶಾಹಿಗಳು ಹೂಡುವ ತಂತ್ರಗಳು ಒಂದೆರಡಲ್ಲ. ಅದರಲ್ಲಿ ಒಂದು ಕಾರ್ಮಿಕರು ಕ್ರಾಂತಿಯ ಮುಂದಾಳುತ್ವ ವಹಿಸುವುದು ಸಾಧ್ಯವಿಲ್ಲ. ಸಮಾಜದಲ್ಲಿ, ಅದರಲ್ಲಿಯೂ ಹಿಂದುಳಿದ ದೇಶಗಳಲ್ಲಿ ಅವರು ಬಹಳ ಸಣ್ಣ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ರೈತರೇ ಬಹು ಸಂಖ್ಯಾತರು. ಆದ್ದರಿಂದ ಅವರು ಕ್ರಾಂತಿಯ ನೇತಾರರಾಗುವುದು ಸಾಧ್ಯವಿಲ್ಲ. ಚೀನಾವನ್ನು ನೋಡಿ. ಅಲ್ಲಿ ಕ್ರಾಂತಿ ಮಾಡಿದವರು ಯಾರು? ರೈತರಲ್ಲವೇ ! ಮಾವೋ ಕೂಡ ಒಬ್ಬ ರೈತ ನಾಯಕರು.... ಹೀಗೆ ಸಾಗುತ್ತದೆ ಅವರ ವಾದಗಳು. ಚೀನಾದಲ್ಲಿ ಕ್ರಾಂತಿ ಸಂಭವಿಸಿದ ಚರಿತ್ರೆಯ ವಿವರಗಳನ್ನು ತಿಳಿದುಕೊಂಡರೆ ಈ ವಾದಗಳು ತಾನೇ ತಾನಾಗಿ ಓಡಿಹೋಗುತ್ತವೆ.


ಚೀನಾದ ಮೊದಲ ಕಮ್ಯುನಿಸ್ಟ್ ಪಕ್ಷದ ಅಧಿವೇಶನದಲ್ಲಿ ಕಾರ್ಮಿಕರನ್ನು ಸಂಘಟಿಸಲು ಪಕ್ಷದ ಶಕ್ತಿಯನ್ನು ವಿನಿಯೋಗಿಸಬೇಕು. ಕಾರ್ಮಿಕ ಸಂಘಗಳ ಕಾರ್ಯದರ್ಶಿ ಮಂಡಳಿಯನ್ನು ರಚಿಸಬೇಕು ಎಂದು ತೀರ್ಮಾನಿಸಿತು. (ಅಂದಿನ ಚೀನಾದಲ್ಲಿ ಅಲ್ಲಲ್ಲಿ ತಮ್ಮಷ್ಟಕ್ಕೆ ತಾವೇ ಆಯಾ ಕಾರ್ಮಿಕರು ರೂಪಿಸಿಕೊಂಡ ಕೆಲ ಕಾರ್ಮಿಕ ಸಂಘಗಳು ಇದ್ದವು. ಇವುಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಪ್ರಭಾವ ಇರಲಿಲ್ಲ. ಇಡೀ ದೇಶ ಮಟ್ಟದ ಸಂಘಟನೆ ಯಾವುದೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾರ್ಯದರ್ಶಿ ಮಂಡಳಿಯೆಂದರೆ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಕಾರ್ಮಿಕರ ನಡುವೆ ಕೆಲಸ ಮಾಡಲು ಜವಾಬ್ದಾರಿ ನೀಡಲ್ಪಟ್ಟ ಪಕ್ಷದ ಸದಸ್ಯರ ಸಮಿತಿ)

ಚೀನಾದ ವಿವಿಧ ರಾಜ್ಯಗಳಲ್ಲಿ ಪಕ್ಷದ ಸದಸ್ಯರು ಕಾರ್ಮಿಕರ ನಡುವೆ ರಾತ್ರಿ ಶಾಲೆಗಳನ್ನು ಆರಂಭಿಸಿದರು. 'ಕಾರ್ಮಿಕ ವಾರಪತ್ರಿಕೆ' ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಇವುಗಳಲ್ಲಿ ಕಾರ್ಮಿಕರ ಅತ್ಯಂತ ಕಠಿಣ ಜೀವನ ಪರಿಸ್ಥಿತಿ, ಅವರ ವೇತನ, ಕಾರ್ಮಿಕ ಸಂಘ ಕಟ್ಟುವ, ಹೋರಾಟ ಮಾಡುವ ಹಕ್ಕಿನ ನಿರಾಕರಣೆ ಇವುಗಳ ಬಗ್ಗೆ ಲೇಖನಗಳು ಪ್ರಕಟವಾದುವು.

ಚೀನಾದ ಹಡಗು ಕಾರ್ಮಿಕರ ಸಂಘವೊಂದು ಆಗಲೇ ಆರಂಭವಾಗಿತ್ತು. ಈ ಕಾರ್ಮಿಕರ ಪರಿಸ್ಥಿತಿ ಯಾರಿಗಾದರೂ ಮನ ಕರಗುವಂತಿತ್ತು. ಅವರು ಸರಿ ಸುಮಾರು ಜೀತಗಾರರೇ ಆಗಿದ್ದರು. ಅಂದಿನ ಚೀನಾದಲ್ಲಿದ್ದ ಕಿತ್ತು ತಿನ್ನುವ ಬಡತನದ ಪರಿಸ್ಥಿತಿಯಲ್ಲಿ ಸಾವಿರಗಟ್ಟಲೇ ಸಂಖ್ಯೆಯಲ್ಲಿ ಜನರು ಹಡಗಿನಲ್ಲಿ ಕೆಲಸಗಳಿಗಾಗಿ ಮುಗಿ ಬೀಳುತ್ತಿದ್ದರು. ಅದನ್ನು ಹಡಗಿನಲ್ಲಿ ನೇಮಕಾತಿ ಮಾಡಿಕೊಳ್ಳುವ ಅಧಿಕಾರಿಗಳು, ದಲ್ಲಾಳಿಗಳು ದುರುಪಯೋಗ ಪಡಿಸಿಕೊಂಡು ಕಸ ಗುಡಿಸುವ ಕೆಲಸಗಳಿಗೂ ಅತಿ ಹೆಚ್ಚು ಲಂಚ ವಸೂಲಿ ಮಾಡಿ ಅವರನ್ನು ಹಿಂಡುತ್ತಿದ್ದರು. ನಂತರ ಅತಿ ಹೆಚ್ಚು ಶ್ರಮದ, ಅಪಾಯಕಾರಿಯಾದ ಕೆಲಸಗಳು ಚೀನೀ ಕೆಲಸಗಾರರಿಗೆ. ಆದರೆ ಸಂಬಳ ಮಾತ್ರ ಯುರೋಪು, ಅಮೇರಿಕಗಳ ಕೆಲಸಗಾರರ ಸಂಬಳದ ಐದನೇ ಒಂದು ಭಾಗ ಮಾತ್ರ, ಜೊತೆಗೆ ಅವರು ತಮ್ಮ ಸಂಕಟಗಳ ಬಗ್ಗೆ ಉಸಿರೆತ್ತುವಂತಿರಲಿಲ್ಲ.

ಚೀನಾದ ಈ ಹಡಗು ಕಾರ್ಮಿಕರೇ ಮೊದಲ ಸಮರಧೀರ ಕಾರ್ಮಿಕ ಹೋರಾಟದ ಉದ್ಘಾಟಕರಾದರು. ವಿವಿಧ ದೇಶಗಳಲ್ಲಿ ಸಂಚರಿಸುತ್ತಾ ಅಲ್ಲಿಯ ಕಾರ್ಮಿಕರು, ಅವರ ಸಂಘಟನೆ, ಸಂಘರ್ಷಗಳು, ವಿಜಯಗಳು ಇವುಗಳ ಬಗ್ಗೆ ತಿಳಿದುಕೊಳ್ಳುವ ಅವಕಾಶವಿದ್ದ ಈ ಕಾರ್ಮಿಕರಿಗೆ ಹೊಸ ಅರಿವು ಮೂಡಿ ಹೋರಾಟಕ್ಕಿಳಿದರು. ಮೊದಲ ವಿಶ್ವ ಮಹಾಯುದ್ಧದ ಕೊನೆಗೊಂಡ ಮೇಲೆ ಆ ಸಮಯದ ವಿಪರೀತ ಬೆಲೆಯೇರಿಕೆ ಮತ್ತಿತರ ಸಂಕಷ್ಟಗಳ ವಿರುದ್ಧ ಪ್ರಪಂಚದಾದ್ಯಂತ ಪ್ರಚಂಡ ಹೋರಾಟಗಳ, ದೀರ್ಘ ಮುಷ್ಕರಗಳ ಅಲೆಯೇ ಎದ್ದಿತ್ತು. ಅದು ಚೀನಾದ ಹಡಗು ಕಾರ್ಮಿಕರಿಗಲ್ಲದೇ ಬೇರಾರಿಗೆ ಮೊದಲು ತಿಳಿಯಲು ಸಾಧ್ಯ ? ಅದರಿಂದ ವರ್ಗ ಪ್ರಜ್ಞೆ ಮೂಡಿದ ಹಡಗು ಕಾರ್ಮಿಕರು ಹೋರಾಟಕ್ಕಿಳಿದರು. ನಮ್ಮ ದೇಶದಲ್ಲಿ ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿದ ಅಮೀರ್ ಹೈದರ್ ಖಾನ್‌ರವರೂ ಕೂಡ ಒಬ್ಬ ಹಡಗು ಕಾರ್ಮಿಕರೇ. ಅಮೆರಿಕದ ಹಡಗು ಕಾರ್ಮಿಕರ ಹೋರಾಟದಿಂದ ಸ್ಫೂರ್ತಿ ಪಡೆದು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು ಎಂಬುದನ್ನು ನೆನೆಪಿಸಿಕೊಳ್ಳೋಣ.

ಜನವರಿ 12, 1922 ರಂದು ಚೀನಾದ ದ್ವೀಪ ಪ್ರದೇಶವಾಗಿ ದೊಡ್ಡ ಬಂದರಾಗಿದ್ದ ಹಾಂಗ್‌ಕಾಂಗ್‌ನಲ್ಲಿ ಹಡಗುಗಳ ಕಾರ್ಮಿಕರು ಮುಷ್ಕರ ಘೋಷಿಸಿದರು. ಸಂಬಳದ ಏರಿಕೆ, ಕಾರ್ಮಿಕರ ನೇಮಕಾತಿಯಲ್ಲಿ ಕಾರ್ಮಿಕ ಸಂಘಗಳು ಕೆಲಸಗಾರರನ್ನು ಶಿಫಾರಸು ಮಾಡಲು ಅವಕಾಶ (ನೇಮಕಾತಿಯಲ್ಲಿ ನಡೆಯುತ್ತಿದ್ದ ಸುಲಿಗೆಯನ್ನು ತಪ್ಪಿಸಲು) ಅವರ ಮುಖ್ಯ ಬೇಡಿಕೆಯಾಗಿತ್ತು. ಹಡಗು ಕಾರ್ಮಿಕರ ಈ ಮುಷ್ಕರಕ್ಕೆ ತಕ್ಷಣವೇ ಅವರೊಂದಿಗೆ ಬೆಸೆದುಕೊಂಡಿದ್ದ ಸಾರಿಗೆ ಕಾರ್ಮಿಕರ ಬೆಂಬಲ ಸಿಕ್ಕಿತು. ಒಟ್ಟು 30,000 ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಆಡಳಿತದಲ್ಲಿದ್ದ ಹಾಂಗ್‌ಕಾಂಗ್ ಸರ್ಕಾರ ಪೋಲೀಸ್ ದೌರ್ಜನ್ಯ, ಕಾರ್ಮಿಕ ನಾಯಕರಿಗೆ ಲಂಚ ಕಾರ್ಮಿಕರ ನಡುವೆ ಜಗಳ ತಂದಿಕ್ಕುವುದು ಬೇರೆ ಕಾರ್ಮಿಕರನ್ನು ನೇಮಿಸಿಕೊಳ್ಳ ಪ್ರಯತ್ನ ಮಾತುಕತೆಗಳ ಹೆಸರಿನಲ್ಲಿ ಮೋ ಇತ್ಯಾದಿ ಅನೇಕ ಕುತಂತ್ರಗಳನ್ನು ಬಳಸಿತು ಆದರೂ ಮುಷ್ಕರವನ್ನು ಮುರಿಯಲಾಗಲಿಲ್ಲ ಕಾರ್ಮಿಕ ಸಂಘವನ್ನು ಮುಚ್ಚಲು ಆ ಹೊರಡಿಸಿದರು.



ಚೀನಾದ ಹಡಗು ಕಾರ್ಮಿಕರ ಸಂಘದ ಮುಷ್ಕರ – 1922

ಮುಷ್ಕರ ನಾಲ್ಕಾರು ವಾ ಮುಂದುವರೆಯಿತು. ಆಗ ಫೆಬ್ರವರಿ ತಿಂಗ ಕೊನೆಯಲ್ಲಿ ಇಡೀ ಹಾಂಗ್‌ಕಾಂಗ್ ಕಾರ್ಮಿಕರು ಹಡಗು ಕಾರ್ಮಿಕರ ಮುಷ್ಕರ ಬೆಂಬಲವಾಗಿ ಸಾರ್ವತ್ರಿಕ ಮುಷ್ಕ ಘೋಷಿಸಿದರು. 60,000 ಕಾರ್ಮಿಕರ ಇದರಲ್ಲಿ ಪಾಲ್ಗೊಂಡರು. ಇಡಿ ಹಾಂಗ್‌ಕಾಂಗ್ ಸ್ತಬ್ಧವಾಯಿತು. ಅಲಿಯ ದೌರ್ಜನ್ಯವನ್ ತಾಳಲಾರದೆ ಚೀನ ಇತರೆ ನಗರಗಳಿ ಓಡಿಹೋಗಲ ಯತ್ನಿಸಿದ ಕಾರ್ಮಿಕ ಮೇಲೆ ಗುಂಡಿ ಮಳೆಗರೆಯಲಾಯಿತ ಹಲವಾರು ಮಂ ಕಾರ್ಮಿಕರು ಸತ ಹೋದರು. ಇಡ ಚೀನಾದಲ್ಲಿ ಮುಷ್ಕರ ಬೆಂಬಲವಾ ಸೌಹಾರ್ದ ಸಮಿತಿಗ ರಚನೆಗೊಂಡವು. ಹ ಸಂಗ್ರಹಿಸಿ ಹೋರಾಟಗ ಮೂಲಕ ಚೀನಾದ ಕಾರ್ಮಿಕರನ್ನು ಜನ ಬೆಂಬಲಿಸಿದರು. ವಿದೇಶಗಳಲ್ಲಿ ಚೀನೀಯರೂ ಹಣ ಸಂಗ್ರಹಿ ಕಳುಹಿಸಿಕೊಟ್ಟರು. ವಿಶ್ವದ ಅನೇಕ ಕಾರ್ಮಿ ಸಂಘಗಳಿಂದ ಬೆಂಬಲದ ಪತ್ರಗಳು ಹರಿ ಬಂದವು.

ಕೊನೆಯಲ್ಲಿ ಬ್ರಿಟಿಷ್ ಆಡಳಿ ತಲೆಬಾಗಬೇಕಾಯಿತು. ಸಂಘದ ಕೇಂ ಕಚೇರಿಯನ್ನು ಮುಚ್ಚಿದ್ದನ್ ಹಿಂತೆಗೆದುಕೊಳ್ಳಲಾಯಿತು. ಬಂಧಿ ಕಾರ್ಮಿಕರ ಬಿಡುಗಡೆ, ಸತ್ತ, ಗಾಯಗೊಂ ಕಾರ್ಮಿಕರಿಗೆ ಪರಿಹಾರ, ಶೇ. 15 ರಿಂದ ರಷ್ಟು ಸಂಬಳ ಏರಿಕೆಯನ್ನು ನೀಡ

ಪುಟ 1

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH